

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 18 ಭಾನುವಾರ 2022

ಸಂಪುಟ: 43 | ಸಂಚಿಕೆ: 153 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಸೆ.26ರಿಂದ ಅ.9ರವರೆಗೆ ದಸರಾ ರಜೆ

ಮೈಸೂರು, ಸೆ.17(ಎಸ್‌ಪಿಎನ್)– 2022–23ನೇ ಸಾಲಿನ ಮೈಸೂರು ಜಿಲ್ಲೆಗೆ ಸೀಮಿತವಾಗಿ ಅ.3ರಿಂದ ಅ.16ರವರೆಗೆ ನೀಡಿದ್ದ ದಸರಾ ರಜೆಯನ್ನು ಮಾರ್ಪಡಿಸಿ, ಪ್ರಸಕ್ತ ಸಾಲಿನ ಸೆ.26ರಿಂದ ಅ.9ರವರೆಗೆ ಪರತ್ತು ವಿಧಿಸಿ ನಿಗದಿಪಡಿಸಲಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪ ನಿರ್ದೇಶಕ ರಾಮಚಂದ್ರರಾಜೇ ಅರಸ್ ತಿಳಿಸಿದ್ದಾರೆ.

ಈ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ವಾರ್ಷಿಕ ಕಾರ್ಯಸೂಚಿ ಪ್ರಕಾರ ದಸರಾ ರಜಾ ಅವಧಿಯನ್ನು ಅ.3ರಿಂದ ಅ.16ರವರೆಗೆ ಮೊದಲು ನಿಗದಿಪಡಿಸಲಾಗಿತ್ತು. ಆದರೆ, ಮೈಸೂರಿನಲ್ಲಿ ನವರಾತ್ರಿ ಕಾರ್ಯಕ್ರಮಗಳು ಸೆ.26ರಿಂದ ಆರಂಭವಾಗಲಿವೆ. ಈ ಹಿನ್ನೆಲೆಯಲ್ಲಿ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಬಿ.ಸಿ.ನಾಗೇಶ್ ಸ್ಥಳೀಯರ ಬೇಡಿಕೆಗೆ ಅನುಗುಣವಾಗಿ ರಜೆಯನ್ನು ಮಾರ್ಪಡಿಸುವಂತೆ ಆಯಾಯ ಜಿಲ್ಲಾಧಿಕಾರಿ ಅಥವಾ ಜಿಪಂ ಸಿಇಓ ಅವರಿಗೆ ಅಧಿಕಾರ ನೀಡಿದ್ದರು. ಈ ಹಿನ್ನೆಲೆಯಲ್ಲಿ ಮೈಸೂರು ಜಿಪಂ ಸಿಇಓ ಅವರ ಮಾರ್ಗದರ್ಶನ ▶ 9ನೇ ಪುಟಕ್ಕೆ

ನಂಜನಗೂಡಲ್ಲಿ ಹಾಡಹಗಲೇ ಪಾರ್ಸಲ್ ಕೊಡುವ ನೆಪದಲ್ಲಿ ಮನೆಗೆ ನುಗ್ಗಿ ಚಿನ್ನಾಭರಣ ದರೋಡೆ


ಕೊಲೆ ಮಾಡುವುದಾಗಿ ಮಹಿಳೆಗೆ ಬೆದರಿಕೆ

ನಂಜನಗೂಡು, ಸೆ.17– ಪಾರ್ಸಲ್ ಕೊಡುವ ನೆಪದಲ್ಲಿ ಬಂದ ಇಬ್ಬರು ಅಪರಿಚಿತರು ಹಾಡಹಗಲೇ ಮಹಿಳೆಯೊಬ್ಬರನ್ನು ಕಟ್ಟಿಹಾಕಿ, ಚಿನ್ನಾಭರಣ ದೋಚಿ ಪರಾರಿಯಾಗಿರುವ ಘಟನೆ ಶನಿವಾರ ನಗರದ ರಾಮಸ್ವಾಮಿ ಲೇಔಟ್‌ನಲ್ಲಿ ನಡೆದಿದೆ. ರಾಮಸ್ವಾಮಿ ಲೇಔಟ್ ನಿವಾಸಿ ಶಂಭುಸ್ವಾಮಿ ಅವರ ಪತ್ನಿ ದಾಕ್ಷಾಯಿಣಿ ಚಿನ್ನಾಭರಣ ಕಳೆದುಕೊಂಡವರಾಗಿದ್ದು, ದರೋಡೆಕೋರರು ಸುಮಾರು 200 ಗ್ರಾಂ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ.



ವಿವರ: ವೃತ್ತಿಯಲ್ಲಿ ಶಿಕ್ಷಕರಾದ ಇವರ ▶ 9ನೇ ಪುಟಕ್ಕೆ







ಭಾರತದಲ್ಲಿ 70 ವರ್ಷದ ಹಿಂದೆ ನಶಿಸಿದ್ದ ಚೀತಾ ಸಂತತಿ

ಆಫ್ರಿಕಾದಿಂದ ಕರೆತಂದ 8 ಚೀತಾಗಳಿಗೆ ಪ್ರಧಾನಿ ಮೋದಿ ಸಂತಸದ ಸ್ವಾಗತ

- ಮೋದಿ ಅವರ 72ನೇ ಹುಟ್ಟುಹಬ್ಬ ವಿಶೇಷವಾಗಿಸಿದ ಹೊಸ ಅತಿಥಿಗಳು
- ಕೈಯಲ್ಲಿ ಕ್ಯಾಮರಾ ಹಿಡಿದು ಸಡಗರದಿಂದ ಚೀತಾಗಳ ಚಿತ್ರ ಸೆರೆ ಹಿಡಿದ ಪ್ರಧಾನಿ

ಗ್ವಾಲಿಯರ್(ಮಧ್ಯಪ್ರದೇಶ), ಸೆ.17– ಭಾರತದಿಂದ ಮರೆಯಾಗಿದ್ದ ಚೀತಾಗಳು ಏಳು ದಶಕದ ನಂತರ ಸ್ವಾತಂತ್ರ್ಯ ಅಮೃತಮಹೋತ್ಸವದ ಸಂದರ್ಭದಲ್ಲಿ ಮರಳಿದ್ದು, ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬ ಆಚರಣೆಯನ್ನೂ ವಿಶೇಷವಾಗಿಸಿದೆ. ಭಾರತದಲ್ಲಿ ಚೀತಾಗಳು ಅಳಿವಿನಂಚಿನಲ್ಲಿವೆ ಎಂದು 70 ವರ್ಷಗಳ ಹಿಂದೆ 1952ರಲ್ಲಿ ಘೋಷಿಸಲಾಗಿತ್ತು. ನಂತರ ಚೀತಾ ಸಂತತಿಯೇ ಕಾಣದಾಗಿತ್ತು. ಆದರೆ ಇದೀಗ ಪ್ರಧಾನಿ ಮೋದಿ ಅವರ 72ನೇ ಹುಟ್ಟುಹಬ್ಬದ ಸಂಭ್ರಮದಲ್ಲಿ ನೈರುತ್ಯ ಆಫ್ರಿಕಾದ ನಮೀಬಿಯಾ ದೇಶದಿಂದ ಎಂಟು ಚೀತಾಗಳು ಭಾರತಕ್ಕೆ ಶನಿವಾರ ಮರಳಿವೆ. ಅಂತರಖಂಡ 'ಪ್ರಾಜೆಕ್ಟ್ ಚೀತಾ' ಯೋಜನೆಯಡಿ ▶ 9ನೇ ಪುಟಕ್ಕೆ

ದೇಶದಲ್ಲಿ ಮತ್ತೆ ಚೀತಾ ಯುಗಾರಂಭ!

ಚೀತಾಗಳನ್ನು ಕ್ವಾರಂಟೈನ್ ಆವರಣಕ್ಕೆ ಬಿಡುಗಡೆ ಮಾಡಿದ ವೇಳೆ ಪ್ರಧಾನಿ ಮೋದಿ ಸಂತಸ ಹಂಚಿಕೊಂಡರು. ಏಳು ದಶಕಗಳ ನಂತರ ಚೀತಾಗಳು ಭಾರತದ ನೆಲಕ್ಕೆ ಮರಳಿವೆ. ಈ ಐತಿಹಾಸಿಕ ಕ್ಷಣದಲ್ಲಿ ನಾನು ಎಲ್ಲಾ ಭಾರತೀಯರನ್ನು ಅಭಿನಂದಿಸುತ್ತೇನೆ. ನಮೀಬಿಯಾ ಸರ್ಕಾರಕ್ಕೆ ಧನ್ಯವಾದ ತಿಳಿಸುತ್ತೇನೆ. ಅವರ ಸಹಾಯವಿಲ್ಲದೆ ಚೀತಾ ಇಂದು ಭಾರತಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ ಏಳು ದಶಕಗಳ ಹಿಂದೆ ಜೀವ ವೈವಿಧ್ಯದ ಹಳೆಯ ಕೊಂಡಿಯಾದ ಚೀತಾ ಇಲ್ಲಿ ಅಳಿದುಹೋಗಿತ್ತು. ಆದರೆ ಇಂದು ಮತ್ತೆ ಚೀತಾ ಯುಗ ಪ್ರಾರಂಭವಾಗಿದೆ ಎಂದು ಹೇಳಿದರು. ಭಾರತದಲ್ಲಿ ಚೀತಾಗಳನ್ನು ಮರು ಸಂಪರ್ಕಿಸುವ ಅವಕಾಶ ನಮಗೆ ಸಿಕ್ಕಿದೆ. ಈ ಚೀತಾಗಳ ▶ 9ನೇ ಪುಟಕ್ಕೆ

ದೇಶದ ಸಮಸ್ಯೆಗಳ ನಿವಾರಣೆ, ಜನರ ಆಶೋತ್ತರಗಳ ಈಡೇರಿಕೆಗೆ

ಇನ್ನಷ್ಟು ಕಾಲ ಮೋದಿಯವರೇ ಪ್ರಧಾನಿಯಾಗಿರಬೇಕು

- ಮಾಜಿ ಮುಖ್ಯಮಂತ್ರಿ, ನಾಡಿನ ಮುತ್ಸದ್ದಿ ರಾಜಕಾರಣಿ ಎಸ್.ಎಂ.ಕೃಷ್ಣ ಮಹಾ ಆಶಯ
- ಪ್ರಧಾನಿ ಮೋದಿ ದೇಶಕ್ಕೆ ಯುಗಪುರುಷನಿದ್ದಂತೆ; ದೇಶವನ್ನು ಉತ್ತಮವಾಗಿ ನಡೆಸುತ್ತಿದ್ದಾರೆ
- ಮೋದಿ ಜನ್ಮದಿನದ ಅಂಗವಾಗಿ ಕೆ.ಆರ್.ಕ್ಷೇತ್ರದಲ್ಲಿ ಶಾಸಕ ರಾಮದಾಸ್ ಏರ್ಪಡಿಸಿದ್ದ ಮೋದಿ ಯುಗ್ ಉತ್ಸವದಲ್ಲಿ ಜನಪರ ಯೋಜನೆಗೆ ಕೃಷ್ಣ ಚಾಲನೆ



ಮೈಸೂರು, ಸೆ.17(ಎಂಟಿವೈ)– ದೇಶಕ್ಕೆ ಪ್ರಧಾನಿ ನರೇಂದ್ರ ಮೋದಿ ಯುಗಪುರುಷನಿದ್ದಂತೆ. ದೇಶದ ಸಮಸ್ಯೆಗಳ ನಿವಾರಣೆಗೆ ಹಾಗೂ ಜನರ ಆಶೋತ್ತರಗಳ ಈಡೇರಿಕೆಗೆ ಅವರು ಇನ್ನಷ್ಟು ಕಾಲ ಪ್ರಧಾನಿಯಾಗಿ ಮುಂದುವರೆಯಬೇಕು ಎಂದು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕೆ.ಆರ್.ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ವಿದ್ಯಾರಣ್ಯಪುರಂನ ರಾಮಲಿಂಗೇಶ್ವರ ದೇವಾಲಯದ ಉದ್ಯಾನದಲ್ಲಿ ಶನಿವಾರ ಆಯೋಜಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದ ಅರ್ಹ ಫಲಾನುಭವಿಗಳಿಗೆ ಪ್ರಮಾಣ ಪತ್ರ ವಿತರಿಸಿ ಮಾತನಾಡಿದ ಅವರು, ಕಳೆದ ಎಂಟು ವರ್ಷದ ಹಿಂದೆ ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡರು. ಆಗ ದೇಶದ ಜನತೆ ಭಾರೀ ನಿರೀಕ್ಷೆಯಲ್ಲಿದ್ದರು. ಅವರ ನಿರೀಕ್ಷೆಯಂತೆ ದೇಶವನ್ನು ಉತ್ತಮವಾಗಿ ಮುನ್ನಡೆಸುತ್ತಿದ್ದಾರೆ. ಮೋದಿಯಂತಹ ನಾಯಕರು ಆಗೊಮ್ಮೆ, ಈಗೊಮ್ಮೆ ಹುಟ್ಟುತ್ತಾರೆ ಎಂದರು.

ಪ್ರಧಾನಿ ಮೋದಿ, ದೇಶದ ಅಭಿವೃದ್ಧಿಗೆ ಹಲವು ಚಿಂತನೆ, ದೂರದೃಷ್ಟಿವುಳ್ಳ ಹೆಮ್ಮೆಯ ನಾಯಕ, ಇವರೊಬ್ಬ ಯುಗಪುರುಷ. ಅವರು ಆಚಾರ–ವಿಚಾರಗಳಲ್ಲಿ ಒಬ್ಬ ತಪಸ್ವಿಯಾಗಿದ್ದಾರೆ. ಇಂಥ ಒಬ್ಬ ನಾಯಕ, ನಮ್ಮ ದೇಶದ ಪ್ರಧಾನಿ ಆಗಿರುವುದು ನಮ್ಮೆಲ್ಲರ ಪುಣ್ಯ. ಇಂಥ ಒಬ್ಬ ಯುಗಪುರುಷನ ಜೊತೆ ನಮ್ಮ ದೇಶದ ▶ 9ನೇ ಪುಟಕ್ಕೆ

ಅದ್ದೂರಿ ಮೈಸೂರು ದಸರಾಗೆ ಇನ್ನೆರಡು ದಿನದಲ್ಲಿ ಸಿದ್ಧತೆ ಪೂರ್ಣ

- ಉಸ್ತುವಾರಿ ಸಚಿವ ಸೋಮಶೇಖರ್ ಮಾಹಿತಿ
- 35 ಕೋಟಿ ವೆಚ್ಚದಲ್ಲಿ ಈ ಬಾರಿ ದಸರಾ ಆಚರಣೆ
- ರಾಷ್ಟ್ರಪತಿ ಭವನದ ನಿರ್ದೇಶನದಂತೆ ಉದ್ಘಾಟನಾ ಕಾರ್ಯಕ್ರಮ ಸಂಯೋಜನೆ
- ಗೋಲ್ಡ್ ಕಾರ್ಡ್ ಸಂಬಂಧ ಸೂಕ್ತ ನಿರ್ಧಾರ; ಪಾಸ್ ಗೊಂದಲಕ್ಕೆ ಈ ಬಾರಿ ಆಸ್ಪದ ಇಲ್ಲ



ಮೈಸೂರು, ಸೆ.17(ಎಸ್‌ಬಿಡಿ)–ಮೈಸೂರು ದಸರಾ ಮಹೋತ್ಸವವನ್ನು 35 ಕೋಟಿ ರೂ. ವೆಚ್ಚದಲ್ಲಿ ಅದ್ದೂರಿಯಾಗಿ ಆಚರಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಮೈಸೂರು ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ದಸರಾ ಸಿದ್ಧತೆ ಬಗ್ಗೆ ಎಲ್ಲಾ ಉಪಸಮಿತಿ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಬಾರಿ ಅದ್ದೂರಿಯಾಗಿ ದಸರಾ ಆಚರಿಸಲು ನಿರ್ಧರಿಸಲಾಗಿದ್ದು, ಅರಮನೆ ಮಂಡಳಿಯಿಂದ 5 ಕೋಟಿ ರೂ. ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ 10 ಕೋಟಿ ರೂ. ಹಣ ವ್ಯಯಿಸಲು ಸರ್ಕಾರ ಈಗಾಗಲೇ ಅನುಮೋದನೆ ನೀಡಿದೆ. ಜೊತೆಗೆ ಸರ್ಕಾರದ ವತಿಯಿಂದ 4ಜಿ ತೆರಿಗೆ ವಿನಾಯ್ತಿಯಡಿ 15 ಕೋಟಿ ರೂ. ಹಾಗೂ ಅತ್ಯಾಕರ್ಷಕ ವಿದ್ಯುತ್ ದೀಪಾಲಂಕಾರಕ್ಕಾಗಿ ಸೆಸ್ಕ್‌ಗೆ 4.50 ಕೋಟಿ ರೂ. ಬಿಡುಗಡೆ ಮಾಡಲಾಗುತ್ತಿದೆ. ಒಟ್ಟಾರೆ 34.50 ಕೋಟಿ ರೂ. ವೆಚ್ಚದಲ್ಲಿ ಈ ಬಾರಿ ದಸರಾವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸಲು ಎಲ್ಲಾ ರೀತಿಯ ತಯಾರಿ ಮಾಡಿಕೊಳ್ಳಲಾಗುತ್ತಿದೆ. ಇನ್ನೆರಡು ದಿನಗಳಲ್ಲಿ ಸಿದ್ಧತಾ ಕಾರ್ಯ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ವಿವರಿಸಿದರು.

ರಾಷ್ಟ್ರಪತಿಗೆ ಆಹ್ವಾನ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೆ.26ರ ಬೆಳಗ್ಗೆ 9.45ರಿಂದ ▶ 7ನೇ ಪುಟಕ್ಕೆ

ದಸರೆಯಲ್ಲಿ 'ಅಪ್ಪು' ನೆನಪು

ದಸರಾ ವಸ್ತು ಪ್ರದರ್ಶನದಲ್ಲಿ ಮರಳಿನಲ್ಲಿ ಪುನೀತ್ ರಾಜ್‌ಕುಮಾರ್ ಆಕೃತಿ ನಿರ್ಮಿಸಲಾಗಿದೆ. ವಿದ್ಯುತ್ ದೀಪಾಲಂಕಾರದಲ್ಲೂ ಪುನೀತ್ ಆಕೃತಿ ಸೃಷ್ಟಿಯಾಗಲಿದೆ. ಸೆ.27ರಿಂದ 'ಯುವ ದಸರಾ' ಆರಂಭವಾಗಲಿದ್ದು, ಅ.1ರಂದು ಅಪ್ಪು ಪುನೀತ್ ಹಾಡಿರುವ ಹಾಗೂ ಅಭಿನಯಿಸಿರುವ ಗೀತ ಗಾಯನ ನಡೆಯಲಿದೆ. ಚಲನಚಿತ್ರೋತ್ಸವದಲ್ಲಿ ಸೆ.27ರಂದು ಅಪ್ಪು ಅಭಿನಯದ ಚಿತ್ರಗಳ ಪ್ರದರ್ಶನ ಏರ್ಪಡಿಸಿದ್ದು, ಅವರ ಪತ್ನಿ ಅಶ್ವಿನಿ ಉದ್ಘಾಟನೆ ನೆರವೇರಿಸಲು ಒಪ್ಪಿಗೆ ಸೂಚಿಸಿದ್ದಾರೆ ಎಂದು ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಕಾಂಬೋ ಟಿಕೆಟ್ ವ್ಯವಸ್ಥೆ

ದಸರಾ ದಟ್ಟಣೆಯಲ್ಲಿ ಪ್ರವಾಸಿ ಸ್ಥಳದಲ್ಲಿ ಸರತಿಯಲ್ಲಿ ನಿಂತು ಟಿಕೆಟ್ ಕೊಳ್ಳುವುದಕ್ಕೇ ಹೆಚ್ಚು ಸಮಯ ಬೇಕಾಗುತ್ತದೆ. ಹೀಗೆ ಸಮಯ ವ್ಯರ್ಥವಾಗದಂತೆ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಈ ಬಾರಿ 'ಕಾಂಬೋ ಟಿಕೆಟ್' ಹೊರತರಲಾಗಿದೆ. ಮೈಸೂರು ಅರಮನೆ, ಚಾಮುಂಡಿಬೆಟ್ಟ, ಕೆ.ಆರ್.ಎಸ್, ಮೃಗಾಲಯ, ರೈಲ್ವೆ ಮ್ಯೂಸಿಯಂ ಸೇರಿದಂತೆ 8 ಸ್ಥಳಗಳಲ್ಲಿ ಒಂದೇ ಟಿಕೆಟ್ ಬಳಕೆ ಮಾಡಬಹುದು. ವಯಸ್ಕರು 500 ಹಾಗೂ ಮಕ್ಕಳು 250 ರೂ. ಪಾವತಿಸಿ 'ಕಾಂಬೋ ಟಿಕೆಟ್' ಪಡೆಯಬಹುದು ಎಂದು ಸಚಿವರು ಹೇಳಿದರು.

ನಾಡಿನ ಸಂಸ್ಕೃತಿ, ವೀರ ಯೋಧರ ಸಾಹಸ, ಸಾಧಕ ಮಹಿಳೆಯರ ಸ್ಮರಣೆಗೆ ಸಾಕ್ಷಿಯಾದ 'ಯುವ ಸಂಭ್ರಮ' ■ ಪುಟ–10



ಕಂಟ್ರಾಕ್ಟರ್‌ಗಳು 40% ಕಮಿಷನ್ ಆರೋಪ ಮಾಡಲು ನೀವೇ ಕಾರಣ...!

- ಕೆಡಿಪಿ ಸಭೆಯಲ್ಲಿ ಇಂಜಿನಿಯರ್‌ಗಳ ವಿರುದ್ಧ ಜಿಲ್ಲಾ ಉಸ್ತುವಾರಿ ಸಚಿವ ಸೋಮಶೇಖರ್ ಕಿಡಿನುಡಿ
- ಶಾಸಕರುಗಳಿಂದ ಗ್ರಾಮೀಣ ರಸ್ತೆಗಳ ಅಧೋಗತಿಯ ಬಗ್ಗೆ ವ್ಯಾಪಕ ದೂರು

ಮೈಸೂರು, ಸೆ. 17(ಆರ್‌ಕೆ)–ನಿಮ್ಮ ನಿರ್ಲಕ್ಷ್ಯತೆಯಿಂದಾಗಿ ಗುತ್ತಿಗೆದಾರರು ಬಹಿರಂಗವಾಗಿ ಸರ್ಕಾರದ ವಿರುದ್ಧ 40 ಪರ್ಸೆಂಟ್ ಕಮಿಷನ್ ಆರೋಪ ಮಾಡುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಇಂಜಿನಿಯರ್‌ಗಳನ್ನು ತರಾಟೆಗೆ ತೆಗೆದುಕೊಂಡರು.

ಮೈಸೂರಿನ ಜಿಲ್ಲಾ ಪಂಚಾಯ್ತಿಯಲ್ಲಿ ಇಂದು ನಡೆದ ಜಿಲ್ಲಾ ಮಟ್ಟದ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಅಭಿವೃದ್ಧಿ ಕಾಮಗಾರಿಗಳ ಸಂಬಂಧ ಕಾಲ ಕಾಲಕ್ಕೆ ಎಸ್ಟಿಮೇಟ್ ತಯಾರಿಸಿ, ವರ್ಕ್ ಆರ್ಡರ್ ಕೊಟ್ಟು ನಿಯಮಾನುಸಾರ ಬಿಲ್ ಪಾವತಿಸಿದ್ದರೆ ಗುತ್ತಿಗೆದಾರರಿಂದ 40 ಪರ್ಸೆಂಟ್ ಕಮಿಷನ್ ಮಾತುಗಳನ್ನು ಕೇಳಬೇಕಾಗಿರಲಿಲ್ಲ. ಇಂಜಿನಿಯರ್‌ಗಳ ನಿರ್ಲಕ್ಷ್ಯದಿಂದಾಗಿ ಈ ಬಗೆಯ ಪ್ರಮಾದವಾಗುತ್ತಿದೆ ಎಂದು ಕಿಡಿಕಾರಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಲೋಕೋಪಯೋಗಿ, ಜಲ ಸಂಪನ್ಮೂಲ, ಸಣ್ಣ ನೀರಾವರಿ ಸೇರಿದಂತೆ ಇತರ ಇಲಾಖೆಗಳ ರಸ್ತೆ, ಕೆರೆ ಅಭಿವೃದ್ಧಿ, ಸೇತುವೆ ರಿಪೇರಿ ಹಾಗೂ ವಿವಿಧ ಸಿವಿಲ್ ಕಾಮಗಾರಿಗಳ ವಿಳಂಬ, ಲೋಪದೋಷಗಳ ಸಂಬಂಧ ಶಾಸಕರು ಪ್ರಸ್ತಾಪಿಸಿ ಸಮಸ್ಯೆಗಳನ್ನು ಮುಂದಿಟ್ಟು ಅಸಮಾಧಾನ ವ್ಯಕ್ತಪಡಿಸಿದ್ದರಿಂದ ಆಕ್ರೋಶಗೊಂಡ ಸಚಿವರು,



ಅರ್ಜಿ ದಿಲ್ಲಿಗೆ ಹೋದರೆ ಸ್ಮಶಾನಕ್ಕೆ ಹೋದಂತೆ

ಅರಣ್ಯ ಪ್ರದೇಶದಲ್ಲಿರುವ ಹಾಲಿ ರಸ್ತೆಗೆ ಡಾಂಬರೀಕರಣ ಮಾಡಲು ಅನುಮತಿ ಕೋರಿದರೆ, ದೆಹಲಿಗೆ ಅರ್ಜಿ ರವಾನಿಸುತ್ತೇವೆ ಎಂದು ಅರಣ್ಯಾಧಿಕಾರಿಗಳು ಹೇಳುತ್ತಾರೆ ಎಂದು ಇಂಜಿನಿಯರ್‌ಗಳು ಅಳಲು ತೋಡಿಕೊಂಡಾಗ ಮಧ್ಯ ಪ್ರವೇಶಿಸಿದ ಎಸ್.ಟಿ. ಸೋಮಶೇಖರ್, ಈಗಾಗಲೇ ಇರುವ ರಸ್ತೆ ರಿಪೇರಿ ಮಾಡಲು ಅನುಮತಿ ಏಕೆ ಬೇಕು? ಅರಣ್ಯ ಇಲಾಖೆ ಅಧಿಕಾರಿಗಳು ಆಕಾಶದಿಂದ ಇಳಿದವರಂತೆ ವರ್ತಿಸುತ್ತಾರೆ. ಅರ್ಜಿ ದಿಲ್ಲಿಗೆ ಹೋದರೆ ಸ್ಮಶಾನಕ್ಕೆ ಹೋದಂತೆ ಎಂದು ಕಿಡಿಕಾರಿದರು.

ಇಂಜಿನಿಯರ್‌ಗಳು ಸರಿಯಾಗಿ ಕೆಲಸ ಮಾಡಿ ಗುತ್ತಿಗೆದಾರರ ಮೇಲೆ ಹಿಡಿತ ಸಾಧಿಸಿದ್ದರೆ ಇಂತಹ ಆರೋಪಗಳು ಕೇಳಿಬರುತ್ತಿರಲಿಲ್ಲ ಎಂದರು. ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ವರ್ಕ್ ಆರ್ಡರ್ ಕೊಟ್ಟೂ ಕೆಲಸ ಮಾಡದಿದ್ದರೆ ಆ ಗುತ್ತಿಗೆದಾರನನ್ನು ಕಪ್ಪು ಪಟ್ಟಿಗೆ ಸೇರಿಸಬೇಕು, ರಸ್ತೆ ಮಾಡಲು ಅರಣ್ಯ ಇಲಾಖೆಯವರು ▶ 7ನೇ ಪುಟಕ್ಕೆ

ಮನೆ ಕೆಡವಿ ಪರಿಹಾರಕ್ಕೆ ಅರ್ಜಿ!

ಮೈಸೂರು, ಸೆ.17(ಆರ್‌ಕೆ)–ಮಳೆ ನೆಪದಲ್ಲಿ ಇರುವ ಮನೆ ಕೆಡವಿ ನಷ್ಟ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಲಾಗುತ್ತಿದೆ ಎಂಬ ದೂರುಗಳು ಬರುತ್ತಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದ್ದಾರೆ. ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಇತ್ತೀಚೆಗೆ ಸುರಿದ ಮಳೆ ಹಾನಿಯಿಂದ ಬೆಳೆ ಹಾನಿ ಹಾಗೂ ಮನೆಗಳು ಉರುಳಿ ಬಿದ್ದು, ಭಾರೀ ನಷ್ಟವಾಗಿದೆ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಸ್ಥಳ ಮಹಜರು ನಡೆಸಿ ನಿಜವಾಗಲೂ ನಷ್ಟವಾಗಿರುವ ರೈತರು, ಮನೆ ವಾರಸುದಾರರ ಬ್ಯಾಂಕ್ ಖಾತೆಗೆ ಪರಿಹಾರದ ಹಣವನ್ನು ಜಮಾ ಮಾಡುತ್ತಿರುವುದು ಸರಿಯಷ್ಟೇ ಎಂದರು. ಆದರೆ ಮಳೆ ನೆಪದಲ್ಲಿ ಕೆಲವರು ರಾತ್ರೋರಾತ್ರಿ ಚೆನ್ನಾಗಿರುವ ಮನೆಯನ್ನು ಉರುಳಿಸಿ ಫೋಟೋ ತೆಗೆದು, ವಿಡಿಯೋ ಮಾಡಿ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸುತ್ತಿದ್ದಾರಲ್ಲದೆ, ಅಂತಹ ಕೆಲ ಮನೆ ಮಾಲೀಕರಿಗೆ ಈಗಾಗಲೇ ನಷ್ಟ ಪರಿಹಾರದ ಹಣವನ್ನು ಪಾವತಿಸಲಾಗಿದೆ ಎಂಬ ದೂರುಗಳು ಕೇಳಿಬರುತ್ತಿವೆ ▶ 7ನೇ ಪುಟಕ್ಕೆ

ದಿವಾನ್ ಪೂರ್ಣಯ್ಯ ನಾಲೆ ಒತ್ತುವರಿ ತೆರವಿಗೆ ಜಿಟಿಡಿ ಮನವಿ

ಮೈಸೂರು, ಸೆ.17(ಆರ್‌ಕೆ)–ಮಳೆ ನೀರು ಹಾದು ಹೋಗಲು ಅಡ್ಡಿಯಾಗಿರುವ ದಿವಾನ್ ಪೂರ್ಣಯ್ಯ ನಾಲೆ ಒತ್ತುವರಿ ತೆರವುಗೊಳಿಸಿ ಎಂದು ಶಾಸಕ ಜಿ.ಟಿ.ದೇವೇಗೌಡ ಅವರು ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಮಾಡಿದರು.

ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಕೆಡಿಪಿ ಸಭೆಯಲ್ಲಿ ಉಪಸ್ಥಿತರಿದ್ದ ಅವರು, ಮಳೆಯಿಂದಾಗಿ ತಮ್ಮ ಕ್ಷೇತ್ರ ವ್ಯಾಪ್ತಿಯ ಕೆ.ಹೆಮ್ಮನಹಳ್ಳಿ ಸೇರಿದಂತೆ ಹಲವು ಗ್ರಾಮಗಳ ಕೆರೆಗಳ ಕೋಡಿ ಒಡೆದು ನೀರು ನುಗ್ಗಿ ತೊಂದರೆಯಾಗಿದೆ. ಅದಕ್ಕೆ 35 ಅಡಿ ಅಗಲವಿರುವ ಪೂರ್ಣಯ್ಯ ನಾಲೆಯನ್ನು ಡೆವಲಪರ್‌ಗಳು ಹಾಗೂ ಕೆಲ ತೋಟದ ಮಾಲೀಕರು ಒತ್ತುವರಿ ಮಾಡಿ ಬಡಾವಣೆ ನಿರ್ಮಿಸಿರುವುದೇ ಪ್ರಮುಖ ಕಾರಣವಾಗಿದೆ ಎಂದರು. ಮೈಸೂರು ನಗರ ಮತ್ತು ಗ್ರಾಮಾಂತರ ಭಾಗದಲ್ಲಿ ನಾಲೆ ಒತ್ತುವರಿಯಾಗಿರುವುದು ಅಪಾರ ಹಾನಿಗೆ ಕಾರಣವಾಗಿರುವುದಲ್ಲದೆ, ಕೆರೆಗಳೂ ನಾಶ ವಾಗುತ್ತಿವೆ. ಬೆಂಗಳೂರಿನಂತೆ ಇಲ್ಲಿಯೂ ಸರ್ವೆ ಮಾಡಿಸಿ ದಿವಾನ್ ಪೂರ್ಣಯ್ಯ ▶ 7ನೇ ಪುಟಕ್ಕೆ

ಮಾತಿಗೆ ತಪ್ಪಿದ ಸಿಎಂ: ಮಂಡ್ಯದಲ್ಲಿ ನಾಳೆ ರೈತರ ಬೃಹತ್ ಸಮಾವೇಶ

ಜಂಬೂಸವಾರಿಯಂದು ಮೈಸೂರಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ಹೆದ್ದಾರಿಗಳಲ್ಲಿ ರಸ್ತೆ ತಡೆ ಎಚ್ಚರಿಕೆ



ಮೈಸೂರು, ಸೆ.17 (ಆರ್‌ಕೆಬಿ)– ಕಳೆದ ಜು.11ರಂದು ಮುಖ್ಯಮಂತ್ರಿ ಮನೆಗೆ ರೈತರು ಮುತ್ತಿಗೆ ಹಾಕಿದ ಸಂದರ್ಭದಲ್ಲಿ ನೀಡಿದ ಭರವಸೆಗಳನ್ನು ಈಡೇರಿಸದೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರೈತ ವಿರೋಧಿ ಧೋರಣೆ ಅನುಸರಿಸಿದ್ದಾರೆ ಎಂದು ಖಂಡಿಸಿ, ಕರ್ನಾಟಕ ರಾಜ್ಯ ರೈತ ಸಂಘ, ಸೆ.19ರಂದು ಮಂಡ್ಯದಲ್ಲಿ ಮೈಸೂರು ಮತ್ತು ಬೆಂಗಳೂರು ವಿಭಾಗದ ಬೃಹತ್ ರೈತರ ಸಮಾವೇಶವನ್ನು ಹಮ್ಮಿಕೊಂಡಿದೆ ಎಂದು ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶದಲ್ಲಿ ಸರ್ಕಾರದ ವಿರುದ್ಧ ಕೆಲ ನಿರ್ಣಯಗಳನ್ನು ಕೈಗೊಳ್ಳಲಾಗುವುದು. ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸಬೇಕು. ಕೆಆರ್‌ಎಸ್ ಸುತ್ತಮುತ್ತ 20 ಕಿ.ಮೀ. ಸುತ್ತ ಶಾಶ್ವತವಾಗಿ ಗಣಿಗಾರಿಕೆ ನಿಷೇಧಿಸಿ ಕನ್ನಂಬಾಡಿ ಕಟ್ಟೆ ಉಳಿಸಬೇಕು. ವಿದ್ಯುಚ್ಛಕ್ತಿ ಕಾಯ್ದೆಗೆ ತಿದ್ದುಪಡಿ ತಂದು ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವುದನ್ನು ಕೈಬಿಡಬೇಕು. ಆಹಾರ ಪದಾರ್ಥ ಮತ್ತು ಬೆಲ್ಲದ ಮೇಲೆ ಜಿಎಸ್‌ಟಿ ವಿಧಿಸಿರುವುದನ್ನು ಕೈಬಿಡಬೇಕು. ಅತಿವೃಷ್ಟಿಯಿಂದ ಆಗಿರುವ ನಷ್ಟಕ್ಕೆ ವೈಜ್ಞಾನಿಕ ಪರಿಹಾರ ತುಂಬಬೇಕು. ರೈತರ ಬೆಳೆ ಸಾಲ ಮನ್ನಾ ಮಾಡಬೇಕು. ಕರ ನಿರಾಕರಣಾ ಚಳುವಳಿಯಲ್ಲಿ ರೈತರು ಉಳಿಸಿಕೊಂಡಿರುವ ಗೃಹ ವಿದ್ಯುತ್ ಬಾಕಿಯನ್ನು ಮನ್ನಾ ಮಾಡಬೇಕು. ಮಂಡ್ಯ ಹಾಲು ಒಕ್ಕೂಟದ ಹಗರಣವನ್ನು ಸಿಬಿಐ ತನಿಖೆಗೆ ವಹಿಸಬೇಕು. ಬಗರ್‌ಹುಕುಂ ಸಾಗುವಳಿ ಮಂಜೂರು ಇತ್ಯಾದಿ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಗುವುದು ಎಂದರು. ರಾಜ್ಯದ ಜನತೆ ಅತಿವೃಷ್ಟಿಯಿಂದ ತೊಂದರೆಗೆ ಒಳಗಾಗಿರುವ ಇಂತಹ ಸಂದರ್ಭದಲ್ಲಿ ಅದ್ಧೂರಿಯಾಗಿ ದಸರಾ ಆಚರಣೆ ಮಾಡುವುದನ್ನು ಬಿಟ್ಟು ಸರಳ ದಸರಾ ಆಚರಣೆ ಮಾಡಿ, ಆ ಹಣವನ್ನು ಅತಿವೃಷ್ಟಿಯ ಪರಿಹಾರೋಪಾಯಗಳಿಗೆ ಬಳಸಬೇಕು ಎಂದು ಆಗ್ರಹಿಸಿದರು.

ಅಸಮಾನತೆ ಸೃಷ್ಟಿಸುವ ಮತ್ತು ಜನಸಾಮಾನ್ಯರಿಗೆ ಅನುಕೂಲವಲ್ಲದ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮಾಡುವುದನ್ನು ನಿಲ್ಲಿಸಿ ಗ್ರಾಮ, ತಾಲೂಕು ಮತ್ತು ಜಿಲ್ಲೆಯ ರಸ್ತೆಗಳನ್ನು ರಿಪೇರಿ ಮಾಡಬೇಕು. ಹೊಸದಾಗಿ ರಸ್ತೆ ನಿರ್ಮಾಣ ಮಾಡಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ಹೇಳಿದರು.

ವಾರದೊಳಗೆ ನಮ್ಮ ಈ ಬೇಡಿಕೆ ಈಡೇರಿಸದಿದ್ದರೆ ಮೈಸೂರು ದಸರಾ ಜಂಬೂಸವಾರಿ ದಿನದಂದು ಮೈಸೂರಿನ ಹೊರ ವಲಯದ ಶ್ರೀರಂಗಪಟ್ಟಣ ರಸ್ತೆ, ನಂಜನಗೂಡು ರಸ್ತೆ ಸೇರಿದಂತೆ ನಾಲ್ಕು ದಿಕ್ಕುಗಳ ಹೆದ್ದಾರಿ ರಸ್ತೆಗಳನ್ನು ತಡೆದು ಪ್ರತಿಭಟನೆ ನಡೆಸಲಾಗುವುದು. ರೈತರು ಟ್ರ್ಯಾಕ್ಟರ್, ಎತ್ತಿನಗಾಡಿ, ಜಾನುವಾರುಗಳನ್ನು ತಂದು ಮಹಿಳೆಯರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳುವ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ರೈತಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು ಮುಖಂಡರಾದ ಪ್ರಸನ್ನ ಗೌಡ, ಪಿ .ಮರಂಕಯ್ಯ, ಮಂಡಕಳ್ಳಿ ಮಹೇಶ್ ಉಪಸ್ಥಿತರಿದ್ದರು.

ಆಟೋ ನಿಲ್ದಾಣಕ್ಕೆ ಗುದ್ದಲಿ ಪೂಜೆ



ಮೈಸೂರು, ಸೆ.17– ಚಾಮರಾಜ ಕ್ಷೇತ್ರದ ವಾರ್ಡ್ ನಂ 20 ಮತ್ತು 6ರ ಆಟೋ ನಿಲ್ದಾಣಗಳ ನಿರ್ಮಾಣ ಕಾಮಗಾರಿಗಳಿಗೆ ಶಾಸಕ ಎಲ್.ನಾಗೇಂದ್ರ ಗುರುವಾರ ಭೂಮಿ ಪೂಜೆ ಸಲ್ಲಿಸಿದರು. ವಿಜಯನಗರ 2ನೇ ಹಂತದಲ್ಲಿರುವ ವಾಟರ್ ಟ್ಯಾಂಕ್‌ನ ಸರ್ಕಲ್ ಬಳಿಯ ಮಯೂರ ಆಟೋ ನಿಲ್ದಾಣದ ಪ್ಲಾಟ್ ಫಾರ್ಮ್ ಮತ್ತು ಮೇಲ್ಚಾವಣಿ ನಿರ್ಮಾಣ, ಇಲ್ಲಿನ ಎಸ್.ಬಿ.ಐ ಬ್ಯಾಂಕ್ ಎದುರಿನಲ್ಲಿರುವ ಆಟೋ ನಿಲ್ದಾಣದ ಪ್ಲಾಟ್ ಫಾರ್ಮ್ ಮತ್ತು ಮೇಲ್ಚಾವಣಿ ನಿರ್ಮಾಣ, 6 ಲಕ್ಷ ವೆಚ್ಚದಲ್ಲಿ ಗೋಕುಲಂ ಬಡಾವಣೆ ತ್ರಿನೇತ್ರ ವೃತ್ತದಲ್ಲಿರುವ ಸ್ನೇಹ ಸಂಗಮ ಆಟೋ ನಿಲ್ದಾಣದ ಪ್ಲಾಟ್ ಫಾರ್ಮ್ ಮತ್ತು ಮೇಲ್ಚಾವಣಿ ನಿರ್ಮಾಣ ಸೇರಿದಂತೆ 16 ಲಕ್ಷ ರೂ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆಯನ್ನು ನೆರವೇರಿಸಿದರು.

ಈ ವೇಳೆ ಬಿಜೆಪಿ ಮುಖಂಡ ಆರ್ಟ್ಸ್ ರಾಮು, ಚಾಮರಾಜ ಕ್ಷೇತ್ರದ ಭಾ.ಜ.ಪ ಅಧ್ಯಕ್ಷ ಸೋಮಶೇಖರ ರಾಜು, ಉಪಾಧ್ಯಕ್ಷ ಸತೀಶ್, ಜಯಣ್ಣ, ಪ್ರಧಾನ ಕಾರ್ಯದರ್ಶಿ ಪುನೀತ್, ಬಿ.ಎಲ್.ಎ–1 ದಿನೇಶ್ ಗೌಡ, ವಾರ್ಡ ಅಧ್ಯಕ್ಷರುಗಳಾದ ವಸಂತ್, ಅಶೋಕ್, ಮಹಿಳಾ ಮೋರ್ಚಾ ಅಧ್ಯಕ್ಷೆ ತನುಜಾ, ಅನುಪಮ, ಹಂಸವೇಣಿ, ಆರ್ಟ್ಸ್ ರಾಮು, ಕಿರಣ್ ಸುಖಧಾರೆ, ಅವಿನಾಶ್, ದಶರಥ, ರಾಖಿ, ನಾಗರಾಜು, ಅಶ್ವಥ್, , ಕೆಆರ್.ಐ.ಡಿ.ಎಲ್ ಇಂಜಿನಿಯರ್‌ಗಳಾದ ಕು: ಅರ್ಚನಾ, ವಿವೇಕ್ ಸೇರಿದಂತೆ ಮತ್ತಿತರರು ಇದ್ದರು.

ಇಂದು ಆನ್‌ಲೈನ್ ಮೂಲಕ ಸರ್ವ ಸದಸ್ಯರ ಸಭೆ

ಮೈಸೂರು, ಸೆ. 17– ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್‌ನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಸೆ. 18 ರಂದು ಎಂ.ಎಲ್. ವರ್ಧಮಾನಯ್ಯ ಸ್ಮಾರಕ ಭವನದಲ್ಲಿ ಆಯೋಜಿಸಲಾಗಿತ್ತು. ಆದರೆ ರಾಜ್ಯ ಸರ್ಕಾರವು ವಾರ್ಷಿಕ ಮಹಾಸಭೆಯನ್ನು ವರ್ಚ್ಯುಯಲ್ ಮೂಲಕ ಆಯೋಜಿಸಲು ಸೂಚಿಸಿರುವುದರಿಂದ ಸಭೆಯನ್ನು ರದ್ದುಪಡಿಸಿ, ಅದೇ ದಿನ ಆನ್‌ಲೈನ್ ಮೂಲಕ ಸಭೆ ನಡೆಸಲಾಗುವುದು. ಸಂಘದ ಸದಸ್ಯರು https://www.ccbmysuru.in/gb-login/ ಮೂಲಕ ಪಾಲ್ಗೊಳ್ಳಬಹುದು ಎಂದು ಬ್ಯಾಂಕ್‌ನ ವ್ಯವಸ್ಥಾಪಕರು ತಿಳಿಸಿದ್ದಾರೆ.

ನಿಧನ



ಎಂ.ಎಲ್. ರಮೇಶ

ಮೈಸೂರು, ಸೆ. 17– ಮೈಸೂರಿನ ಸಿದ್ಧಾರ್ಥನಗರದ ವಿನಯ ಮಾರ್ಗ ನಿವಾಸಿಗಳು ಹಾಗೂ ದಿವಂಗತ ಸ್ವಾತಂತ್ರ್ಯ ಹೋರಾಟಗಾರ ಬಿ. ಲಿಂಗಯ್ಯ ಅವರ ಪುತ್ರ ಎಂ.ಎಲ್. ರಮೇಶ (59) ಶನಿವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ತಂದೆ ಲಿಂಗಯ್ಯ (95) ಕಳೆದ ತಿಂಗಳು ಆ.29ರಂದು ನಿಧನರಾಗಿದ್ದರು. ಅಂತ್ಯಕ್ರಿಯೆ ನಾಳೆ (ಸೆ. 18) ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಿ.ಕೆ. ಗೋಪಾಲಗೌಡ



ಮೈಸೂರು, ಸೆ.17–ನಗರದ ಕೆ.ಸಿ.ಲೆಔಟ್ ನಿವಾಸಿ, ನಿವೃತ್ತ ಎಇಇ ಜಿ.ಕೆ.ಗೋಪಾಲಗೌಡ (84) ಶನಿವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಬೆಳಗ್ಗೆ 11 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಪೈ. ರಂಗಣ್ಣ



ಮೈಸೂರು, ಸೆ.17– ಮೈಸೂರಿನ ಬೆಸ್ತರಕಾಳ ನಗರದ ಪೈಲ್ವಾನ್ (ಚಿಕ್ಕ) ರಂಗಣ್ಣ(76) ಶನಿವಾರ ನಿಧನರಾದರು. ಇವರು ಗೋಪಾಲ್ ಸ್ವಾಮಣ್ಣ ಗರಡಿಯಲ್ಲಿ ನೂರಕ್ಕು ಹೆಚ್ಚು ಪೈಲ್ವಾನ್‌ಗಳಿಗೆ ತರಬೇತಿ ನೀಡಿದ್ದು, ಕೆಲವರು ರಾಷ್ಟ್ರಮಟ್ಟದ ಸಾಧನೆ ಮಾಡಿದ್ದಾರೆ. ಗೋಪಾಲ್ ಸ್ವಾಮಣ್ಣ ಗರಡಿ ಯಜಮಾನರು ಹಾಗೂ ಪೈಲ್ವಾನರುಗಳ ಸಂತಾಪ ಸೂಚಿಸಿದ್ದಾರೆ. ಮೃತರು ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 1 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

'ಸ್ವಚ್ಛ ಭಾರತದೆಡೆಗೆ ಮೈಸೂರಿನ ನಡಿಗೆ'

ಸ್ವಚ್ಛತಾ ಅಭಿಯಾನಕ್ಕೆ ಉಸ್ತುವಾರಿ ಸಚಿವರ ಚಾಲನೆ

ಸ್ವತಃ ಕಸ ಗುಡಿಸಿ, ವಾಹನಕ್ಕೆ ತುಂಬಿದ ಸಚಿವ ಸೋಮಶೇಖರ್





ಮೈಸೂರು, ಸೆ.17(ಎಂಟಿವೈ)– ನಾಡ ಹಬ್ಬ ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಶನಿವಾರ 'ಲೆಟ್ಸ್ ಡೂ ಇಟ್ ಮೈಸೂರು' ಸಂಸ್ಥೆ ವತಿಯಿಂದ ಆಯೋಜಿಸಿದ್ದ 'ಸ್ವಚ್ಛ ಭಾರತದೆಡೆಗೆ ಮೈಸೂರಿನ ನಡಿಗೆ' ಸ್ವಚ್ಛತಾ ಅಭಿಯಾನ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಚಾಲನೆ ನೀಡಿದರು.

ಮೈಸೂರಿನ ಆಲನಹಳ್ಳಿ ಮುಖ್ಯ ರಸ್ತೆ ಸೇರಿದಂತೆ ವಿವಿಧೆಡೆ ಇಂದು ಬೆಳಗ್ಗೆ ನಡೆದ ಸ್ವಚ್ಛತಾ ಅಭಿಯಾನದಲ್ಲಿ ಲೆಟ್ಸ್ ಡೂ ಇಟ್ ಮೈಸೂರು ಸಂಸ್ಥೆಯ ವತಿಯಿಂದ ಮೈಸೂರು ಮಹಾನಗರಪಾಲಿಕೆ, ಜಿಮ್ ಅಸೋಸಿಯೇಶನ್, ಹೋಟೆಲ್ ಮೈಸೂರು ಪ್ಯಾಲೆಸ್, ಸ್ಕಾಲ್ ಇಂಟರ್ ನ್ಯಾಷನಲ್, ಮೈಸೂರು ಟ್ರಾವಲ್ಸ್ ಅಸೋಸಿಯೇಷನ್, ಡಾಮಿನೋಸ್ ಸಹಯೋಗದೊಂದಿಗೆ ನಡೆದ ಅಭಿಯಾನದಲ್ಲಿ 200ಕ್ಕೂ ಹೆಚ್ಚು ಸ್ವಯಂಸೇವಕರು ಪಾಲ್ಗೊಂಡು, ತ್ಯಾಜ್ಯ ಸಂಗ್ರಹಿಸಿ, ಸ್ವಚ್ಛತಾ ಪ್ರಜ್ಞೆ ಮೆರೆದರು.


'ಸ್ವಚ್ಛ ಭಾರತದೆಡೆಗೆ ಮೈಸೂರಿನ ನಡಿಗೆ' ಅಭಿಯಾನವನ್ನು ಸಚಿವ ಎಸ್.ಟಿ. ಸೋಮಶೇಖರ್ ಕಸ ಗುಡಿಸುವ ಮೂಲಕ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಸ್ವಚ್ಛತಾ ಪ್ರಜ್ಞೆ ಎಲ್ಲರಲ್ಲೂ ಇರಬೇಕು. ನಾಡಹಬ್ಬ ದಸರಾ ಮಹೋತ್ಸವ ಸಮೀಪಿಸುತ್ತಿದೆ. ಈ ಹಿನ್ನೆಲೆಯಲ್ಲಿ ಮೈಸೂರಿಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಈ ಹಿನ್ನೆಲೆಯಲ್ಲಿ ನಗರದ ಸ್ವಚ್ಛತೆ ಕಾಪಾಡುವ ಜವಾಬ್ದಾರಿ ಕೇವಲ ಪೌರಕಾರ್ಮಿಕರಿಗೆ ಸೀಮಿತವಲ್ಲ.

ಎಲ್ಲರೂ ಸ್ವಚ್ಛತಾ ಅಭಿಯಾನಕ್ಕೆ ಕೈಜೋಡಿಸಬೇಕು. ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸಿಕೊಂಡರೆ ರಾಜ್ಯ, ದೇಶ ಸ್ವಚ್ಛ ಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಮೈಸೂರು ನಗರದಲ್ಲಿ ಸ್ವಚ್ಛತೆ ಕಾಪಾಡಲು ಹಮ್ಮಿ ಕೊಂಡಿರುವ ಈ ಕಾರ್ಯಕ್ಕೆ ಎಲ್ಲರೂ ಕೈಜೋಡಿಸ ಬೇಕು. ಪ್ರವಾಸಿ ತಾಣಗಳನ್ನು ಕಸ ಮುಕ್ತಗೊಳಿಸಬೇಕು. ಸಾರ್ವಜನಿಕರು ಸ್ವಯಂಪ್ರೇರಿತರಾಗಿ ಈ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ನಮ್ಮ ಮೈಸೂರು ನಗರಿಯನ್ನು ಸ್ವಚ್ಛವಾಗಿ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ. ಈ ನಿಟ್ಟಿನಲ್ಲಿ ಲೆಟ್ಸ್ ಡೂ ಇಟ್ ಮೈಸೂರು ಮಾಡುತ್ತಿರುವ ಕಾರ್ಯ ಶ್ಲಾಘನೀಯ. ಕಳೆದ 8 ವರ್ಷಗಳ ಹಿಂದೆ 'ಬಿಗ್ ಡೇ' ಎಂಬ ಬೃಹತ್ ಅಭಿಯಾನ ವೊಂದನ್ನು ನಡೆಸಿ, ಇಡೀ ಮೈಸೂರನ್ನು ಸ್ವಚ್ಛಗೊಳಿಸಿತ್ತು. ಅದಾದ ನಂತರ ಸ್ವಚ್ಛ ಭಾರತ ಅಭಿಯಾನ ಆರಂಭವಾಯಿತು. ಈಗ ಮತ್ತೆ ಅದೇ ಕೆಲಸ ಮಾಡುತ್ತಿ ರುವುದು ಸಂತಸದ ಸಂಗತಿ. ಅದರಲ್ಲೂ ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ದಿನ ಈ ಕಾರ್ಯಕ್ರಮ ನಡೆಯುತ್ತಿರುವುದು ಒಳ್ಳೆಯದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಸಕ ಎಲ್. ನಾಗೇಂದ್ರ, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಮೈಸೂರು ಆಯುಕ್ತ ಜಿ.ಲಕ್ಷ್ಮಿ ಕಾಂತ್ ರೆಡ್ಡಿ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಉಪ ಮೇಯರ್ ಡಾ. ರೂಪ ಯೋಗೀಶ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಲೆಟ್ಸ್ ಡೂ ಇಟ್ ಮೈಸೂರು ಸಂಸ್ಥೆಯ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಪಾಲಿಕೆಯ ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜ್, ಲೆಟ್ಸ್ ಡೂ ಇಟ್ ಮೈಸೂರು ಸಂಸ್ಥೆಯ ಅಧ್ಯಕ್ಷ ಎ.ಸುಧೀಂದ್ರ, ಭಾಷ್ಯಂ ಶ್ರೀನಿವಾಸ್, ಮೊಬೈಲ್ ಪ್ಯಾಲೆಸ್ ಮಾಲೀಕ ರಘು ಎನ್.ಪಿ., ಮೈಸೂರು ಟ್ರಾವಲ್ಸ್ ಅಸೋಸಿಯೇಷನ್‌ನ ಅಶೋಕ್, ಸಿ.ಎ.ಜಯಕುಮಾರ್ ಮತ್ತಿತರರು ಹಾಜರಿದ್ದರು.

ಮೈಸೂರು ದಸರಾದಲ್ಲಿ ಪ್ರಧಾನಿ ಮೋದಿ ಪಾಲ್ಗೊಳ್ಳುತ್ತಿಲ್ಲ




ಬೆಂಗಳೂರು, ಸೆ.17(ಕೆಎಂಶಿ)– ಮೈಸೂರು ದಸರಾ ಜಂಬೂಸವಾರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪಾಲ್ಗೊಳ್ಳುತ್ತಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಿ ಅವರು ಬರುವ ವಿಷಯ ಚರ್ಚೆಯಲ್ಲಿತ್ತು. ಸದ್ಯ ಅವರು ಬರುವುದಿಲ್ಲ ಎಂದು ಸಂದೇಶ ನೀಡಿ ದ್ದಾರೆ. ಬಿಡಿಎ ವಸತಿ ಯೋಜನೆ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ಯಾವುದೇ ಹುರುಳಿಲ್ಲ ಎಂದಿದ್ದಾರೆ. ಯಡಿಯೂರಪ್ಪ ಅವರು ವಿರುದ್ಧ ಇಂತಹ ಹಲವಷ್ಟು ಕೇಸುಗಳು ದಾಖಲಾಗಿ ವಿಫಲಗೊಂಡಿವೆ. ಅದರಂತೆ ಈ ಕೇಸು ಕೂಡ ವಿಫಲವಾಗಲಿದೆ ಎಂದರು.

ಇಂದು ಸರ್ವ ಸದಸ್ಯರ ಸಭೆ

ಮೈಸೂರು, ಸೆ. 17– ಮೈಸೂರಿನ ಆಲನಹಳ್ಳಿ, ನೇತಾಜಿನಗರದ ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘದ ಸರ್ವ ಸದಸ್ಯರ ಸಭೆಯು ಸೆ.18ರಂದು ಬೆಳಗ್ಗೆ 11 ಗಂಟೆಗೆ ಹೆಚ್.ಡಿ. ಕೋಟೆ ರಸ್ತೆಯಲ್ಲಿರುವ ದಾರಿಪುರ ಗ್ರಾಮದ 4ನೇ ಹಂತದ ಬಡಾವಣೆಯ ಜಮೀನು ಸ್ಥಳದಲ್ಲಿ ಸಂಘದ ಅಧ್ಯಕ್ಷ ಟಿ.ಎನ್. ನಾಗೇಶ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.09.2022 ಭಾನುವಾರ, ಮಳೆ ನಕ್ಷತ್ರ: ಉತ್ತರ 14.09.2022 ರಿಂದ 26.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ : ಅಷ್ಟಮಿ, ನಕ್ಷತ್ರ : ಮೃಗಶಿರ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಅಖಿಲ ಭಾರತೀಯ ಗ್ರಾಹಕ ಪಂಚಾಯತ್, ಮೈಸೂರು ಘಟಕ :** ಮನೆ ಮನೆಗೆ ತೆರಳಿ ಬಟ್ಟೆ ಬ್ಯಾಗ್ ವಿತರಿಸುವ ಮೂಲಕ ಜಾಗೃತಿ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಪಾಲಿಕೆ ಆರೋಗ್ಯ ಅಧಿಕಾರಿ ಡಾ. ನಾಗರಾಜ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಅಧ್ಯಕ್ಷ ರವಿಶಂಕರ್, ಮೈಸೂರು ರಕ್ಷಣಾ ವೇದಿಕೆ ಕಾರ್ಯದರ್ಶಿ ರಾಕೇಶ್ ಭಟ್, ಅಜಯ್ ಶಾಸ್ತ್ರಿ, ಸ್ಥಳ: ವಿದ್ಯಾರಣ್ಯಪುರಂ, ಚಾಮುಂಡಿಪುರಂ ಸುತ್ತಮುತ್ತಲು, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಕಲಾಸುರುಚಿ ಮತ್ತು ಕುತೂಹಲಿ :** ವಿಜ್ಞಾನದ ಇತಿಹಾಸ, ಬೆಂಗಳೂರಿನ ನ್ಯಾಷನಲ್ ಸೆಂಟರ್ ಫಾರ್ ಬಯಾಲಾಜಿಕಲ್ ಸೈನ್ಸಸ್‌ನ ಸಿದ್ಧಾರ್ಥ ಕಂಕಾರಿಯಾ ಅವರಿಂದ ಜಗತ್ತಿನೆಲ್ಲೆಡೆ ಅರಿವನ್ನು ಹಂಚಿಕೊಳ್ಳುತ್ತಿದ್ದ ವಿಧಾನಗಳು ಕುರಿತು ಉಪನ್ಯಾಸ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಸುರೇಶ್ ಮೋಹನ್ ಸ್ಮರಣಾರ್ಥ ನಾದಕಿಶೋರೋತ್ಸವ, ಸಂಜೆ 4 ರಿಂದ ಆದಿತ್ಯ ಮಣಿಕರ್ಣಿಕೆ ಅವರಿಂದ ಪಿಟೀಲು ವಾದನ, ನಂದನ್ ಕಶ್ಯಪ್–ಮೃದಂಗ, ಸಂಜೆ 5.30 ರಿಂದ ಅಪ್ರಮೇಯ ವಷಿಷ್ಠ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ಸಿ.ವಿ. ಶ್ರುತಿ–ಪಿಟೀಲು, ನಂದನ್ ಕಶ್ಯಪ್–ಮೃದಂಗ, ಸಂಜೆ 7 ರಿಂದ ಆರ್.ವಿ. ಅಕ್ಷಯ್ ಮತ್ತು ಆರ್.ವಿ. ಅಭಿಷೇಕ್ ಅವರಿಂದ ಕರ್ನಾಟಕ ಶಾಸ್ತ್ರೀಯ ದ್ವಂದ್ವ ಗಾಯನ, ತುಮಕೂರು ಯಶಸ್ವಿ–ಪಿಟೀಲು, ವಿಕ್ರಮ್ ಭಾರದ್ವಾಜ್–ಮೃದಂಗ, ಸ್ಥಳ:ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ.

■ **ಲಯನ್ಸ್ ಕ್ಲಬ್ ಆಫ್ ಮೈಸೂರು ಮಿಲೇನಿಯಂ :** ಶಿಕ್ಷಕರ, ವೈದ್ಯರ, ಅಭಿಯಂತರ ದಿನಾಚರಣೆ ಅಂಗವಾಗಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಮಾಜಿ ಛೇರ್ಮನ್ ಡಾ. ನಾಗರಾಜ್ ವಿ. ಭೈರಿ, ಹಿತವಚನ: ಸಾರ್ವಜನಿಕ ಶಿಕ್ಷಣ ಇಲಾಖೆ ಸಹ ನಿರ್ದೇಶಕರಾದ ಭಾರತಿ, ಮುಖ್ಯ ಅತಿಥಿಗಳು: ಎನ್.ಆರ್. ಮಂಜುನಾಥ್, ಡಾ. ವಿ.ಪಿ. ಕುಮಾರಸ್ವಾಮಿ, ಅಧ್ಯಕ್ಷತೆ : ಲಯನ್ಸ್ ಕ್ಲಬ್ ಮೈಸೂರು ಮಿಲೇನಿಯಂ ಅಧ್ಯಕ್ಷ ಲಯನ್ ಡಿ.ಎನ್. ಚಂದ್ರಶೇಖರ್, ಸ್ಥಳ: ಶ್ರೀ ಗೋಪಾಲಸ್ವಾಮಿ ಶಿಶುವಿಹಾರ ಶಿಕ್ಷಣ ಸಂಸ್ಥೆ ಸಭಾಂಗಣ, ನಂಜುಮಳಿಗೆ ವೃತ್ತ, ಬೆಳಗ್ಗೆ 10ಕ್ಕೆ.

■ **ಮೈಸೂರು ದಸರಾ ಮಹೋತ್ಸವ ಕುಸ್ತಿ ಉಪಸಮಿತಿ :** ನಾಡಕುಸ್ತಿ ಜೋಡಿ ಕಟ್ಟುವ ಕಾರ್ಯಕ್ರಮ, ಸ್ಥಳ: ಪಿ. ಕಾಳಿಂಗರಾವ್ ಗಾನ ಮಂಟಪ, ವಸ್ತುಪ್ರದರ್ಶನದ ಆವರಣ, ಬೆಳಗ್ಗೆ 10ಕ್ಕೆ.

■ **ಬಿಜೆಪಿ ನರಸಿಂಹರಾಜ ಕ್ಷೇತ್ರ :** ಪ್ರಧಾನಿ ನರೇಂದ್ರ ಮೋದಿ ಜನ್ಮದಿನದ ಪ್ರಯುಕ್ತ ಆರೋಗ್ಯ ತಪಾಸಣೆ ■ಮತ್ತು ಕಣ್ಣಿನ ತಪಾಸಣೆ ಶಿಬಿರ, ಸ್ಥಳ: ಮನೆ ಮಂಚಮ್ಮ ದೇವಸ್ಥಾನ, ಗಾಂಧಿನಗರ, ಬೆಳಗ್ಗೆ 10.30 ರಿಂದ.

■ **ಕೃಷ್ಣರಾಜ ಕ್ಷೇತ್ರ :** ಮೋದಿ ಯುಗ ಉತ್ಸವ್–2022, ಉದ್ಘಾಟನೆ : ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ, ಮುಖ್ಯ ಅತಿಥಿಗಳು : ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಪ್ರತಿಮಾ, ಮುನಿರಾಜು, ಮಾಲತಿ, ಜಿ.ಆರ್. ಮಹೇಶ್, ಹೆಚ್.ಎ. ಶೋಭ, ಅಧ್ಯಕ್ಷತೆ : ಶಾಸಕ ಎಸ್.ಎ.ರಾಮದಾಸ್, ಸ್ಥಳ: ಶ್ರೀ ರಾಮಲಿಂಗೇಶ್ವರ ಉದ್ಯಾನವನ, ವಿದ್ಯಾರಣ್ಯಪುರಂ, ಬೆಳಗ್ಗೆ 11ಕ್ಕೆ.

■ **ಡಾ. ವಿಷ್ಣುಸೇನಾ ಸಮಿತಿ :** ಡಾ. ವಿಷ್ಣುವರ್ಧನ್‌ರವರ 72ನೇ ಹುಟ್ಟುಹಬ್ಬದ ಪ್ರಯುಕ್ತ ನಿವೃತ್ತ ಯೋಧರಿಗೆ ಸನ್ಮಾನ ಸಮಾರಂಭ, ಉಪಸ್ಥಿತರು : ಸಮಿತಿ ಅಧ್ಯಕ್ಷ ಲೋಹಿತ್‌ಗೌಡ, ಸಾ.ತಿ. ಸದಾನಂದಗೌಡ, ಶ್ರೀಮತಿ ವಜ್ರೇಶ್ವರಿ, ಸ್ಥಳ: ಅಗಸ್ತ್ಯ ಆಸ್ಪತ್ರೆ ಹತ್ತಿರ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ಸಾಹಸಸಿಂಹ ಡಾ. ವಿಷ್ಣು ಸೇನಾ ಬಳಗ :** ಡಾ. ವಿಷ್ಣುವರ್ಧನ್‌ರವರ ಹುಟ್ಟುಹಬ್ಬ ಆಚರಣೆ, ಮುಖ್ಯ ಅತಿಥಿಗಳು : ಇಳೈ ಆಳ್ವಾರ್ ಸ್ವಾಮೀಜಿ, ಮೇಯರ್ ಶಿವಕುಮಾರ್, ಶಾಸಕರಾದ ಎಲ್. ನಾಗೇಂದ್ರ, ಜಿ.ಟಿ. ದೇವೇಗೌಡ, ಮೈಲ್ಯಾಕ್ ಅಧ್ಯಕ್ಷ ಕೌಟಿಲ್ಯ ರಘು, ಬಿಜೆಪಿ ನಗರಾಧ್ಯಕ್ಷ ಟಿ.ಎಸ್. ಶ್ರೀವತ್ಸ, ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ಮುಖಂಡರಾದ ಯಶಸ್ವಿನಿ ಸೋಮಶೇಖರ್, ಎನ್.ಎಂ. ನವೀನ್ ಕುಮಾರ್, ಸ್ಥಳ: ಡಾ. ಸಾಹಸಸಿಂಹ ವಿಷ್ಣುವರ್ಧನ್ ಉದ್ಯಾನವನ, ಬೆಳಗ್ಗೆ 11.30ಕ್ಕೆ.

■ **ಗಾನಭಾರತಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ :** ದಿನಪೂರ್ತಿ ವಿವಿಧ ಕಲಾವಿದರಿಂದ ಶಾಸ್ತ್ರೀಯ ಸಂಗೀತ ಪ್ರಾತ್ಯಕ್ಷಿಕೆ, ಬೆಳಗ್ಗೆ 10ಕ್ಕೆ ಕರ್ನಾಟಕ ಶಾಸ್ತ್ರೀಯ ಸಂಗೀತ ಗೇಯ ನಾಟಕ, ಬೆಳಗ್ಗೆ 10.15 ರಿಂದ ಡಾ. ಆರ್.ಎನ್. ಶ್ರೀಲತಾ ಅವರಿಂದ ವರ್ಣಗಳಲ್ಲಿ ರಾಗಭಾವ, 11.30 ರಿಂದ ವಿದ್ವಾನ್ ಅರ್ಜುನ್ ಕುಮಾರ್ ಅವರಿಂದ ಲಯ ಒಂದು ಶೈಲಿ ಎರಡು, ಮಧ್ಯಾಹ್ನ 1.30 ರಿಂದ ವಿದ್ವಾನ್ ಗುರುಮೂರ್ತಿ, ವಿದ್ವಾನ್ ಪ್ರಸನ್ನ ಕುಮಾರ್ ಮತ್ತು ವಿದ್ವಾನ್ ಹರ್ಷ ಸಾಮಗ ಅವರಿಂದ ಜತಿ ಮತ್ತು ನಟುವಾಂಗ ವಿಷಯ ಮಂಥನ, ಮಧ್ಯಾಹ್ನ 2.45ಕ್ಕೆ ಸಂಗೀತ ಕಲಾಚಾರ್ಯ ನೀಲಾರಾಂಗೋಪಾಲ್ ಅವರಿಂದ ವೈವಿಧ್ಯಮಯ ಪಲ್ಲವಿಗಳು, ಸಂಜೆ 4 ರಿಂದ ಡಾ. ಶ್ರೀಕಾಂತಂ ನಾಗೇಂದ್ರಶಾಸ್ತ್ರಿ ಅವರಿಂದ ಅಪರೂಪದ ಜಾವಳಿ ಹಾಗೂ ಪದಗಳು, ಸಂಜೆ 5.45ಕ್ಕೆ ಸಮಾರೋಪ ಸಮಾರಂಭ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ಸರ್ ಎಂ. ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ :** ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಉದ್ಘಾಟನೆ : ಶಾಸಕ ಎಲ್. ನಾಗೇಂದ್ರ, ಉಪಸ್ಥಿತರು : ಮೇಯರ್ ಶಿವಕುಮಾರ್, ನಾಜೀಯಾ ಸುಲ್ತಾನ, ಸಾಹಿತಿ ಬನ್ನೂರು ಕೆ. ರಾಜು, ಪಾಲಿಕೆ ಸದಸ್ಯ ಗೋಪಿ, ಆಕಾಶವಾಣಿ ನಿಲಯ ನಿರ್ದೇಶಕ ಎಸ್.ಎಸ್. ಉಮೇಶ್, ಸ್ಥಳ: ರೋಟರಿ ಪಶ್ಚಿಮ ಶಾಲೆ ಸಭಾಂಗಣ, ಸರಸ್ವತಿಪುರಂ, ಸಂಜೆ 4ಕ್ಕೆ.

■ **ನೂಪುರ ನೃತ್ಯಾಲಯ :** ನೂಪುರ ನೃತ್ಯೋತ್ಸವ, ಸ್ಥಳ: ಕಲಾಮಂದಿರ, ಸಂಜೆ 4.30 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆಯವರ ದೈವತ್ವ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಸಪ್ತಗಿರಿ ಮೆಲೋಡಿಸ್ :** ಡಾ. ವಿಷ್ಣುವರ್ಧನ್ ನೆನಪಿನೋತ್ಸವ, ಸಾನ್ನಿಧ್ಯ : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಅಧ್ಯಕ್ಷತೆ : ಮೇಯರ್ ಶಿವಕುಮಾರ್, ಮುಖ್ಯ ಅತಿಥಿಗಳು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ವಕೀಲ ತಮ್ಮಯ್, ಎಸ್.ಎ. ಶ್ರೀನಿವಾಸ್, ಡಾ. ಸುರೇಂದ್ರನ್, ಡಾ. ರೇಖಾ, ಎಸ್.ವಿ. ಮಂಜುನಾಥ್, ಡಾ. ಜಿ. ರೂಪ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ನಂಜುಮಳಿಗೆ, ಸಂಜೆ 4ಕ್ಕೆ.

■ **ನಟನ ರಂಗಶಾಲೆ** ಎಂ.ಎಸ್.ಕೆ. ಪ್ರಭು ಅವರ ನೀಳ್ಗತೆ ಆಧರಿಸಿದ ಬೆತ್ತಲೆ ಅರಸನ ರಾಜ ರಹಸ್ಯ ನಾಟಕ ಪ್ರದರ್ಶನ, ನಿರ್ದೇಶನ: ಮಂಡ್ಯ ರಮೇಶ್, ಸಂಗೀತ: ಕು. ದಿಶಾ ರಮೇಶ್, ಸ್ಥಳ: ನಟನ ರಂಗಶಾಲೆ, ಸಂಜೆ 6.30ಕ್ಕೆ.

■ **ಡಿಎನ್ಕೆ ಸ್ನೇಹಬಳಗ:** ಡಿ.ಎನ್. ಕೃಷ್ಣಮೂರ್ತಿ ಅವರ 'ಕರ್ಮಯೋಗಿ' ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯನಗರ ಜೀವನ ಚರಿತ್ರೆ ಬಿಡುಗಡೆ, ಡಿಎನ್ಕೆ 60ರ ಹೆಜ್ಜೆ: ಅಭಿನಂದನಾ ಸಮಾರಂಭ, ಸಾನ್ನಿಧ್ಯ: ಪ್ರೊ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ: ಮಾಜಿ ಸಚಿವ ಸಿ.ಹೆಚ್. ವಿಜಯಶಂಕರ್, ಕೃತಿ ಬಿಡುಗಡೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಪ್ರಥಮ ಪ್ರತಿ ಸ್ವೀಕಾರ: ಹಿರಿಯ ಸಾಹಿತಿ ಡಾ. ಸಿಪಿಕೆ, ಅಧ್ಯಕ್ಷತೆ: ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ. ಮಹೇಶ್ ಜೋಶಿ, ಕೃತಿ ಕುರಿತು ಮಾತನಾಡುವವರು: ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಅಭಿನಂದನಾ ನುಡಿ : ಸಾಹಿತಿ ಬನ್ನೂರು ಕೆ. ರಾಜು, ಉಪಸ್ಥಿತರು: ನಗರ ಬಿಜೆಪಿ ಅಧ್ಯಕ್ಷ ಟಿ.ಎಸ್. ಶ್ರೀವತ್ಸ, ಡಿ.ಎನ್. ಕೃಷ್ಣಮೂರ್ತಿ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 4.15ಕ್ಕೆ.

■ **ವಿನೂತನ :** ರಜತ ಮಹೋತ್ಸವ, ವಿವಿಧ ಪ್ರಶಸ್ತಿ ಪ್ರದಾನ, ಉಪಸ್ಥಿತರು : ವಿನೂತನ ಸಂಸ್ಥೆ ಅಧ್ಯಕ್ಷ ಸಿ. ನಾರಾಯಣಗೌಡ, ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ, ಮೈಸೂರು ಆಯುರ್ವೇದ ಮಹಾವಿದ್ಯಾಲಯ ನಿವೃತ್ತ ಪ್ರಾಧ್ಯಾಪಕ ಡಾ. ರಾಜೇಂದ್ರ, ಸ್ಥಳ: ಶ್ರೀ ಕುತ್ತೆತ್ತೂರು ಶ್ರೀ ಸೀತಾರಾಮರಾವ್ ಭವನ, ಕೃಷ್ಣಮೂರ್ತಿಪುರಂ, ಸಂಜೆ 4ಕ್ಕೆ.

■ **ನಿನಾದ್ ಮ್ಯೂಸಿಕಲ್ ಟ್ರಸ್ಟ್, ಪ್ರಸನ್ನ ಫಿಲಂ ಹಿಟ್ಸ್ ಗ್ರೂಪ್ :** ಇಳಯಗಾನ–2022, ಸಂಗೀತ ನಿರ್ದೇಶಕ ಎ.ಎಸ್.ಪ್ರಸನ್ನಕುಮಾರ್ ಸಾರಥ್ಯದಲ್ಲಿ ಸಂಗೀತ ಕಾರ್ಯಕ್ರಮ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 4ಕ್ಕೆ.

■ **ವಿಪ್ರ ಜಾಗೃತಿ ವೇದಿಕೆ :** ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ, ಉಪಸ್ಥಿತರು : ಶಾಸಕ ಎಸ್.ಎ. ರಾಮದಾಸ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ವಿಪ್ರ ಮುಖಂಡರಾದ ಡಿ.ಟಿ. ಪ್ರಕಾಶ್, ರಘುರಾಂ ವಾಜಪೇಯಿ, ನಂ. ಶ್ರೀಕಂಠಕುಮಾರ್, ಸ್ಥಳ: ಮಹರ್ಷಿ ಶಾಲೆಯ ರಂಗ ಶಂಕರ ಸಭಾಂಗಣ, ಇಂಡಸ್ಟ್ರೀಯಲ್ ಸಬರ್ಬ್, ಬೆಳಗ್ಗೆ 11ಕ್ಕೆ.

■ **ಪ್ರಕೃತಿ ಆಯುರ್ವೇದ ಪ್ರತಿಷ್ಠಾನ :** ಆರೋಗ್ಯ ತಪಾಸಣೆ ಶಿಬಿರ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ದಟ್ಟಗಳ್ಳಿ 3ನೇ ಹಂತ, ಬೆಳಗ್ಗೆ 10 ರಿಂದ.

■ **ಏಕಲವ್ಯ ಎಜುಕೇಷನ್ ಫೌಂಡೇಷನ್:** ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಗೆ ಉಚಿತ ತರಬೇತಿ ಕಾರ್ಯಾಗಾರ, ಸ್ಥಳ: ಫೌಂಡೇಷನ್ ಆವರಣ, ಜಗನ್ಮೋಹನ ಅರಮನೆ ಹತ್ತಿರ, ಬೆಳಗ್ಗೆ 10 ರಿಂದ.

■ **ಮೈಸೂರು ಡಿಸ್ಟ್ರಿಕ್ಟ್ ಡೆಫ್ ಅಸೋಸಿಯೇಷನ್ :** ಶ್ರವಣದೋಷವುಳ್ಳ ಪುರುಷರ 6ನೇ ರಾಷ್ಟ್ರೀಯ ಟಿ–20 ಕ್ರಿಕೆಟ್ ಪಂದ್ಯಾವಳಿ, ಸ್ಥಳ: ಆರ್‌ಬಿಐ ಕ್ರಿಕೆಟ್ ಮೈದಾನ, ಇನ್ಫೋಸಿಸ್ ಕ್ರಿಕೆಟ್ ಮೈದಾನ, ಎನ್‌ಐಇಘಟಿ ಮೈದಾನ, ಬೆಳಗ್ಗೆ 9.30ರಿಂದ.

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ಗಾಂಧಿ ಶಿಲ್ಪ ಬಜಾರ್, ಕರಕುಶಲ ವಸ್ತುಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ರಿಂದ.

■ **ಜನಪದ ಸೇವಾ ಟ್ರಸ್ಟ್, ಮೇಲುಕೋಟೆ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ :** 'ಅಪ್ಪಿಕೋ' ಸುಂದರಲಾಲ ಬಹುಗುಣ ಅವರ ಬದುಕು, ಹೋರಾಟ ಮತ್ತು ಚಿಂತನೆ ಪುಸ್ತಕ ಬಿಡುಗಡೆ ಸಮಾರಂಭ, ಉಪಸ್ಥಿತರು : ಪರಿಸರ ಹೋರಾಟಗಾರ ಪಾಂಡುರಂಗ ಹೆಗ್ಡೆ, ಪರಿಸರ ತಜ್ಞ ಕೆ. ಮನು, ಲೇಖಕ ಜಗದೀಶ ಕೊಪ್ಪ, ಸ್ಥಳ: ರೋಟರಿ ಶಾಲೆ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಡಾ. ಪುಷ್ಪಾ ಕುಟ್ಟಣ್ಣ, 6.20 ಗೀತಾರಾಧನ, 6.35 ಬದುಕು ಬದಲಿಸಿದ ಶೋಧ, ಲೇಖನ ಮತ್ತು ಪ್ರಸ್ತುತಿ–ಸುರೇಂದ್ರ ನಾಥ್ ಸಾತ್ವಿಕ್, 6.40 ಅರಿವಿನ ಶಿಖರ ಗಾಯನ– ಕೆ.ಬಿ. ಸುನೀತಾ ಆಚಾರ್ಯ, ಬಿ. ಶ್ರೀರಾಂ ಭಟ್ ಮತ್ತು ಕೆ.ಪಿ.ರೇವತಿ, ವ್ಯಾಖ್ಯಾನ– ಡಾ.ಜಿ.ಆರ್. ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ', ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.40 ನಮ್ಮ ಆರೋಗ್ಯ– ಥೈರಾಯ್ಡ್ ಸಮಸ್ಯೆಗೆ ಹೋಮಿಯೋಪತಿ ಚಿಕಿತ್ಸೆ ಕುರಿತು ಡಾ.ಎ.ಪಿ.ಜಿ. ಅಭಿಜಿತ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಶಾರದಾ ಕಲಾ ಕೇಂದ್ರದ ಪುಟಾಣಿಗಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ– ಕೆ.ಬಿ ಮೀನಾ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ– ಮಾತಿನ ಮಂಟಪ ಪ್ರಸ್ತುತಿ –ಕೆ.ಎಲ್. ರಾಜೇಶ್ವರಿ ಹಾಗೂ ಬಿ.ಕೆ.ಸುಮತಿ, 12.30 ದೇವರನಾಮ – ರಾಯಚೂರು ಶೇಷಗಿರಿದಾಸ್, ಕೆ.ಎಂ. ಕುಸುಮ, 12.45 ಜನಪದಗೀತೆ–ಅನ್ನಪೂರ್ಣಮ್ಮ ಮತ್ತು ತಂಡ, 1.20 ಭಾವಗೀತೆ, 3.00 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಿಶೇಷ ಕಾರ್ಯಕ್ರಮ ಸರಣಿ "ಸ್ವರಾಜ್" ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಕಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಶ್ರೀಪಂಚಾಕ್ಷರಿ ಮಹಿಮೆ, ಪ್ರಸ್ತುತಿ– ಪುತ್ತೂರು ಬೆಟ್ಟಂಪಾಡಿಯ ಕರ್ನಾಟಕ ಯಕ್ಷ ಭಾರತಿಯ ಕಲಾವಿದರು, 4.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ – ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ. ಮೀನಾ, 6.50 ಕೃಷಿರಂಗ–ಕೃಷಿಲೋಕ, 7.00 AIR Next, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ ಕೌಶಾಂಬಿ ಮುಖೋಪಾಧ್ಯಾಯ್ – ಹಾಡುಗಾರಿಕೆ

ವಿವಿಧ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆ

■ **ಶ್ರೀ ಶಾಲಿವಾಹನ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ.ಪಿ. ವೆಂಕಟೇಶ್, ಸ್ಥಳ: ಶ್ರೀ ಸಿದ್ದಪ್ಪಾಜಿ ದೇವಸ್ಥಾನ ಸಮುದಾಯ ಭವನ, ಹೆಬ್ಬಾಳು 1ನೇ ಹಂತ, ಬೆಳಗ್ಗೆ 10ಕ್ಕೆ.

■ **ಮೈಸೂರು ಸೌಹಾರ್ದ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಶಾಂತರಾಜು, ಸ್ಥಳ: ಹೋಟೆಲ್ ಸಿದ್ಧಾರ್ಥದ ಓಂ ಶಾಂತಿ ಹೋಟೆಲ್ ಮತ್ತು ಕ್ಯಾಟರಿಸ್, ನಜರ್‌ಬಾದ್, ಬೆಳಗ್ಗೆ 11ಕ್ಕೆ.

■ **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಶಂಕರನಾಯಕ್, ಸ್ಥಳ: ಶ್ರೀ ಪಂಡಿತ್ ನಾರಾಯಣಚಾರ್ಯ ಕಲ್ಯಾಣ ಮಂದಿರ, ಚಾಮರಾಜ ಜೋಡಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಹೆಚ್.ಎನ್. ನವೀನ್, ಸ್ಥಳ: ಆರಾಧ್ಯ ಮಹಾಸಭಾ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಗುರುಕುಲ ಪತ್ತಿನ ಸಹಕಾರ ಸಂಘ ನಿಯಮಿತ :** ವರ್ಚ್ಯುಯಲ್ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಡಾ. ಎಂ.ಎಸ್. ಮಹದೇವಸ್ವಾಮಿ, ಸ್ಥಳ: ಸಂಘದ ಕಚೇರಿ, ಮಧ್ಯಾಹ್ನ 2ಕ್ಕೆ.

■ **ಕರ್ನಾಟಕ ರಾಜ್ಯ ಕಾಲೇಜು ಅಧ್ಯಾಪಕರ ಹಾಗೂ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘ :** ವರ್ಚ್ಯುಯಲ್ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಡಾ. ಎಂ.ಎಸ್. ಮಹದೇವಸ್ವಾಮಿ, ಸ್ಥಳ: ಸಂಘದ ಕಚೇರಿ, ಬೆಳಗ್ಗೆ 11ಕ್ಕೆ.

■ **ನವರತ್ನ ದಿಗಂಬರ ಜೈನ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಟಿ.ಎ. ಪಾರ್ಶ್ವನಾಥ್, ಸ್ಥಳ: ಎಂ.ಎಲ್. ವರ್ಧಮಾನಯ್ಯ ಸ್ಮಾರಕ ಭವನ, ಶ್ರೀ ಹರ್ಷ ರಸ್ತೆ, ಮಧ್ಯಾಹ್ನ 3ಕ್ಕೆ.

■ **ಡಿ ಮಾಡಲ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ :** ವಾರ್ಷಿಕ ಮಹಾಸಭೆ, ಸ್ಥಳ: ಮನೆ ನಂ. 102/ 2, ಗುರುಕಾರ್ ದೇವಣ್ಣ ರಸ್ತೆ, ಬೆಳಗ್ಗೆ 11ಕ್ಕೆ.

■ **ಶ್ರೀ ಗೌರಿಶಂಕರ ವಿವಿಧೋದ್ದೇಶ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಸ್ಥಳ: ಪಂಚಗವಿ ಮಠದ ಆವರಣ, ಬೆಳಗ್ಗೆ 11ಕ್ಕೆ.

■ **ಶ್ರೀ ರೇಣುಕಾಂಬ ಪತ್ತಿನ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಆರ್. ರವಿಶಂಕರ್, ಸ್ಥಳ: ಸಂಘದ ಕಚೇರಿ ಆವರಣ, ಬೆಳಗ್ಗೆ 11ಕ್ಕೆ.

■ **ನವನಿಧಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ.ಎಸ್.ಮುರಳಿ, ಸ್ಥಳ: ಸಂಘದ ಕಚೇರಿ ಆವರಣ, ಬೆಳಗ್ಗೆ 11ಕ್ಕೆ.

■ **ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕಂದಾಯ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಯೋಹನ, ಸ್ಥಳ: ರೋಟರಿ ಸೆಂಟರ್, ಐಡಿಯಲ್ ಜಾವಾ ರೋಟರಿ ಶಾಲೆ ಆವರಣ, ಬೆಳಗ್ಗೆ 11ಕ್ಕೆ.

■ **ಸ್ನೇಹ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಮಂಜುನಾಥ್, ಸ್ಥಳ: ರಿಯೋ ಮೆರಿಡಿಯನ್ ಹೋಟೆಲ್, ಬೆಳಗ್ಗೆ 11.30ಕ್ಕೆ.

■ **ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಟಿ.ಎನ್. ನಾಗೇಶ್, ಸ್ಥಳ: ದಾರಿಪುರ ಗ್ರಾಮದ ಸಂಘದ ಜಮೀನು, 4ನೇ ಹಂತದ ಬಡಾವಣೆ, ಬೆಳಗ್ಗೆ 11ಕ್ಕೆ.

■ **ಶ್ರೀ ಭೂಮಾತಾ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಸಂಘದ ಕಚೇರಿ ಉದ್ಘಾಟನೆ : ಮಾಜಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉದ್ಘಾಟನೆ : ಶಾಸಕ ಹೆಚ್.ಪಿ. ಮಂಜುನಾಥ್, ಮುಖ್ಯ ಅತಿಥಿಗಳು : ಮಾಜಿ ಶಾಸಕ ಎಸ್. ಬಾಲರಾಜ್, ಕೆ. ಮರೀಗೌಡ, ಟಿ.ಎಲ್. ಗುರುಸ್ವಾಮಿ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಗುರುಪಾದಸ್ವಾಮಿ, ಸ್ಥಳ: ಭೂಮಾತಾನಗರ, ದೊಡ್ಡಕಾಡನಹಳ್ಳಿ, ಬೆಳಗ್ಗೆ 11ಕ್ಕೆ.

■ **ಶ್ರೀ ಚಾಮುಂಡೇಶ್ವರಿ ವಿವಿಧೋದ್ದೇಶ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎನ್. ರಾಜ್‌ಕುಮಾರ್, ಸ್ಥಳ: ಶ್ರೀಮತಿ ನಾಗಮಣಿ ನೀಲಕಂಠಪ್ಪ ಕಲ್ಯಾಣ ಮಂಟಪ, ಹಿನಕಲ್, ಬೆಳಗ್ಗೆ 10.30ಕ್ಕೆ.

ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ನಾಗೇಂದ್ರ ಚಾಲನೆ

ಮೈಸೂರು, ಸೆ.17(ಆರ್‌ಕೆಬಿ)– ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ವಿವಿಧ ವಾರ್ಡ್‌ಗಳಲ್ಲಿ 150 ಲಕ್ಷ ರೂ.ಗಳ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಶನಿವಾರ ಚಾಲನೆ ನೀಡಿದರು.

ಸಯ್ಯಾಜಿರಾವ್ ರಸ್ತೆ ಹಾಗೂ ಕಬೀರ್ ರಸ್ತೆ ಜಂಕ್ಷನ್‌ನಲ್ಲಿರುವ ಯಲ್ಲಮ್ಮಾಂಬ ದೇವಸ್ಥಾನದ ಮುಂಭಾಗದಲ್ಲಿ ಸಯ್ಯಾಜಿರಾವ್ ರಸ್ತೆಯ ಜಂಕ್ಷನ್‌ನಿಂದ ಮಂಡಿ ಪೊಲೀಸ್ ಠಾಣೆವರೆಗೆ ಹಾಗೂ ಇರ್ವಿನ್ ರಸ್ತೆಯಿಂದ ಮೀನಾ ಬಜಾರ್ ಮೂಲಕ ಪುಲಿಕೇಶಿ ರಸ್ತೆಗೆ ಸೇರುವ ರಸ್ತೆ ಅಭಿವೃದ್ಧಿಗೆ ಶಾಸಕರು ಭೂಮಿಪೂಜೆ ನೆರವೇರಿಸಿದರು. ಶಾಸಕರ ವಿವೇಚನಾ ಮಹಾತ್ಮ ಗಾಂಧಿನಗರ ವಿಕಾಸ ಯೋಜನೆ ವಿಶೇಷ ಪ್ಯಾಕೇಜ್ ಅನುದಾನದಲ್ಲಿ ಈ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಈ ವೇಳೆ ಶಾಸಕ ಎಲ್.ನಾಗೇಂದ್ರ ಅವರೊಂದಿಗೆ 24, 25, 26, 40



ಮತ್ತು 41ನೇ ವಾರ್ಡ್‌ಗಳ ನಗರಪಾಲಿಕೆ ಸದಸ್ಯರಾದ ಎಂ.ಬಿ. ನಾಗರಾಜ್, ರಮೇಶ್ ರಮಣಿ, ಸತೀಶ್, ರಂಗಸ್ವಾಮಿ ಹಾಗೂ ಮಾಜಿ ಮೇಯರ್ ತಸ್ಲಿಂ ಇನ್ನಿತರರು ಉಪಸ್ಥಿತರಿದ್ದರು. ನಗರ ಬಿಜೆಪಿ ಉಪಾಧ್ಯಕ್ಷ ಹರ್ಷ, ವಾರ್ಡ್ ಅಧ್ಯಕ್ಷ ವಿಜಯಕುಮಾರ್, ಚಾಮರಾಜ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಗಣೇಶ್, ಪುನೀತ್, ದಿನೇಶ್‌ಗೌಡ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಹರೀಶ್, ಶಾಂತಿ, ರವಿ, ಕೆಂಪಣ್ಣ, ಸೂರಜ್, ಸದಾಶಿವ, ಅರವಿಂದ, ಪಂಕಜ್, ಪಾರಿಕ್, ಅರ್ಜುನ್, ಮಹದೇವ್, ರವಿ ಮಿಲಿಟರಿ, ನಂದೀಶ, ಶ್ರೀನಿವಾಸ, ಸತೀಶ್, ದರ್ಶನ್ ಪೈಂಟ್ ಚಂದ್ರು, ಪ್ರವೀಣ್, ಗಣೇಶ್ ಲಾಳಿಗೆ, ಬಾಲಾಜಿ, ಎಂಡಿ ಸಿಸಿ ಬ್ಯಾಂಕ್ ನಿರ್ದೇಶಕ ಅರವಿಂದ, ನಗರಪಾಲಿಕೆ ಸಹಾಯಕ ಆಯುಕ್ತ ಮಂಜುನಾಥ್ ಇನ್ನಿತರರಿದ್ದರು.



ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಕಚೇರಿಗೆ ಭೇಟಿ ನೀಡಿದ ಹಿರಿಯ ಮುತ್ಸದ್ದಿ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರನ್ನು ಸಂಘದ ನಿರ್ದೇಶಕರು ಆತ್ಮೀಯವಾಗಿ ಸನ್ಮಾನಿಸಿದರು. ಈ ವೇಳೆ ಸಂಸದ ಪ್ರತಾಪ್‌ಸಿಂಹ, ಶಾಸಕ ಎಸ್.ಎ.ರಾಮದಾಸ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಸಿ.ಜಿ.ಗಂಗಾಧರ್, ಎಂ.ಬಿ.ಮಂಚೇಗೌಡ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ, ಗೌರವಾಧ್ಯಕ್ಷ ಅಲತೂರು ಜಯರಾಮ್, ಉಪಾಧ್ಯಕ್ಷರಾದ ರವಿ ರಾಜಕೀಯ, ಬನ್ನೂರು ಮಹೇಶ್, ಪ್ರಧಾನ ಕಾರ್ಯದರ್ಶಿ ಚೇತನ್, ಸಹ ಕಾರ್ಯದರ್ಶಿ ಜಯರಾಮ್, ಖಜಾಂಚಿ ಆರ್.ಲೋಕೇಶ್, ನಿರ್ದೇಶಕರಾದ ಜಿ.ಕುಮಾರ್‌ಗೌಡ, ಸುಶೀಲಾ ನಂಜಪ್ಪ, ಬಿ.ಪಿ.ಬೋರೇಗೌಡ, ಎ.ರವಿ, ಗುರುರಾಜ್, ಉಮೇಶ್, ಗಿರೀಶ್‌ಗೌಡ, ಗೋಪಾಲ್, ಕುಮಾರ್, ರಾಜು ಪಿಎಚ್, ಪ್ರಸನ್ನ ಲಕ್ಷ್ಮಣ್, ಮುಖಂಡರಾದ ಜಗದೀಶ್ ಮಾಯಣ್ಣ, ವಿಕ್ರಾಂತ್ ಪಿ. ದೇವೇಗೌಡ, ಎನ್‌ಆರ್ ಮೊಹಲ್ಲಾ ರಾಮಣ್ಣ, ಹನುಮಂತೇಶ್ ಇದ್ದರು.

ಸಾಧಕರಿಗೆ ರಾಜೇಂದ್ರ ಶ್ರೀ ಸೇವಾ ಪ್ರಶಸ್ತಿ ಪ್ರದಾನ

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಸೇರಿ ಮೂವರಿಗೆ ಪ್ರಶಸ್ತಿ



ಮೈಸೂರು, ಸೆ.17 (ಆರ್‌ಕೆಬಿ)– ಮೈಸೂರು ಶರಣ ಮಂಡಲಿ ವತಿಯಿಂದ ಶನಿವಾರ ಮೈಸೂರು ಪತ್ರಕರ್ತರ ಭವನದಲ್ಲಿ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ತೆರಿಗೆ ಸಲಹೆಗಾರ ಹಾಗೂ ಸಮಾಜ ಸೇವಕ ಕೃಷ್ಣೇಗೌಡ, ಧಾರ್ಮಿಕ ಚಿಂತಕ ನಟರಾಜ್ ಜೋಯಿಸ್ ಅವರಿಗೆ ರಾಜೇಂದ್ರ ಶ್ರೀಗಳ ಸೇವಾ ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಪತ್ರಿಕಾ ವಿತರಕರೇ ಸಂಘಟನೆ ಮಾಡಿಕೊಂಡರೆ ತಮ್ಮ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದು ನಿವಾರಣೆ ಮಾಡಿಕೊಡಲು ಸಹಾಯಕವಾಗುತ್ತದೆ ಎಂದು ಹೇಳಿದ್ದೆ. ಅದರಂತೆ ಪತ್ರಿಕಾ ವಿತರಕರ ಸಂಘಟನೆ ರಚನೆಯಾಗಿದೆ. ಪತ್ರಿಕಾ ವಿತರಕರೆಂದರೆ ಅಸಡ್ಡೆಯಿಂದ ಕಾಣುವ ಕಾಲವೊಂದಿತ್ತು. ಈಗ ಹಾಗಿಲ್ಲ. ಸೆ.4ರಂದು ವಿಶ್ವ ಪತ್ರಿಕಾ ವಿತರಕರ ದಿನದಂದು ಮುಖ್ಯಮಂತ್ರಿಗಳು ವಿತರಕರಿಗೆ ಶುಭಾಶಯ ಕೋರಿದ್ದಾರೆ. ಇದು ಇತಿಹಾಸದಲ್ಲಿಯೇ ಮೊದಲು ಎಂದರು.

ಸದಾ ಒತ್ತಡದಲ್ಲೇ ಕಾಲ ದೂಡುವ ಪತ್ರಕರ್ತರಿಗೂ ಅವರದೇ ಆದ ಕುಟುಂಬ, ಜೀವನ ಇರುತ್ತದೆ. ಸರ್ಕಾರದ ಯೋಜನೆಗಳ ಮೂಲಕ ಪತ್ರಕರ್ತರಿಗೆ, ಕಾರ್ಯನಿರತ ಪತ್ರಕರ್ತರ ಸಂಘ ನೆರವಾಗುತ್ತಾ ಬಂದಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಸಮಾಜ ಸುಧಾರಣೆಯಲ್ಲಿ 4ನೇ ಅಂಗವಾದ ಪತ್ರಕರ್ತರು, ಶಕ್ತಿಯುತ ಲೇಖನಿ ಮೂಲಕ ಸಮಾಜವನ್ನು ತಿದ್ದುವ ಕೆಲಸವನ್ನು ಮಾಡುತ್ತಿದ್ದಾರೆ. ಅವರದ್ದು ನಿಜವಾಗಿಯೂ ಶ್ಲಾಘನೀಯ ಕಾರ್ಯ ಎಂದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಉದ್ಯಮಿ ಮಹೇಶ್ ಶೆಣೈ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಮೈಸೂರು ಶರಣ ಮಂಡಲಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

'ಶಿಷ್ಯರು ಮೆಚ್ಚಿದ ಗುರು ಪ್ರಶಸ್ತಿ'ಗೆ ಶಿಷ್ಯರಿಂದ ಗುರುಗಳ ಹೆಸರು ಆಹ್ವಾನ

ಮೈಸೂರು,ಸೆ.17(ಆರ್‌ಕೆಬಿ)–ಶಿಕ್ಷಕರ ದಿನಾಚರಣೆ ಅಂಗವಾಗಿ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ವಿದ್ಯಾವರ್ಧಕ ಸಂಘ, ನೇಗಿಲಯೋಗಿ ವಿದ್ಯಾವರ್ಧಕ ವೃತ್ತಿ ಮಾರ್ಗದರ್ಶನ ಮತ್ತು ಸ್ಪರ್ಧಾ ಕೇಂದ್ರದ ವತಿಯಿಂದ ಮೈಸೂರು ವಿಭಾಗ ಮಟ್ಟದ ಶಿಷ್ಯರು ಮೆಚ್ಚಿದ ಗುರು ಪ್ರಶಸ್ತಿ ನೀಡಲಾಗುತ್ತಿದೆ. ಹೀಗಾಗಿ ಅಂತಹವರ ಹೆಸರನ್ನು ಶಿಷ್ಯರು ಶಿಫಾರಸು ಮಾಡಬಹುದಾಗಿದೆ ಎಂದು ಸಾಹಿತಿ ಟಿ.ಸತೀಶ್ ಜವರೇಗೌಡ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವಿವಿಧ ಕೋರ್ಸ್‌ಗಳಲ್ಲಿ ಬೋಧನೆ ಮಾಡುತ್ತಿರುವ ಹಾಗೂ ವಿದ್ಯಾರ್ಥಿಗಳು ಮೆಚ್ಚಿದ ಓರ್ವ ಗುರುವನ್ನು ಗುರುತಿಸಿ ಅಭಿನಂದಿಸುವ ಉದ್ದೇಶ ಹೊಂದಲಾಗಿದೆ. ಈ ರೀತಿ ಎಲ್ಲಾ ಕೋರ್ಸ್‌ಗಳ ಗುರುಗಳನ್ನು ಗುರುತಿಸಿ ಪ್ರೋತ್ಸಾಹಿಸಲಾಗುತ್ತಿದೆ. ವಿವಿಧ ಶೈಕ್ಷಣಿಕ ವಿಭಾಗದಲ್ಲಿ ವಿದ್ಯಾರ್ಥಿಗಳು ತಮ್ಮ ಮೆಚ್ಚಿನ ಓರ್ವ ಗುರುವನ್ನು ಗುರುತಿಸಿ ತಮ್ಮ ಸಂಸ್ಥೆಗೆ ಪ್ರಶಸ್ತಿಗಾಗಿ ಶಿಫಾರಸು ಮಾಡಬಹುದು ಎಂದರು. ಸೆ.30ರೊಳಗೆ ಅರ್ಜಿ ಪಡೆದು ಅ.6ರೊಳಗೆ ತಲುಪಿಸಬೇಕು. ಅ.16ರಂದು ಗಣ್ಯರ ಸಮ್ಮುಖದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಹೆಚ್ಚಿನ ಮಾಹಿತಿಗೆ ದೂ. 99006 29393 ಅನ್ನು ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಪುಟ್ಟಸ್ವಾಮಿಗೌಡ, ಡಾ.ಎ.ಎಂ.ಶ್ಯಾಮೇಶ್, ಡಾ.ವಿಜಯಕುಮಾರ್, ಎಂ.ಜಿ.ಮಂಜುನಾಥ್, ಆರ್.ಎನ್.ಶಿವಶಂಕರ್ ಉಪಸ್ಥಿತರಿದ್ದರು.

ಪ್ರಧಾನಿ ಮೋದಿ ಹುಟ್ಟುಹಬ್ಬಕ್ಕೆ ರಮ್ಯಾ ವಿಶ್

ಬೆಂಗಳೂರು: ಇಂದು ಪ್ರಧಾನಿ ಮೋದಿಯವರ 72ನೇ ವರ್ಷದ ಹುಟ್ಟುಹಬ್ಬ. ಈ ಹಿನ್ನೆಲೆಯಲ್ಲಿ ಗಣ್ಯರು, ರಾಜಕೀಯ ಮುಖಂಡರು ಎಲ್ಲರೂ ಪ್ರಧಾನಿಗಳಿಗೆ ಶುಭಾಶಯಗಳನ್ನು ತಿಳಿಸಿದ್ದಾರೆ. ಅಂತೆಯೇ ಮೋಹಕ ತಾರೆ, ಮಾಜಿ ಲೋಕಸಭಾ ಸದಸ್ಯೆ ರಮ್ಯಾ ಕೂಡ ನರೇಂದ್ರ ಮೋದಿಯವರಿಗೆ ಶುಭಾಶಯ ತಿಳಿಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಮೋಹಕ ತಾರೆ ರಮ್ಯಾ ಅವರು, ನಮ್ಮ ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ ಹುಟ್ಟುಹಬ್ಬದ ಶುಭಾಶಯಗಳು. ಶಕ್ತಿ, ಸ್ಫೂರ್ತಿ ಸದಾ ನಿಮ್ಮೊಂದಿಗಿರಲಿ ಎಂದು ಶುಭ ಹಾರೈಸಿದ್ದಾರೆ. ರಮ್ಯಾ ಪ್ರಧಾನಿಗಳಿಗೆ ವಿಶ್ ಮಾಡುತ್ತಿದ್ದಂತೆಯೇ ಹಲವಾರು ಮಂದಿ ಈ ಟ್ವೀಟ್‌ಗೆ ಪ್ರತಿಕ್ರಿಯಿಸಿದ್ದಾರೆ.



ಪಿಹೆಚ್.ಡಿ ಸಂಶೋಧನೆಗೆ ಅರ್ಜಿ ಆಹ್ವಾನ

ಮೈಸೂರು,ಸೆ.17–ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಡಿ.ಎಸ್.ಟಿ ವಿಜ್ಞಾನ ಮತ್ತು ಇಂಜಿನಿಯರಿಂಗ್‌ನಲ್ಲಿ ಪಿ.ಎಚ್.ಡಿ ಸಂಶೋಧನೆಗೆ ಅರ್ಹ ಸಂಶೋಧನಾ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಅ.12ರೊಳಗಾಗಿ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ http://ksteps.karnataka.gov.in ಮೂಲಕ ಮಾಹಿತಿ ಪಡೆಯಬಹುದು.



ಹುಟ್ಟುಹಬ್ಬ ಆಚರಿಸಿಕೊಂಡ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮಾಜಿ ಅಧ್ಯಕ್ಷ ಎನ್.ಅರುಣ್‌ಕುಮಾರ್‌ಗೌಡರನ್ನು ಬಿಜೆಪಿ ಮುಖಂಡರು ಅಭಿನಂದಿಸಿದರು. ಈ ವೇಳೆ ಜಿಲ್ಲಾ ಮಾಧ್ಯಮ ಪ್ರಮುಖ ರಾಜ್‌ಕುಮಾರ್, ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಪೈ.ಟಿ.ರವಿ, ಭೂ ನ್ಯಾಯ ಮಂಡಳಿ ಸದಸ್ಯ ಗೋಪಾಲಗೌಡ, ತಾಲೂಕು ಕೆಡಿಪಿ ಸದಸ್ಯ ಗಣೇಶ್ ಹಿನಕಲ್, ಬೆಳವಾಡಿ ಮಂಜು, ಶಂಭು ಪಟೇಲ್, ಸೀಗಳ್ಳಿ ರವಿ, ನೇಹಾ, ಮಂಜು ವಿಜಯನಗರ, ಬಲ್ಲಹಳ್ಳಿ ಮಹೇಶ್, ಬೋಗಾದಿ ನಿಂಗರಾಜು, ಯೋಗೇಶ್, ಗ್ಯಾರೇಜ್ ಪುಟ್ಟು, ಸಮೀರ್, ಕುಮಾರ್ ಮತ್ತಿತರರು ಉಪಸ್ಥಿತರಿದ್ದರು

ನಕ್ಕರೆ ಅದೇ ಸ್ವರ್ಗ

ಟೀಚರ್ : ನಿಮ್ಮ ಮಗನನ್ನು ಹೇಗೆ ಬೆಳೆಸಿದ್ದೀರಿ ನೋಡಿ

ಪೋಷಕರು : ಯಾಕೆ? ಏನಾಯ್ತು?

ಟೀಚರ್ : ನಿನ್ನೆ ನಿಮ್ಮ ಮಗ, ಮೇಡಂ ಪೋಲೀಸರು ಲಾಠಿ ಚಾರ್ಜ್ ಮಾಡುವಾಗ ಬಳಸುವ ಚಾರ್ಜರ್ ನೋಕಿಯಾ ಕಂಪನಿಯದಾ ಅಂತ ಕೇಳಿದ

ಮೈಸೂರು ಮಿತ್ರ

ಭಾನುವಾರ, 18 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಜಯದ ರಹಸ್ಯ ಕೈ ಹಾಕಿದ ಕಾರ್ಯದಲ್ಲಿ ನೆಲೆಯಾಗಿ ನಿಲ್ಲುವುದೇ ಆಗಿದೆ.

–ಡಿಸ್ರೇಲಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಊರ್ನೋಡು ಅಂದ್ರೆ ತಡಿ ಮೊದಲು ಸೂರ್ನೋಡ್ತೀನಿ ಅಂದ್ನಂತೆ

ನಿಮ್ಮ ಪತ್ರಗಳು

ಪೌರಕಾರ್ಮಿಕರ ಸ್ವಾಭಿಮಾನದ ಬದುಕು...

ಮಾನ್ಯರೆ,

ಇನ್ನು ಮುಂದೆ ಜಾಡಮಾಲಿಗಳನ್ನು ಪೌರಕಾರ್ಮಿಕರು ಎಂದು ಕರೆಯಲಾಗುವುದು. ಇದಕ್ಕಾಗಿ ರಾಜ್ಯ ಸರ್ಕಾರ ಆಜ್ಞೆ ಹೊರಡಿಸಲಿದೆ ಎಂದು ಪೌರಾಡಳಿತ ಸಚಿವ ಬಿ. ಬಸವಲಿಂಗಪ್ಪನವರು ವರದಿಗಾರರಿಗೆ ತಿಳಿಸಿದ ಮಹತ್ವದ ದಿನಕ್ಕೆ ಇಂದಿಗೆ (15.09.2022) ಸರಿಯಾಗಿ 50 ವರ್ಷ.

ತಲೆ ಮೇಲೆ ಮಲ ಹೊರುವ ಪದ್ಧತಿಯಂತಹ ಅನಿಷ್ಟ ಪದ್ಧತಿಯನ್ನು ಕರ್ನಾಟಕ ರಾಜ್ಯದಲ್ಲೇ ವೊಟ್ಟ ಮೊದಲ ಬಾರಿಗೆ ನಿಷೇಧ ಮಾಡಿದ ಹೆಗ್ಗಳಿಕೆ ಕೆಚ್ಚೆದೆಯ ಹೋರಾಟಗಾರ ಸ್ವಾಭಿಮಾನಿ ನಾಯಕ ಬಿ.ಬಸವಲಿಂಗಪ್ಪನವರಿಗೆ ಸಲ್ಲಲೇಬೇಕು. ಅಂದು ಈ ಅನಿಷ್ಟ ಪದ್ಧತಿಯ ನಿಷೇಧದ ಸಂದರ್ಭದಲ್ಲಿ ಅವರು ಹಾಡಿದ ಕೆಚ್ಚೆದೆಯ ಆ ಮಾತುಗಳನ್ನು ಈಗ ನೆನಪಿಸಿಕೊಂಡರೂ ಮೈ ಜುಮ್ಮೆನ್ನುತ್ತದೆ. ಅಂತಹ ಮಾನವ ಘನತೆಯ ಮಾತುಗಳನ್ನು ಎಲ್ಲರ ಮಾಹಿತಿಗಾಗಿ ಇಲ್ಲಿ ಉಲ್ಲೇಖಿಸಿದ್ದೇನೆ ಅಂದು ಬಿ.ಬಸವಲಿಂಗಪ್ಪನವರು ಮಾತನಾಡುತ್ತಾ ನಾನು ವೇದಿಕೆಯಲ್ಲಿ ಮಲ, ಮೂತ್ರ ಅಂತ ಹೇಳಿದರೆ ಅಲ್ಲಿದ್ದವರೆಲ್ಲಾ "ಅಸಿಸಿಸೀ" ಅಂತ ಹೇಳುತ್ತಿದ್ದರು. ಬರಿ ಹೇಳಿದನ್ನು ಕೇಳಿಯೇ ನಿಮಗೆ "ಅಸಿಸಿಸೀ" ಅನ್ನಿಸಿದರೆ ಅದನ್ನು "ಹೊರುವಂತಹ" ವ್ಯಕ್ತಿಗೆ ಹೇಗಿರಬೇಕು? ಎಂದು ಕಠೋರವಾಗಿ ಪ್ರಶ್ನಿಸಿದರಂತೆ.

ಎಂತಹ ಗಟ್ಟಿತನವಿತ್ತು ನೋಡಿ ನಮ್ಮ ಕ್ರಾಂತಿಕಾರಿ ನಾಯಕರಾದ "ಬಿ. ಬಸವಲಿಂಗಪ್ಪ" ನವರಿಗೆ. ಇಂತಹ ಸ್ವಾಭಿಮಾನಿ ನಾಯಕರ ದೂರದೃಷ್ಟಿತನದಿಂದಾಗಿಯೇ ಸಮಾಜದಲ್ಲಿ ಇಂದು ಪೌರಕಾರ್ಮಿಕರು ಎಲ್ಲರ ಹಾಗೆ ಸ್ವಾಭಿಮಾನದ ಬದುಕನ್ನು ಬದುಕುವಂತಾಯಿತು. ಇಂದಿನ ರಾಜಕಾರಣಿಗಳು ಸಹ ಇಂತಹ ಸ್ವಾಭಿಮಾನಿ ನಾಯಕರ ನಡೆ ನುಡಿಗಳನ್ನು ಆದರ್ಶವಾಗಿ ತೆಗೆದುಕೊಂಡು ಅವರ ಹಾಗೆಯೇ ಸಮಾಜಮುಖಿ ಕೆಲಸಗಳನ್ನು ಮಾಡುತ್ತಾ ಇತರರಿಗೂ ಮಾದರಿಯಾಗಲಿ ಎಂಬುದು ನಮ್ಮಂತಹವರ ಆಶಯ.

–ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ ತಾ.

ಸಿಇಟಿ ವಿವಾದ ಕೂಡಲೇ ಬಗೆಹರಿಸಿ

ಮಾನ್ಯರೆ,

ರಾಜ್ಯದಲ್ಲಿ ಸಿಇಟಿ ಕೌನ್ಸಿಲಿಂಗ್ ವಿಳಂಬವಾಗುತ್ತಿರುವ ಕಾರಣ, ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಅತಂತ್ರ ಸ್ಥಿತಿಯಲ್ಲಿದೆ ಈಗಾಗಲೇ ಖಾಸಗಿ ವಿಶ್ವವಿದ್ಯಾಲಯಗಳು ಶೇ.60 ರಷ್ಟು ಸೀಟುಗಳನ್ನು ಭರ್ತಿ ಮಾಡಿಕೊಂಡು, ಲಾಭ ಗಳಿಸುವ ಹುನ್ನಾರ ಮುಂದುವರೆಸಿಕೊಂಡು ಹೋಗುತ್ತಿವೆ. ಆದರೆ ಸಿಇಟಿ ವಿದ್ಯಾರ್ಥಿಗಳ ಕೌನ್ಸಿಲಿಂಗ್ ಪ್ರಾರಂಭವಾಗದೇ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯ ಅತಂತ್ರ ಸ್ಥಿತಿಯಲ್ಲಿದೆ

ಸಿಇಟಿ ಪುನರಾವರ್ತಿತ ವಿದ್ಯಾರ್ಥಿಗಳ ವಿಷಯದಲ್ಲಿ ಸರ್ಕಾರ ಎಡವಿತ್ತು ಫಲಿತಾಂಶ ಪ್ರಕಟಿಸುವಾಗ ಆ ವಿದ್ಯಾರ್ಥಿಗಳ ದ್ವಿತೀಯ ಪಿಯುಸಿ ಫಲಿತಾಂಶವನ್ನು ಗಣನೆಗೆ ತೆಗೆದುಕೊಳ್ಳದೆ, ಕೇವಲ ಸಿಇಟಿ ರ್‍ಯಾಂಕ್ ನೀಡಲಾಗಿತ್ತು ಆ ಸಮಯದಲ್ಲಿ ತಾರತಮ್ಯಕ್ಕೆ ಒಳಗಾಗಿದ್ದ ವಿದ್ಯಾರ್ಥಿಗಳ ಹೋರಾಟ ಭುಗಿಲೆದ್ದಿತು. ನಂತರ ಉಚ್ಚ ನ್ಯಾಯಾಲಯ, ಪುನರಾವರ್ತಿತ ವಿದ್ಯಾರ್ಥಿಗಳ ಶೇ. 50 ರಷ್ಟು ದ್ವಿತೀಯ ಪಿಯುಸಿ ಫಲಿತಾಂಶವನ್ನು ಸೇರ್ಪಡೆ ಮಾಡಬೇಕೆಂದು ತೀರ್ಪು ನೀಡಿತು. ಈ ಸಂಬಂಧ ಮತ್ತೆ ನ್ಯಾಯಾಲಯದ ಮೊರೆ ಹೋಗುವುದಾಗಿ ಸರ್ಕಾರ ಹೇಳಿದೆ. ತ್ವರಿತಗತಿಯಲ್ಲಿ ಸಮಸ್ಯೆ ಪರಿಹರಿಸಿ ಕೌನ್ಸಿಲಿಂಗ್ ಆರಂಭಿಸುವ ಬದಲು, ಸರ್ಕಾರವು ಈ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸುವ ರೀತಿಯಲ್ಲಿ ನಡೆದುಕೊಳ್ಳುತ್ತಿದೆ.

ಈ ಕೂಡಲೇ ಸಿಇಟಿ ಕುರಿತಾದ ಸಮಸ್ಯೆ ಪರಿಹರಿಸಿ ಎಲ್ಲ ವಿದ್ಯಾರ್ಥಿಗಳಿಗೂ ಕೌನ್ಸಿಲಿಂಗ್ ಪ್ರಾರಂಭಿಸಿ, ತಕ್ಷಣ ವಿದ್ಯಾರ್ಥಿಗಳು ಕಾಲೇಜುಗಳಿಗೆ ಪ್ರವೇಶ ಪಡೆಯುವಂತೆ ಸರ್ಕಾರ ಕ್ರಮ ವಹಿಸಬೇಕು. ಸಿಇಟಿ ಕೌನ್ಸಿಲಿಂಗ್‌ನಲ್ಲಿ ಸೃಷ್ಟಿಯಾಗಿರುವ ವ್ಯಾಜ್ಯವನ್ನು ಬಗೆಹರಿಸಲು ಈ ಕೂಡಲೇ ತಜ್ಞರ ಸಮಿತಿಯನ್ನು ರಚಿಸಿ, ಅವರ ಮಾರ್ಗದರ್ಶನದ ಆಧಾರದ ಮೇಲೆ ಸರ್ಕಾರ ಮುನ್ನಡೆಯಬೇಕು. ಬದಲಾಗಿ ಸರ್ಕಾರದ ವಿಳಂಬನೀತಿಗೆ ವಿದ್ಯಾರ್ಥಿಗಳನ್ನು ಬಲಿಪಶು ಮಾಡಬಾರದು.

–ಚಂದ್ರಕಲಾ, ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ, ಮೈಸೂರು.

ಪಾಲಿಕೆಯ ಬೇಜವಾಬ್ದಾರಿತನ!

ಮಾನ್ಯರೆ,

ದೀಪಾವಳಿಯ ನರಕ ಚತುರ್ದಶಿಯಂದು ಎಣ್ಣೆ ಸ್ನಾನ ಮಾಡುವ ಸಂಪ್ರದಾಯವಿದೆ. ಹಾಗೆಂದ ಮಾತ್ರಕ್ಕೆ ದೀಪಾವಳಿಯಂದು ಮಾತ್ರ ಸ್ನಾನ ಮಾಡಬೇಕು ಎಂದುಕೊಂಡು ಉಳಿದ 364 ದಿನ ಸ್ನಾನ ಮಾಡದೇ ಇರುವುದು ಮೂರ್ಖತನ! ನಮ್ಮ ಮೈಸೂರು ಮಹಾನಗರ ಪಾಲಿಕೆಯೂ ಇಂತಹ ಮೂರ್ಖತನಕ್ಕೆ ಸಾಕ್ಷಿಯಾಗುತ್ತಲೇ ಇದೆ. ದಸರಾ ಸಮಯದಲ್ಲಿ ಗುಂಡಿಬಿದ್ದ ರಸ್ತೆಗಳನ್ನು ದುರಸ್ತಿ ಮಾಡಿ ಸುಣ್ಣ ಬಣ್ಣ ಮೆತ್ತಿ ತೇಪೆ ಹಚ್ಚಿ ಸಿಂಗರಿಸುವುದು ಪಾಲಿಕೆಯ ಸಂಪ್ರದಾಯ! ಹಾಗೆಂದ ಮಾತ್ರಕ್ಕೆ ದಸರಾ ಸಮಯದಲ್ಲಿ ಮಾತ್ರ ರಸ್ತೆಗೆ ತೇಪೆ ಹಾಕಿ ಉಳಿದ ಸಮಯದಲ್ಲಿ ತೆಪ್ಪಗಿರಬೇಕು ಎಂದು ಪಾಲಿಕೆಯು ತೀರ್ಮಾನಿಸಿದಂತಿದೆ. ಪಾಲಿಕೆಯ ಈ ಬೇಜವಾಬ್ದಾರಿಯಿಂದಾಗಿ ಮೈಸೂರಿನ ಕುಲಗೆಟ್ಟ ರಸ್ತೆಗಳೆಲ್ಲಾ ತೇಪೆ ಹಾಕಿಸಿಕೊಳ್ಳಲು ದಸರೆಯನ್ನು ಎದುರು ನೋಡುತ್ತಾ ಬಕಪಕ್ಷಿಯಂತೆ ಪ್ರತಿ ವರ್ಷ ಕಾಯುವಂತಾಗಿದೆ. ಮೈಸೂರು ಮಹಾನಗರ ಪಾಲಿಕೆಗೆ ಜ್ಞಾನೋದಯವಾಗುವುದು ಯಾವಾಗ?

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ ಮೈಸೂರು

ಪದ್ಮಶ್ರೀಗೆ ಶಿಫಾರಸು ಸ್ವಾಗತಾರ್ಹ

ಮಾನ್ಯರೆ,

ಕೊಡಗು ಹಾಗೂ ಮೈಸೂರು ಸಂಸದರು ಅನಾಥ ಶವಗಳ ಅಂತ್ಯಕ್ರಿಯೆಯ ಮುಕ್ತಿದಾತನಿಗೆ ಪದ್ಮಶ್ರೀ ಪ್ರಶಸ್ತಿಗೆ ಶಿಫಾರಸು ಮಾಡಿರುವುದು ಸ್ವಾಗತಾರ್ಹ. ಲಾಕ್‌ಡೌನ್ ಸಂದರ್ಭದಲ್ಲಿ ಕೋವಿಡ್‌ನಿಂದ ಮೃತಪಟ್ಟ ಶವಗಳನ್ನು ಸ್ವಂತ ಸಂಬಂಧಿಕರೇ ನೋಡಲು ಹಿಂಜರಿಯುತ್ತಿದ್ದ ಸಂದರ್ಭಗಳಲ್ಲಿ ಕೆಲವು ಮಕ್ಕಳು ಹೊರದೇಶಗಳಲ್ಲಿ ಇದ್ದು ಜನ್ಮ ನೀಡಿದ ತಂದೆ ತಾಯಂದಿರ ಶವ ಸಂಸ್ಕಾರ ಮಾಡಲು ಬರದೇ ಹತ್ತಿರದ ಸಂಬಂಧಿಕರ ನೇತೃತ್ವದಲ್ಲಿ ಅಂತ್ಯಸಂಸ್ಕಾರಗಳು ನಡೆದಿರುವ ಉದಾಹರಣೆಗಳು ಉಂಟು. ಇಂತಹ ಕಾಲಘಟ್ಟದಲ್ಲಿ ಹದಿನಾರು ಸಾವಿರ ಮೃತದೇಹಗಳ ಅಂತ್ಯಕ್ರಿಯೆಯನ್ನು ನಡೆಸಿರುವ ಹಾಗೂ ಮಾನವೀಯತೆ ಅನುಕಂಪದ ನೆಲೆಗಟ್ಟಿನಲ್ಲಿ ಬದುಕುತ್ತಿರುವ ಅಯೂಬ್ ಅಹಮದ್ ಅವರು ಸಾರ್ವಜನಿಕರಿಂದ ಕರೆ ಬಂದ ತಕ್ಷಣ ಅನಾಥ ಮೃತ ದೇಹಗಳ ಸ್ಥಳಕ್ಕೆ ಹೋಗಿ ಮರಣೋತ್ತರ ಪರೀಕ್ಷೆಯ ನಂತರ ಅನಾಥ ಶವಗಳ ವಾರಸುದಾರನಾಗಿ ಅಂತ್ಯಕ್ರಿಯೆಯನ್ನು ನೆರವೇರಿಸಿದ ಈ ಮುಕ್ತಿದಾತನಿಗೆ ಸಂಸದರು ಪದ್ಮಶ್ರೀ ಪ್ರಶಸ್ತಿಗೆ ಶಿಫಾರಸ್ಸು ಮಾಡಿರುವುದು ಸ್ವಾಗತಾರ್ಹ ಹಾಗೂ ಈ ಪ್ರಶಸ್ತಿ ಲಭಿಸಲಿ ಎಂಬ ಆಶಯ ಕೂಡ.

–ಕಂಗಾಣಿಸೋಮು ಪಿ.ಸಿ., ಕ್ಯಾತಮಾರನಹಳ್ಳಿ ಮೈಸೂರು.




ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಶ್ರಮಿಸುವವಗೆ ಜೀರ್ಣ ಸರಾಗ
ವಿಶ್ರಮಿಸುವವಗೆ ರೋಗ ಬಲು ಬೇಗ...!





ಈ ದೇಹ ಇರುವುದು ಸುಖವಾಗಿ ಸಾಕಲಿ ಎಂದಲ್ಲ. ಅದು ಕಷ್ಟಪಟ್ಟಷ್ಟೂ ಬಲಶಾಲಿಯಾಗುತ್ತಾ ಹೋಗುತ್ತದೆ. ನಾವು ಬಿಸಿಲಿನಲ್ಲಿ ಕೆಲಸ ಮಾಡುವವರನ್ನು ನೋಡುತ್ತೇವೆ. ನಮಗೆ ಬಿಸಿಲಿನಲ್ಲಿ ಅರ್ಧ ಗಂಟೆಯೂ ನಿಲ್ಲಲಾಗುವುದಿಲ್ಲ. ಅಂತಹುದರಲ್ಲಿ ಈ ರೀತಿ ಬೀದಿಬದಿಯಲ್ಲಿ ಬಿಸಿಲಿನಲ್ಲಿ ಕೆಲಸ ಮಾಡುವವರನ್ನು ಕಂಡಾಗ ಒಂದು ರೀತಿ ಅಯ್ಯೋ ಪಾಪ!! ಎನ್ನಿಸುತ್ತದೆ. ಆದರೆ ಹಾಗೆ ಕೆಲಸ ಮಾಡುವವರ ಅಂಗಸೌಷ್ಟವ, ಅವರ ಅರೋಗ್ಯ ನೋಡಿದಾಗ ಅಂತಹ ಆರೋಗ್ಯ ನಮಗಿಲ್ಲವಲ್ಲ ಎಂಬ ಅಸೂಯೆ ಉಂಟಾಗುತ್ತದೆ.. ಇದೂ ಕಷ್ಟಪಟ್ಟಲ್ಲಿ ಸುಖವಿದೆ ಎಂಬುದರ ನಿದರ್ಶನ. ಇಲ್ಲಿ ಗಮನಿಸಬೇಕಾದ ಮತ್ತೂ ಒಂದು ಅಂಶವೆಂದರೆ, ದೇಹಕ್ಕೆ ಶ್ರಮವಾದಾಗ ಅದಕ್ಕೆ ವಿಶ್ರಾಂತಿ ನೀಡಬೇಕು. ವಿಶ್ರಾಂತಿ ನೀಡದೆ, ಹೆಚ್ಚು ಕೆಲಸವಿದೆ ಎಂದು ಮತ್ತಷ್ಟು ಕೆಲಸವನ್ನು ಮಾಡಿದಾಗ, ಅದಕ್ಕೆ ದೇಹ ಸರಿಯಾಗಿ ಸ್ಪಂದಿಸುವುದಿಲ್ಲ, ಮಾಡಿದ ಕೆಲಸವೂ ಸಮರ್ಪಕವಾಗಿರುವುದಿಲ್ಲ. ಇದರ ಮತ್ತೊಂದು ಮುಖ ಎಂದರೆ ಕೆಲಸಕ್ಕಿಂತ ಹೆಚ್ಚು ವಿಶ್ರಾಂತಿ ಪಡೆದರೂ ದೇಹ ಮತ್ತೆ ಚಟುವಟಿಕೆಗೆ ಒಗ್ಗಿಕೊಳ್ಳದು.

ನಮ್ಮ ಕನ್ನಡದಲ್ಲಿ ಬಹಳ ಉತ್ತಮವಾದ ಒಂದು ಮಾತಿದೆ. ಅದೆಂದರೆ 'ಶ್ರಮಿಸುವವಗೆ ಜೀರ್ಣ ಸರಾಗ, ವಿಶ್ರಮಿಸುವವಗೆ ರೋಗ ಬಲು ಬೇಗ'. ಶ್ರಮ ಮತ್ತು ವಿಶ್ರಮ ಎರಡರಲ್ಲಿ ಒಂದು ಅಕ್ಷರ ಮಾತ್ರ ವ್ಯತ್ಯಾಸ. ವಿಶ್ರಮದಲ್ಲೂ ಶ್ರಮವಿದೆ. ಆದರೆ ಅದು ಶ್ರಮದಿಂದ ಬಳಲಿದಾಗ, ಅದನ್ನು ನಿವಾರಣೆ ಮಾಡಿಕೊಳ್ಳಲು ಬಳಸುವಂತಹುದು. ವಿಶ್ರಮ ಪಡೆಯಬೇಕಾದರೆ ಶ್ರಮವಿರಬೇಕು. ಅಥವಾ ಎಷ್ಟು ಶ್ರಮಪಟ್ಟಿದ್ದೇವೆಯೋ ಅಷ್ಟು ವಿಶ್ರಮ ಬೇಕು. ಶ್ರಮ ಪಡದಿದ್ದರೆ ವಿಶ್ರಮಕ್ಕೆ ಬೆಲೆ ಇಲ್ಲ. ಬರೀ ಶ್ರಮಪಡುವುದೂ ಸರಿಯಲ್ಲ ಹಾಗೇ ಶ್ರಮವೇ ಇಲ್ಲದೆ ವಿಶ್ರಮ ಪಡೆಯುವುದೂ ಸರಿಯಲ್ಲ. ನಮ್ಮ ದೇಹಕ್ಕೆ ಎಷ್ಟು ಶ್ರಮ ಹಾಕಬೇಕು ಹಾಗೂ ಆ ರೀತಿಯ ಶ್ರಮ ಹಾಕಿದಾಗ ಎಷ್ಟು ವಿಶ್ರಾಂತಿಬೇಕು ಎಂಬುದು ಶ್ರಮಪಡುವವರ ವಯಸ್ಸಿನ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ಶ್ರಮಪಟ್ಟ ನಂತರ ವಿಶ್ರಾಂತಿ ಪಡೆಯಬೇಕು, ಅದೂ ಶ್ರಮಕ್ಕೆ ತಕ್ಕಷ್ಟು.

ನಮಗೆ ಬಹಳ ಶ್ರಮವಾದಾಗ ನಮ್ಮ ಬಾಯಿಂದ ಬರುವ ಮಾತೆಂದರೆ, 'ಬಹಳ ಶ್ರಮವಾಗಿದೆ. ಒಂದೆರಡು ದಿನ ವಿಶ್ರಾಂತಿ ಪಡೆಯಬೇಕು' ಎಂದು. ಆದರೆ ನಾವು ಎಷ್ಟೇ ಶ್ರಮಪಟ್ಟರೂ ಒಂದು ಉತ್ತಮವಾದ ನಿದ್ರೆ ಆ ಶ್ರಮವನ್ನು ವಿಶ್ರಮಗೊಳಿಸುತ್ತದೆ. ಆದರೆ ಒಂದಂತೂ ಸತ್ಯ, ಹೆಚ್ಚು ಶ್ರಮವಾದಾಗ ದೇಹ ತಾನಾಗಿಯೇ ವಿಶ್ರಾಂತಿ ಬಯಸುತ್ತದೆ. ಆದರೆ ಅಗತ್ಯಕ್ಕಿಂತ ಹೆಚ್ಚು ವಿಶ್ರಾಂತಿ ಪಡೆದಾಗ ದೇಹಕ್ಕೆ ಆಲಸ್ಯ ಉಂಟಾಗುತ್ತದೆ, ಹಾಗಾದಾಗ ಲವಲವಿಕೆ ಇರುವುದಿಲ್ಲ. ಅಂದರೆ ದೇಹಕ್ಕೆ ಶ್ರಮಕ್ಕಿಂತ ಹೆಚ್ಚಿನ ವಿಶ್ರಾಂತಿ ಬೇಕಾಗಿರುವುದಿಲ್ಲ. ನಾವೇ ಮನಸ್ಸಿನಲ್ಲಿ ನನಗೆ ಹೆಚ್ಚು ಶ್ರಮವಾಗಿದೆ, ದಿನಗಟ್ಟಲೇ ಮಲಗಿಬಿಡಬೇಕು ಎಂದುಕೊಂಡರೂ, ದೇಹ ಅಗತ್ಯಕ್ಕಿಂತ ಹೆಚ್ಚಿನ ವಿಶ್ರಮವನ್ನು ಇಚ್ಛಿಸುವುದಿಲ್ಲ. ಹಾಗೆ ನೋಡಿದರೆ ಹೆಚ್ಚು ದಣಿವಾದಾಗ ನಿದ್ರೆ ಬೇಗ ಹತ್ತುವುದೂ ಇಲ್ಲ. ಮೊದಲು ಮನಸ್ಸು ಶಾಂತವಾದರೆ ನಂತರವೇ ದೇಹ ವಿಶ್ರಾಂತಿಗೆ ತೆರಳುತ್ತದೆ. ಆದರೆ ನಾವು ದೇಹದ ಮಾತು ಕೇಳದೇ ಹೆಚ್ಚು ವಿಶ್ರಾಂತಿ ಬಯಸಿದಲ್ಲಿ ಅದಕ್ಕೆ ದೇಹ ಸೂಕ್ತವಾಗಿ ಪ್ರತಿಕ್ರಿಯಿಸುವುದಿಲ್ಲ. ದೇಹ ಆಲಸ್ಯವನ್ನು ಪ್ರಕಟಿಸುತ್ತದೆ. ಈ ಬಗ್ಗೆ ನಾವು ವಿದ್ಯಾರ್ಥಿಗಳ ಉದಾಹರಣೆ ಗಮನಿಸಬಹುದು. ಅವರು ಪರೀಕ್ಷಾ ಸಮಯದಲ್ಲಿ ಓದುವಾಗ ಹೆಚ್ಚು ನಿದ್ರೆ ಬೇಕೆನಿಸುತ್ತದೆ. ಏಕೆಂದರೆ ಕಣ್ಣಿಗೆ ಓದಿನಿಂದ ಶ್ರಮವಾಗಿರುತ್ತದೆ. ಅವರು ಪರೀಕ್ಷೆ ಮುಗಿಸಿದ ಮರುದಿನ ಇವತ್ತು ಹೆಚ್ಚು ಹೊತ್ತು ಮಲಗುತ್ತೇನೆ ಎಂದರೆ ಅವರು ಅಂದುಕೊಂಡಷ್ಟು ನಿದ್ರೆ ಬರುವುದಿಲ್ಲ. ಏಕೆಂದರೆ ಪರೀಕ್ಷೆ ಮುಗಿದ ನಂತರದ ದಿನ ಅವರು ಹಿಂದಿನ ದಿನಗಳಂತೆ ಓದುವುದಿಲ್ಲ. ಓದಿಲ್ಲ ಎಂದರೆ ಕಣ್ಣಿಗೆ ಶ್ರಮವಾಗಿರುವುದಿಲ್ಲ, ಹಾಗಾಗಿ ನಿದ್ರೆ ಬರುವುದಿಲ್ಲ. ಹಾಗೂ ಸುಮ್ಮನೆ ಹಾಸಿಗೆಯ ಮೇಲೆ ಹೊರಳಾಡಿದರೆ ಆಲಸಿಕೆ ಉಂಟಾಗುತ್ತದೆಯೇ ಹೊರತು ಅವರಂದು ಕೊಂಡಷ್ಟು ನಿದ್ರೆ ಬರುವುದಿಲ್ಲ. ಅಂದರೆ ಶ್ರಮವಿಲ್ಲದಿದ್ದಾಗ ವಿಶ್ರಾಂತಿ ಬೇಕಾಗುವುದಿಲ್ಲ ಎಂದು ಅರ್ಥ. ಅಗತ್ಯವಿದ್ದಾಗ ಮಾತ್ರ ವಿಶ್ರಾಂತಿ ಪಡೆಯುವುದು ಸೂಕ್ತ.

ನನ್ನ ಪರಿಚಯದವರೊಬ್ಬರಿದ್ದಾರೆ. ಅವರಿಗೆ ಇತ್ತೀಚೆಗೆ ಹಗಲು ನಿದ್ರೆ ಮಾಡುವ ಅಭ್ಯಾಸವಾಗಿದೆ. ಅವರಿಗೆ ಯಾವುದೇ ದೈಹಿಕ ಶ್ರಮ ಇಲ್ಲ. ಅವರಿಗೆ ಬೆಳಗ್ಗೆ ತಿಂಡಿ ತಿಂದ ನಂತರ ಒಂದೆರಡು ಗಂಟೆ ನಿದ್ರೆಯ ಅಭ್ಯಾಸವಾಗಿದೆ. ಇದರಿಂದಾಗಿ ಅವರಿಗೆ ರಾತ್ರಿ ನಿದ್ರೆ ಬರುವುದಿಲ್ಲ. ಆಯಾಸವಿಲ್ಲದಿರುವುದರಿಂದ ದೇಹಕ್ಕೆ ಹೆಚ್ಚಿನ ನಿದ್ರೆ ಬೇಕಾಗಿಲ್ಲ. ಹಗಲು ನಿದ್ರೆ ಮಾಡುವುದರಿಂದ ದೇಹಕ್ಕೆ ಮತ್ತೆ ನಿದ್ರೆಯ ಅವಶ್ಯಕತೆ ಇಲ್ಲ. ಇದರಿಂದಾಗಿ ರಾತ್ರಿ ನಿದ್ರೆಯಿಲ್ಲದೆ ಹಾಸಿಗೆ ಮೇಲೆ ಹೊರಳಾಟವಾಗುತ್ತದೆ. ಇದನ್ನು ಬದಲಿಸಿಕೊಳ್ಳಬೇಕು. ದೇಹಕ್ಕೆ ವಿಶ್ರಾಂತಿ ಬೇಕು ನಿಜ. ಆದರೆ ಹೆಚ್ಚು ವಿಶ್ರಾಂತಿಯ ಅಗತ್ಯವಿಲ್ಲ ಎಂಬುದಕ್ಕೆ ಇದು ಒಂದು ಉದಾಹರಣೆ. ಅವರಿಗೆ ಕೊಟ್ಟ ಸಲಹೆ ಎಂದರೆ ಹೇಗಾದರೂ ಒಂದೆರಡು ದಿನ ಹಗಲು ನಿದ್ರೆ ಬಿಡಿ, ಆಗ ರಾತ್ರಿ ನಿದ್ರೆ ಬರುತ್ತದೆ ಎಂದು. ದೇಹಕ್ಕೆ ನಿದ್ರೆ ಬೇಕು ನಿಜ. ಆದರೆ ಅದಕ್ಕೆ ಹೆಚ್ಚು ವಿಶ್ರಾಂತಿ ಬೇಕಾಗಿರುವುದಿಲ್ಲ. ಅಗತ್ಯಕ್ಕಿಂತ ಹೆಚ್ಚು ವಿಶ್ರಾಂತಿ ಪಡೆಯುವುದು ರೋಗಗಳಿಗೆ ಆಹ್ವಾನ ನೀಡಿದಂತೆ ಆಗುತ್ತದೆ.

ಈ ದೇಹ ಇರುವುದು ಸುಖವಾಗಿ ಸಾಕಲಿ ಎಂದಲ್ಲ. ಅದು ಕಷ್ಟಪಟ್ಟಷ್ಟೂ ಬಲಶಾಲಿಯಾಗುತ್ತಾ ಹೋಗುತ್ತದೆ. ನಾವು ಬಿಸಿಲಿನಲ್ಲಿ ಕೆಲಸ ಮಾಡುವವರನ್ನು ನೋಡುತ್ತೇವೆ. ನಮಗೆ ಬಿಸಿಲಿನಲ್ಲಿ ಅರ್ಧ ಗಂಟೆಯೂ ನಿಲ್ಲಲಾಗುವುದಿಲ್ಲ. ಅಂತಹುದರಲ್ಲಿ ಈ ರೀತಿ ಬೀದಿಬದಿಯಲ್ಲಿ ಬಿಸಿಲಿನಲ್ಲಿ ಕೆಲಸ ಮಾಡುವವರನ್ನು ಕಂಡಾಗ ಒಂದು ರೀತಿ ಅಯ್ಯೋ ಪಾಪ!! ಎನ್ನಿಸುತ್ತದೆ. ಆದರೆ ಹಾಗೆ ಕೆಲಸ ಮಾಡುವವರ ಅಂಗಸೌಷ್ಟವ, ಅವರ ಅರೋಗ್ಯ ನೋಡಿದಾಗ ಅಂತಹ ಆರೋಗ್ಯ ನಮಗಿಲ್ಲವಲ್ಲ ಎಂಬ ಅಸೂಯೆ ಉಂಟಾಗುತ್ತದೆ.. ಇದೂ ಕಷ್ಟಪಟ್ಟಲ್ಲಿ ಸುಖವಿದೆ ಎಂಬುದರ ನಿದರ್ಶನ. ಇಲ್ಲಿ ಗಮನಿಸಬೇಕಾದ ಮತ್ತೂ ಒಂದು ಅಂಶವೆಂದರೆ, ದೇಹಕ್ಕೆ ಶ್ರಮವಾದಾಗ ಅದಕ್ಕೆ ವಿಶ್ರಾಂತಿ ನೀಡಬೇಕು. ವಿಶ್ರಾಂತಿ ನೀಡದೆ, ಹೆಚ್ಚು ಕೆಲಸವಿದೆ ಎಂದು ಮತ್ತಷ್ಟು ಕೆಲಸವನ್ನು ಮಾಡಿದಾಗ, ಅದಕ್ಕೆ ದೇಹ ಸರಿಯಾಗಿ ಸ್ಪಂದಿಸುವುದಿಲ್ಲ, ಮಾಡಿದ ಕೆಲಸವೂ ಸಮರ್ಪಕವಾಗಿರುವುದಿಲ್ಲ. ಇದರ ಮತ್ತೊಂದು ಮುಖ ಎಂದರೆ ಕೆಲಸಕ್ಕಿಂತ ಹೆಚ್ಚು ವಿಶ್ರಾಂತಿ ಪಡೆದರೂ ದೇಹ ಮತ್ತೆ ಚಟುವಟಿಕೆಗೆ ಒಗ್ಗಿಕೊಳ್ಳದು.

ಇತ್ತೀಚೆಗೆ ನಮ್ಮಲ್ಲಿ ಆರೋಗ್ಯದ ಬಗ್ಗೆ ಒಂದಷ್ಟು ಕಾಳಜಿ ಹೆಚ್ಚಾಗುತ್ತಿರುವುದನ್ನು ಗಮನಿಸಬಹುದಾಗಿದೆ. ಇಂದು ನಾವು ಅಡುಗೆಗೆ ಉಪಯೋಗಿಸುವ ಖಾದ್ಯತೈಲದಿಂದ ಹೆಚ್ಚು ಸಮಸ್ಯೆಯಾಗುತ್ತಿರುವುದು ನಮ್ಮ ಗಮನಕ್ಕೆ ಬರುತ್ತಿದೆ. ನಮ್ಮ ಆರೋಗ್ಯದಲ್ಲಿ ಏರುಪೇರಾದಾಗ ವೈದ್ಯರು ಹೇಳುವುದು ನಿಮ್ಮ ದೇಹಕ್ಕೆ ತಕ್ಕಂತೆ ಆಹಾರ ಸೇವಿಸಿ ಎಂದು. ನಮ್ಮ ಸಾಂಪ್ರದಾಯಿಕ ಆಹಾರವಲ್ಲದ್ದನ್ನು ಈ ದೇಹ ಸುಲಭವಾಗಿ ಅರಗಿಸಿಕೊಳ್ಳಲು ಕಷ್ಟಪಡುತ್ತದೆ. ಇತ್ತೀಚೆಗೆ ವೈದ್ಯರೊಬ್ಬರು ನೀಡಿದ ಮಾಹಿತಿ ಯೋಚಿಸುವಂತೆ ಮಾಡುತ್ತದೆ. ಅವರು ಹೇಳುವುದೇನೆಂದರೆ ಇತ್ತೀಚೆಗೆ 50 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಅಧಿಕ ಸಂಖ್ಯೆಯಲ್ಲಿ ಹೃದಯಾಘಾತಕ್ಕೆ ಒಳಗಾಗುತ್ತಿದ್ದಾರೆ. ಹಿಂದೆ ಹೀಗಿರಲಿಲ್ಲ. ಹೃದಯಾಘಾತ ಸಾಮಾನ್ಯವಾಗಿ ವಯಸ್ಸಾದವರಿಗೆ ಆಗುತ್ತಿತ್ತು. ಇದಕ್ಕೆ ಅಪರಾಧಿ ಕೆಲವೊಂದು ಅಡುಗೆ ಆಯಿಲ್ ಕಾರಣ ಎಂದು. ಅವರು ಇದಕ್ಕೆ ನೀಡುವ ವಿವರಣೆ ಭಯ ಹುಟ್ಟಿಸುತ್ತದೆ. ಇಂತಹ ಆಯಿಲ್‌ನ ಉಪಯೋಗ ಆಲ್ಕೋಹಾಲ್ ಮತ್ತು ಧೂಮಪಾನವನ್ನು ಒಟ್ಟಿಗೆ ಸೇರಿಸುವುದಕ್ಕಿಂತ ತುಂಬಾ ಅಪಾಯಕಾರಿ ಎಂದು. ದುರದೃಷ್ಟ ಎಂದರೆ ಪ್ರಪಂಚದಲ್ಲಿ ಅತೀ ಹೆಚ್ಚು ಅಡಿಗೆ ಎಣ್ಣೆಯನ್ನು ಆಮದು ಮಾಡಿಕೊಳ್ಳುವ ದೇಶಗಳಲ್ಲಿ ಭಾರತ ಮುಂಚೂಣಿಯಲ್ಲಿದೆ ಎಂದು ಅವರು ಹೇಳುತ್ತಾರೆ. ಅಡುಗೆ ಆಯಿಲ್ ಮಾಫಿಯಾ ಬಹಳ ದೊಡ್ಡದು. ಇದರಿಂದ ಭವಿಷ್ಯದ ನಮ್ಮ ಮಕ್ಕಳೂ ಅಪಾಯದಲ್ಲಿದ್ದಾರೆ ಎಂದು. ಇಂತಹ ಆಯಿಲ್ ಇಲ್ಲದ ತ್ವರಿತ ಆಹಾರ ನಮಗೆ ಸಿಗುವುದೇ ಇಲ್ಲ. ದೊಡ್ಡ ಕಂಪನಿಗಳಲ್ಲಿ ಬಿಸ್ಕಟ್‌ಗಳನ್ನು ಸಹಾ ಇದರಿಂದ ತಯಾರಿಸಲಾಗುತ್ತದೆ. ಅದೇ ರೀತಿ ಚಾಕೋಲೇಟ್‌ಗಳು ಸಹಾ ಎನ್ನುತ್ತಾರೆ. ಈವರೆವಿಗೆ ನಾವು ಕೆಲ ಅಡುಗೆ ಆಯಿಲ್ ತಿಳಿದಿರಲಿಲ್ಲ. ಲೇಸ್‌ನಂತಹ ದೊಡ್ಡ ಕಂಪನಿಗಳು ಪಾಶ್ಚಿಮಾತ್ಯ ದೇಶಗಳಲ್ಲಿ ವಿಭಿನ್ನ ತೈಲ ಬಳಸಿದರೆ ಭಾರತದಲ್ಲಿ ಆಮದು ಆಯಿಲ್ ಬಳಸುತ್ತವೆ ಎಂದು. ಇದನ್ನು ಹೆಚ್ಚಾಗಿ ಸೇವಿಸುವುದರಿಂದ ಮಕ್ಕಳಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಮಧುಮೇಹ ಅಥವಾ ಸಕ್ಕರೆ ಖಾಯಿಲೆ ಬರ ಬಹುದು ಎಂದು ಅವರು ಹೇಳುತ್ತಾರೆ ಆಯಿಲ್ ಮಾಫಿಯಾವು ನಮ್ಮ ಮಕ್ಕಳನ್ನು ಜಂಕ್‌ಫುಡ್‌ನ ದಾಸರನ್ನಾಗಿ ಮಾಡಿದೆ. ಹೃದಯ ರಕ್ಷಕವಾದ ಹಣ್ಣುಗಳು ಮತ್ತು ತರಕಾರಿಗಳನ್ನು ಮಕ್ಕಳು ಇಷ್ಟಪಡದಂತೆ ಮಾಡಿಟ್ಟಿವೆ ಎಂದು. ಇದು ನಿಜಕ್ಕೂ ಆತಂಕದ ವಿಷಯವಾಗಿದೆ. ಕಡಿಮೆ ಬೆಲೆಗೆ ಸಿಗುತ್ತದೆ ಎಂದು ಇಂತಹ ಖಾದ್ಯ ತೈಲ ಬಳಸಿ, ಆರೋಗ್ಯ ಕೆಟ್ಟಾಗ ಉಳಿಸಿದ ಹಣಕ್ಕೆ ನೂರಾರು ಪಟ್ಟು ಆಸ್ಪತ್ರೆಗಳಿಗೆ ವೆಚ್ಚ ಮಾಡಬೇಕಾಗುತ್ತದೆ.

ಅಂದರೆ ನಮ್ಮದಲ್ಲದ ಆಹಾರ ವಸ್ತುಗಳು ನಮಗೆ ತೊಂದರೆ ಉಂಟುಮಾಡುತ್ತದೆ. ಇತ್ತೀಚೆಗೆ ವೈದ್ಯರು ಹೇಳುವ ಮತ್ತೊಂದು ಮಾತೆಂದರೆ ನಿಮಗೆ ಸಕ್ಕರೆ ಖಾಯಿಲೆ ಬಂದಿದೆ ಎಂದರೆ ನೀವು ಹೆಚ್ಚಾಗಿ ಚಪಾತಿ ತಿನ್ನಿ ಎಂದು. ಆದರೆ ಸಮಾಜದ ಬಗ್ಗೆ ಕಾಳಜಿ ಇರುವ ವೈದ್ಯರು ಹೇಳುವುದೆಂದರೆ ನೀವು ಸಕ್ಕರೆ ಖಾಯಿಲೆಗೆ ಹೆದರಬೇಡಿ. ನೀವು ಚಪಾತಿ ತಿನ್ನಬೇಕೆಂದಿಲ್ಲ. ಅದು ನಮಗೆ ಅಭ್ಯಾಸವಿಲ್ಲದ ಆಹಾರ. ಹಾಗಾಗಿ ನಾವು ನಿಯಮಿತವಾಗಿ ಸೇವಿಸುವ ಆಹಾರವನ್ನೇ ಸೇವಿಸಬಹುದು. ಆದರೆ ಪ್ರಮಾಣದ ಬಗ್ಗೆ ಎಚ್ಚರವಿರಲಿ ಎಂದು. ಅವರು ಹೇಳುವ ಮತ್ತೊಂದು ಮಾತು ಎಂದರೆ ನಿಯಮಿತವಾಗಿ ಚಪಾತಿ ಸೇವಿಸುವುದರಿಂದ ನಿಮ್ಮ ಸಕ್ಕರೆ ಖಾಯಿಲೆ ಜಾಸ್ತಿಯಾಗುತ್ತದೆ ಎಂದು. ಈ ಬಗ್ಗೆಯೂ ನಾವು ಗಮನಿಸಬೇಕು.

ನಾವು ಏನು ತಿನ್ನುತ್ತೇವೆ ಎಂಬುದು ಮುಖ್ಯವಲ್ಲ, ಆದರೆ ಹೇಗೆ ತಿನ್ನುತ್ತೇವೆ ಎಂಬುದೂ ಮುಖ್ಯವೇ. ಹಿಂದಿನವರು ನೆಲದ ಮೇಲೆ ಕುಳಿತು ಊಟ ಮಾಡುತ್ತಿದ್ದರು. ಅವರಿಗೆ ತಾವು ಏನು ತಿನ್ನುತ್ತಿದ್ದೇವೆ ಎಂಬುದು ಗೊತ್ತಾಗುತ್ತಿತ್ತು. ಆದರೆ ಇಂದು ನಾವು ಡೈನಿಂಗ್ ಟೇಬಲ್‌ನಲ್ಲಿ ಅಥವಾ ಸೋಫಾದಲ್ಲಿ ಒರಗಿ ಕುಳಿತು ಊಟ ಮಾಡುತ್ತೇವೆ. ಅಲ್ಲದೆ ನಾವು ಟಿವಿ ನೋಡುತ್ತಲೇ ಊಟ/ತಿಂಡಿ ಎಂಬುದಕ್ಕೆ ನಮ್ಮನ್ನು ಒಗಿಸಿಕೊಳ್ಳುತ್ತಿದ್ದೇವೆ. ಕೆಲವು ಮನೆಗಳಲ್ಲಿ ಹೇಳುವುದು: ಈ ಟಿವಿ ನೋಡುತ್ತಾ ತಿನ್ನುವ ಮಕ್ಕಳಿಗೆ ತಾವು ಎಷ್ಟು ತಿಂಡಿ ತಿಂದೆವು ಎಂಬುದೇ ಗೊತ್ತಾಗುವುದಿಲ್ಲ. ಟಿವಿಯಲ್ಲಿ ಒಳ್ಳೆಯ ಕಾರ್ಯಕ್ರಮ ಬರುತ್ತಿದೆ ಎಂದು ಅವರಿಗೆ ಅನಿಸಿದರೆ ಅವರು ತಿನ್ನುವ ಮೂರು ದೋಸೆ ಜಾಗದಲ್ಲಿ ಅದು ಐದೂ ಆಗಬಹುದು, ಆರೂ ಆಗಬಹುದು ಎಂದು. ಅಷ್ಟರಮಟ್ಟಿಗೆ ಮಕ್ಕಳು/ಹಿರಿಯರೂ ಟಿವಿ ಮುಂದೆ ಕುಳಿತು ತಿನ್ನುವುದರಿಂದ ನಾವು ಎಷ್ಟು ತಿಂದೆವು? ಏನು ತಿಂದೆವು? ಎಂಬುದೇ ಗೊತ್ತಾಗುತ್ತಿಲ್ಲ. ಇದರ ಜೊತೆಗೆ ನಮ್ಮ ಇತ್ತೀಚಿನ ಶೋಕಿ ಎಂದರೆ ನಿಂತುಕೊಂಡು ತಿನ್ನುವುದು. ಅದರಲ್ಲು ದೊಡ್ಡ ಸಮಾರಂಭಗಳಲ್ಲಿ ಬಫೇ ಸಾಮಾನ್ಯವಾಗಿದೆ. ನಮಗೆ ಅರ್ಜೆಂಟ್ ಇದೆ, ಆದ್ದರಿಂದ ಬಫೆಯೇ ಸರಿ. ಬೇಗಬೇಗ ತಿಂದು ಹೋಗಿಬಿಡಬಹುದು ಎಂಬ ಅನಿಸಿಕೆ ಬಲವಾಗಿದೆ. ಹೀಗೆ ಬಕಬಕ ತಿನ್ನುವುದನ್ನು 'ಮೈಂಡ್‌ಲೆಸ್ ಈಟಿಂಗ್' ಎಂದು ಕರೆಯಲಾಗುತ್ತದೆ. ಅಂದರೆ ನಾವು ತಿನ್ನುವ ಆಹಾರದ ಬಗ್ಗೆ ನಮಗೆ ಗಮನವೂ ಇಲ್ಲ, ಗೌರವವೂ ಇಲ್ಲ. ಹೀಗಾದರೆ ನಮ್ಮ ಆರೋಗ್ಯದಲ್ಲಿ ಏರುಪೇರಾಗದಿರಲು ಹೇಗೆ ಸಾಧ್ಯ? ಅದರ ಬಗ್ಗೆ ನಮಗೆ ಅರ್ಥವಾಗುವುದು ಖಾಯಿಲೆ ಬಿದ್ದಾಗಲೇ.

ಇವುಗಳನ್ನು ನಾವು ಮನನ ಮಾಡಿಕೊಳ್ಳಬೇಕು. ನಮಗೆ ಎಂತಹ ಆಹಾರ ಬೇಕು? ನಾವು ತಿಂದ ಆಹಾರ ಅರಗುತ್ತದೆಯೇ? ಅದು ಹೇಗೆ ಅರಗುತ್ತದೆ? ಎಂಬ ಬಗ್ಗೆ ನಮಗೆ ಮಾಹಿತಿ ಇರಬೇಕು, ನಮ್ಮ ಆಹಾರ ಹಾಗೂ ನಮ್ಮ ವಿಶ್ರಾಂತಿ ಸರಿಯಾಗಿದ್ದರೆ ನಮಗೆ ಯಾವುದೇ ದೊಡ್ಡ ಖಾಯಿಲೆ ಬರಲು ಸಾಧ್ಯವಿಲ್ಲ. ಆದ್ದರಿಂದ ಶ್ರಮಿಸುವವಗೆ ಜೀರ್ಣ ಸರಾಗ, ವಿಶ್ರಮಿಸುವವಗೆ ರೋಗ ಬಲುಬೇಗ' ಎಂಬ ಮಾತಿನೆಡೆಗೆ ಹಾಗೂ ನಾವು ತಿನ್ನುವ ಆಹಾರ ಪರಿಣಾಮದ ಬಗ್ಗೆ ನಾವು ಗಮನಹರಿಸುವುದು ಸೂಕ್ತ.

ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಸಂಖ್ಯೆ ಹೆಚ್ಚಿಸಲು ಆಗ್ರಹಿಸಿ ಜಾಗೃತಿ ಅಭಿಯಾನ



ಮೈಸೂರು,ಸೆ.17(ಆರ್‌ಕೆಬಿ)–ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹಾಲಿ ನೇಮಕಾತಿಯ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವಂತೆ ಒತ್ತಾಯಿಸಿ ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ಆಶ್ರಯದಲ್ಲಿ ಜಾಗೃತಿ ಅಭಿಯಾನ ಆಯೋಜಿಸಲಾಗಿತ್ತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ನೂರಕ್ಕೂ ಹೆಚ್ಚು ಮಂದಿ ಉದ್ಯೋಗಾಕಾಂಕ್ಷಿಗಳು ಜಾಗೃತಿ ಅಭಿಯಾನ ಮೆರವಣಿಗೆಗೆ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಚಾಲನೆ ನೀಡಿದರು.

2021ರ ಸೆ.17ರಂದು ಕರ್ನಾಟಕದಲ್ಲಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ರಸಾಯನಶಾಸ್ತ್ರ, ಭೌತಶಾಸ್ತ್ರ, ಇಂಗ್ಲಿಷ್, ಕನ್ನಡ, ಇತಿಹಾಸ ಮೊದಲಾದ 29 ವಿಷಯಗಳ 1242 ಹುದ್ದೆಗಳಿಗೆ ಅರ್ಜಿ ಕರೆಯಲಾಗಿದ್ದು, ಈ ಹುದ್ದೆಗಳಿಗೆ ಅರ್ಜಿ ಹಾಕಿದ್ದ ಅಭ್ಯರ್ಥಿ ಗಳು ಸ್ಪರ್ಧಾತ್ಮಕ ಪರೀಕ್ಷೆ ಬರೆದು, ತಾತ್ಕಾಲಿಕ ಅಂಕಪಟ್ಟಿಯು ಬಿಡುಗಡೆಯಾಗಿದೆ. ಕರ್ನಾಟಕದಲ್ಲಿ ಈಗಾಗಲೇ 410 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವುದರ ಜೊತೆಗೆ ನೂತನ ಶಿಕ್ಷಣ ನೀತಿಯು ಪ್ರಾರಂಭವಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಪದವಿ ಕಾಲೇಜುಗಳಲ್ಲಿ ಹಲವಾರು ವಿಷಯಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಖಾಲಿ ಬಿದ್ದಿವೆ.

ಸದರಿ ನೇಮಕಾತಿಗಳ ಪ್ರಕ್ರಿಯೆ ಸಂಖ್ಯೆ ಕೇವಲ 1242 ಆದರೆ ಕೆಲವು ಅಂಕಿ ಅಂಶಗಳ ಪ್ರಕಾರ ಸಾವಿರಾರು ಹುದ್ದೆಗಳು ಖಾಲಿ ಉಳಿಯಲಿವೆ. ರಾಜ್ಯದಲ್ಲಿ ಕಳೆದ 12 ವರ್ಷದಲ್ಲಿ ಎರಡು ಬಾರಿ ಮಾತ್ರ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನೇಮಕಾತಿ ನಡೆದಿದೆ. ಈ ಹುದ್ದೆಗಳಿಗೆ ಅರ್ಹತೆ ಯಾದ ನೆಟ್, ಸೆಟ್, ಪಿಎಚ್‌ಡಿ ಪಡೆದಿರುವ ಬಹು ತೇಕ ಅಭ್ಯರ್ಥಿಗಳ ವಯೋಮಿತಿ ಮೀರುತ್ತಿದೆ. ಈ ರೀತಿ ನೇಮಕಾತಿ ಪ್ರಕ್ರಿಯೆ ವಯೋಮಿತಿ ಮೀರಲು ಪ್ರಮುಖ ಅಂಶವಾಗಿದೆ. ಅರ್ಹತೆ ಇದ್ದರು ಕೆಲವೇ ಅಂಕಗಳಿಂದ ವಂಚಿತರಾಗಿರುವ ಹಾಗೂ ಮೀಸಲಾತಿಯ ಮಿತಿಯಿಂದ (3ಎ, 2ಎ, 2ಬಿ, ಮಹಿಳಾ ಮೀಸಲಾತಿ) ವಂಚಿತರಾಗಿರುವುದನ್ನು ಗಮನದಲ್ಲಿಟ್ಟುಕೊಂಡು 2015ರಲ್ಲಿ ನಡೆದಿದ್ದ ನೇಮಕಾತಿಯಲ್ಲಿ 1298 ಹುದ್ದೆಗಳಿಗೆ ಮತ್ತೆ ಹೆಚ್ಚುವರಿಯಾಗಿ 862 ಹುದ್ದೆಗಳನ್ನು ಸೇರಿಸಲಾಗಿದೆ. ಅದರಂತೆ ಈ ಬಾರಿಯೂ ಕನಿಷ್ಠ 700ರಿಂದ 800 ಹುದ್ದೆಗಳನ್ನು ಹೆಚ್ಚುವರಿ ಮಾಡಬೇಕು. ಮಾನವೀಯತೆ ದೃಷ್ಟಿಯಿಂದ ಈ ಎಲ್ಲ ಅಂಶಗಳನ್ನು ವಿಶೇಷವಾಗಿ ಪರಿಗಣಿಸಿ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಅಭಿಯಾನದ ಮೆರವಣಿಗೆ ದೊಡ್ಡ ಗಡಿಯಾರದ, ಗಾಂಧಿ ವೃತ್ತ, ವಿನೋಬ ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಅಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಅಭಿಯಾನದಲ್ಲಿ ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನ ಸಮಿತಿಯ ಅಧ್ಯಕ್ಷ ಜಾಕಿರ್ ಹುಸೇನ್, ಎನ್‌ಎಸ್‌ಯುಐ ರಾಜ್ಯ ಕಾರ್ಯದರ್ಶಿ ಪ್ರಶಾಂತ್ ಆರ್ಯ, ದಲಿತ ಪ್ರಗತಿಪರ ಒಕ್ಕೂಟಗಳ ಸಂಚಾಲಕ ಪಿ.ರಾಜು, ನಾಯಕರ ಹಿತರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ, ಪ್ರಗತಿಪರ ಚಿಂತಕ ಎಸ್.ಶಿವಪ್ಪ ಇನ್ನಿತರರು ಉಪಸ್ಥಿತರಿದ್ದರು

ಸೆ.20ರಂದು ವಿಕಲ ಚೇತನರು, ವೃದ್ಧರಿಗೆ ಅವಶ್ಯ ಸಾಮಗ್ರಿ ವಿತರಣೆ
ಶ್ರೀಮತಿ ರಂಜನಿಯವರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ

ಮೈಸೂರು, ಸೆ. 17– ಮೈಸೂರಿನ ಶಿವರಾಂಪೇಟೆಯಲ್ಲಿರುವ ಶ್ರೀರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಶ್ರೀ ಶುಭಕೃತು ನಾಮ ಸಂವತ್ಸರದ ಮಹಾಗಣಪತಿ ಪೂಜಾ ಮಹೋತ್ಸವದ ಪ್ರಯುಕ್ತ ಸೆಪ್ಟೆಂಬರ್ 20ರಂದು ಸಂಜೆ 5 ಗಂಟೆಗೆ ದೃಷ್ಟಿಮಾಂದ್ಯರಿಗೆ, ವಿಕಲ ಚೇತನರಿಗೆ, ಅನಾಥಾಶ್ರಮ, ವೃದ್ಧಾಶ್ರಮಗಳು ಹಾಗೂ ವೃದ್ಧರಿಗೆ ಅವಶ್ಯಕವಾದ ಸಾಮಗ್ರಿಗಳ ವಿತರಣೆ ಮತ್ತು ಶ್ರೀರಾಮ ಮಂದಿರದ ಆವರಣದಲ್ಲಿ ವಿದುಷಿ ಶ್ರೀಮತಿ ರಂಜನಿಯವರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪಕ್ಕವಾದ್ಯದಲ್ಲಿ ವಿದುಷಿ ಕು. ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ಶ್ರೀನಂದನ್ ಕಶ್ಯಪ್–ಮೃದಂಗದಲ್ಲಿ ಸಹಕಾರ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡೆಪ್ಯುಟಿ ರಿಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಸೊಸೈಟಿ ಜಿ. ಆರ್.ವಿಜಯಕುಮಾರ್, ವಿಶೇಷ ಆಹ್ವಾನಿತರಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಆರ್.ಮಾಲಿನಿ ಭಾಗವಹಿಸುವರು ಎಂದು ಟ್ರಸ್ಟ್ ಅಧ್ಯಕ್ಷ ಡಾ.ಎನ್. ಶ್ರೀರಾಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಪೋಕ್ಸೋ
-ಅಪ್ರಾಪ್ತರ ಸಂರಕ್ಷಣಾಸ್ತ್ರ

ಡಾ.ಕೆ.ವಿ.ವಾಸು, ಮೈಸೂರು, ಮೊ: 9341731661

ದೇಶದಲ್ಲಿ ಆಯಾ ಕಾಲಕ್ಕೆ ಅಪರಾಧಗಳ ಸ್ವರೂಪವನ್ನೇ ಆಧರಿಸಿ, ಅವುಗಳನ್ನು ತಡೆಯುವ ಸಲುವಾಗಿ ಕೇಂದ್ರ ಹಾಗೂ ಸರ್ಕಾರಗಳು ಅನೇಕ ಹೊಸ ಹೊಸ ಕಾನೂನುಗಳನ್ನು ರಚಿಸಿ, ಜಾರಿಗೆ ತಂದಿವೆ. ಇವುಗಳಲ್ಲಿ ಭಯೋತ್ಪಾದನೆ ಹಾಗೂ ವಿಧ್ವಂಸಕ ಕೃತ್ಯ ತಡೆ ಕಾನೂನು (TADA), ನಂತರ ಸಮಗ್ರ ಅಪರಾಧಗಳ ನಿಗ್ರಹ ಕಾನೂನು– ಇದು ಆಯಾ ರಾಜ್ಯಗಳಿಗನ್ವಯ ಜಾರಿಯಾಗುತ್ತದೆ. ಅದರಂತೆ ಇದು ಕರ್ನಾಟಕದಲ್ಲಿ ಕೋಕಾ (KOKA). ದಶಕದ ಹಿಂದೆ ಜಾರಿಗೆ ತರಲಾದ ಪೋಕ್ಸೋ (ಮಕ್ಕಳನ್ನು ಲೈಂಗಿಕ ಅಪರಾಧಗಳಿಂದ ರಕ್ಷಿಸುವ ಕಾಯಿದೆ) ಮುಖ್ಯವಾದವು. ಈ ಎಲ್ಲಾ ಕಾಯ್ದೆಗಳನ್ನು ಸಂವಿಧಾನದಲ್ಲಿನ ಮೂಲಭೂತ ಹಕ್ಕುಗಳ ದೃಷ್ಟಿಯಲ್ಲಿಟ್ಟುಕೊಂಡೇ ಅತ್ಯಂತ ಎಚ್ಚರ ವಹಿಸಿ ರಚಿಸಿ, ಜಾರಿಗೊಳಿಸಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಮಕ್ಕಳ ವಿರುದ್ಧ ಅದರಲ್ಲೂ ಅಪ್ರಾಪ್ತ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯಗಳು ದಿನೇ ದಿನೆ ಹೆಚ್ಚಾಗುತ್ತಿವೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪೋಕ್ಸೋ ಮೂಲಕ ಇಂತಹ ಗಂಭೀರ ಅಪರಾಧಗಳನ್ನು ಹತ್ತಿಕ್ಕುವ ಪ್ರಯತ್ನ ಮಾಡುತ್ತಿವೆ. ಈ ಘೋರಾತಿಘೋರ ಅಪರಾಧಗಳು ಸಮಾಜದ ಪ್ರತಿಷ್ಠಿತ ವ್ಯಕ್ತಿಗಳು ಹಾಗೂ ಸಮುದಾಯಗಳ ಮುಖಂಡರಿಂದ ಗತಿಸುತ್ತಿರುವುದರಿಂದ ಜನಸಾಮಾನ್ಯರು ಆತಂಕಗೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ಈ ಅಪರಾಧಗಳ ಸಮಗ್ರ ತನಿಖೆ ನಡೆಸಿ, ಶೀಘ್ರ ನ್ಯಾಯ ನಿರ್ಣಯ ಮಾಡುವ ಉದ್ದೇಶದಿಂದ ಪೋಕ್ಸೋವನ್ನು ಒಂದು ಪರಿಣಾಮಕಾರಿ ಅಸ್ತ್ರವಾಗಿ ಉಭಯ ಸರ್ಕಾರಗಳು ಪರಿಗಣಿಸಿವೆ. ಇದೇ ಕಾಯ್ದೆಯ ಅಡಿಯಲ್ಲಿ ರಾಜ್ಯದ ಕೆಲವು ಪ್ರಭಾವಿಗಳು ಬಂಧನಕ್ಕೆ ಒಳಗಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ಈಗ ಸಹಜವಾಗಿ ಎಲ್ಲರ ಗಮನವೂ ಪೋಕ್ಸೋ ಕಾಯ್ದೆಯತ್ತ ಹರಿದಿದೆ. ಈ ನಿಟ್ಟಿನಲ್ಲಿ ಪೋಕ್ಸೋ ಕಾಯ್ದೆಯ ಬಗ್ಗೆ ಚರ್ಚಿಸುವುದು ಪ್ರಸ್ತುತವೆನಿಸುತ್ತದೆ.

ಪೋಕ್ಸೋ ಕಾಯ್ದೆಯ ವಿಸ್ತೃತವಾದ ರೂಪ: The Protection of Children from Sexual Offences Act, 2012. ಇದರ ಕನ್ನಡದ ಅರ್ಥ ವಿವರಣೆ; ಮಕ್ಕಳನ್ನು ಲೈಂಗಿಕ ಅಪರಾಧಗಳಿಂದ ರಕ್ಷಿಸುವ ಕಾಯಿದೆ (ಪೋಕ್ಸೋ ಕಾಯಿದೆ). ಈ ಕಾಯಿದೆಯು ನಮ್ಮ ದೇಶದಲ್ಲಿ 19.06.2012ರಲ್ಲಿ ಜಾರಿಗೆ ಬಂದಿದೆ. ಇದು ಕೇಂದ್ರ ಸರ್ಕಾರ ರೂಪಿಸಿರುವ ಕಾಯ್ದೆಯಾಗಿರುವುದರಿಂದ ಅದೇ ವರ್ಷದ ನವಂಬರ್ ತಿಂಗಳಲ್ಲಿ, ಈ ಕಾಯ್ದೆಗೆ ಕೇಂದ್ರ ಸರ್ಕಾರವೇ ನಿಯಮಾವಳಿಗಳನ್ನು ರೂಪಿಸಿದೆ.

ಹಿನ್ನೆಲೆ : ಭಾರತ ಸಂವಿಧಾನದ 15ನೇ ವಿಧಿಯ 3ನೇ ಕಲಂ ಮಕ್ಕಳ ಹಿತರಕ್ಷಿಸಲು ದೇಶ (state) ವಿಶೇಷವಾದ ವ್ಯವಸ್ಥೆಯನ್ನು (Special Provision) ಮಾಡಬೇಕೆಂದು ಹೇಳುತ್ತದೆ. ಅದೇ ರೀತಿ ನಮ್ಮ ದೇಶದ ಸಂವಿಧಾನದ 21ನೇ ವಿಧಿಯು ಮಕ್ಕಳ ರಕ್ಷಣೆಯ ಬಗ್ಗೆ ಉಲ್ಲೇಖ ಮಾಡುತ್ತದೆ. 11ನೇ ಡಿಸೆಂಬರ್ 1992 ರಲ್ಲಿ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯ ಆಶ್ರಯದಲ್ಲಿ ನಡೆದ ಮಕ್ಕಳ ಹಕ್ಕುಗಳ ಸಮಾವೇಶವು ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅಂಗೀಕರಿಸಿತು.

ಇವುಗಳೆಂದರೆ :

- ಯಾವುದೇ ಅಪ್ರಾಪ್ತ ವಯಸ್ಸಿನ ಮಗುವನ್ನು, ಕಾನೂನು ವಿರೋಧಿ ಚಟುವಟಿಕೆಯಲ್ಲಿ ತೊಡಗಿಕೊಳ್ಳುವಂತೆ ಪ್ರಚೋದಿಸುವುದು ಅಥವಾ ಬಲಾತ್ಕಾರಪಡಿಸುವುದು ಸಲ್ಲದು
- ವೇಶ್ಯಾವಾಟಿಕೆ ಅಥವಾ ಇನ್ನಿತರ ಕಾನೂನು ವಿರೋಧಿಯಾದ ಲೈಂಗಿಕ ಕ್ರಿಯೆಗಳಲ್ಲಿ ಬಳಸಿಕೊಳ್ಳುವುದು ಸಲ್ಲದು
- ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ಅಶ್ಲೀಲ ಚಿತ್ರಗಳಲ್ಲಿ ಅಥವಾ ಭಿತ್ತಿಪತ್ರಗಳಲ್ಲಿ ಶೋಷಣಾತ್ಮಕವಾಗಿ ಬಳಸಿಕೊಳ್ಳುವುದು ಸಲ್ಲದು.

ಈ ಮಾರ್ಗದರ್ಶಿ ಸೂತ್ರಗಳಿಗೆ ಅಂದಿನ ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದ ಹಿನ್ನೆಲೆಯಲಿ ಪೋಕ್ಸೋ ಕಾಯಿದೆಯನ್ನು ಜೂನ್ 19, 2012 ರಿಂದ ದೇಶದಲ್ಲಿ ಅಧಿಕೃತವಾಗಿ ಜಾರಿಗೆ ತರಲಾಗಿದೆ.

ಈ ಕಾಯ್ದೆಯ ಪ್ರಕಾರ ಯಾವುದೇ ವ್ಯಕ್ತಿ, ಲೈಂಗಿಕ ಉದ್ದೇಶವನ್ನು ಹೊಂದಿ ಯಾವುದೇ ಅಪ್ರಾಪ್ತ ವಯಸ್ಸಿನ ಮಗುವಿನ ಅಥವಾ ಬೇರೆ ಮಗುವಿನ ಗುಪ್ತಾಂಗಗಳನ್ನು ಸ್ಪರ್ಶಿಸಿದರೆ, ಅಥವಾ ಮಗುವು ಬೇರೆಯವರ ಗುಪ್ತಾಂಗಗಳನ್ನು ಮುಟ್ಟುವಂತೆ ಪ್ರೇರೇಪಿಸಿದರೆ, ಅಥವಾ ಲೈಂಗಿಕ ಉದ್ದೇಶವನ್ನು ಹೊಂದಿರುವ ಇನ್ಯಾವುದೇ ಕ್ರಿಯೆಯನ್ನು ಮಾಡಿದರೆ, ಅಂತಹ ಕ್ರಿಯೆಯನ್ನು ಲೈಂಗಿಕ ದೌರ್ಜನ್ಯ ಅಥವಾ ಲೈಂಗಿಕ ಕಿರುಕುಳ ಎಂದು ಪರಿಗಣಿಸಲಾಗುತ್ತದೆ. ಅರೋಪಿಗೆ, ಸದರಿ ಕಾಯ್ದೆಯ ಸೆಕ್ಷನ್ 07 ರ ಪ್ರಕಾರ, 03 ವರ್ಷಗಳಿಗೆ ಕಡಿಮೆ ಇಲ್ಲದಂತೆ ಹಾಗೂ 07 ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹ ಶಿಕ್ಷೆಯನ್ನು ವಿಧಿಸಬಹುದಾಗಿದೆ ಹಾಗೂ ಜುಲ್ಮಾನೆಯನ್ನು ಸಹ ವಿಧಿಸಬಹುದು. ಸದರಿ ಕಾಯ್ದೆಗೆ 2019 ರಲ್ಲಿ ವ್ಯಾಪಕ ತಿದ್ದುಪಡಿ ಮಾಡಲಾಗಿದೆ. ಇದರ ಪ್ರಕಾರ ದೌರ್ಜನ್ಯಕ್ಕೆ ಒಳಪಟ್ಟ ಮಗು 16 ರಿಂದ 18 ವರ್ಷಗಳ ಒಳಗೆ ಇದ್ದರೆ, ಅಪರಾಧಿಗಳಿಗೆ 10 ವರ್ಷಗಳಿಗೆ ಕಡಿಮೆ ಇಲ್ಲದಂತೆ ಹಾಗೂ ಜೀವಾವಧಿ ಶಿಕ್ಷೆ (ಜೀವಿತದ ಉಳಿದ ಭಾಗ) ವಿಧಿಸಬಹುದಾಗಿದೆ ನ್ಯಾಯಯುತ ಜುಲ್ಮಾನೆಯನ್ನು ಸಹ ವಿಧಿಸಬಹುದಾಗಿದ್ದು ದಂಡದ ಹಣವನ್ನು ಸಂತ್ರಸ್ತ ಮಗುವಿನ ವೈದ್ಯಕೀಯ ಖರ್ಚು ಮತ್ತು ಪುನರ್ವಸತಿಗೆ ಬಳಸಿಕೊಳ್ಳಬಹುದಾಗಿದೆ. ತಿದ್ದುಪಡಿ ಕಾಯ್ದೆಯ ಪ್ರಕಾರ ಮಗುವಿನ ವಯಸ್ಸನ್ನು 16 ವರ್ಷಕ್ಕಿಂತ ಕಡಿಮೆ ಇದ್ದರೆ, 20 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೆರೆಮನೆ ವಾಸ ಹಾಗೂ ಜೀವನದ ಉಳಿದ ಭಾಗವನ್ನು ಸೆರೆಮನೆಯಲ್ಲಿ ಕಳೆಯುವಂತಹ ಶಿಕ್ಷೆಯನ್ನು ವಿಧಿಸಬಹುದು. ಕೆಲವು ವಿರಳ ಪ್ರಸಂಗಗಳಲ್ಲಿ, ಅಪರಾಧಿಗೆ ಮರಣದಂಡನೆ ಕೂಡ ವಿಧಿಸಬಹುದು. ಹೀಗಾಗಿ ಪೋಕ್ಸೋ ಕಾಯಿದೆಗೆ ಮಹತ್ವ ಲಭಿಸಿದೆ. ಭಾರತೀಯ ದಂಡ ಸಂಹಿತೆಯ ಕಲಂ354 ಹಾಗೂ ಪೋಕ್ಸೋ ಕಾಯಿದೆಯ ಸೆಕ್ಷನ್ ಎಂಟರ ಅಡಿಯಲ್ಲಿ ಬರುವ ಅಪರಾಧಗಳು ಜಾಮೀನು ರಹಿತ ಅಪರಾಧಗಳಾಗಿವೆ. ಉಳಿದ ಪ್ರಕರಣಗಳಲ್ಲಿ ಆರೋಪಿಗಳಿಗೆ ಜಾಮೀನು ನೀಡಬಹುದು.

ದೇಶದ ಹಲವಾರು ಸ್ವಾಮಿಜಿಗಳ ಮೇಲೆಯೂ ಪೋಕ್ಸೋ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿ ವಿಚಾರಣೆ ನಡೆಯುತ್ತಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಶ್ರೀಮತಿ ಸ್ಮೃತಿ ಇರಾನಿ ಲೋಕಸಭೆಗೆ ಮಾಹಿತಿ ನೀಡಿರುವ ಪ್ರಕಾರ, 2020 ನೇ ಇಸವಿಯಲ್ಲಿ ಈ ಕಾಯ್ದೆ ಅಡಿಯಲ್ಲಿ ದೇಶಾದ್ಯಂತ 47,221 ಪ್ರಕರಣಗಳು ದಾಖಲಾಗಿತ್ತು, ಶಿಕ್ಷೆಯ ಪ್ರಮಾಣ ಶೇ.39.6 ರಷ್ಟಿತ್ತು. ಉತ್ತರ ಪ್ರದೇಶದಲ್ಲಿ 6898 ಪ್ರಕರಣಗಳು ದಾಖಲಾಗಿ, ಶಿಕ್ಷೆಯ ಪ್ರಮಾಣ ಶೇ.70.7 ರಷ್ಟಿತ್ತು. ಅದೇ ರೀತಿ ನಂತರದ ಸ್ಥಾನದಲ್ಲಿ ಮಹಾರಾಷ್ಟ್ರ ಇದ್ದು 5687 ಪ್ರಕರಣಗಳು ದಾಖಲಾಗಿ, ಶಿಕ್ಷೆಯ ಪ್ರಮಾಣ ಶೇ. 30.9 ರಷ್ಟಿತ್ತು. ಈಶಾನ್ಯ ಭಾರತದಲ್ಲಿನ ಒಂದು ಪುಟ್ಟ ರಾಜ್ಯವಾದ ಮಣಿಪುರದಲ್ಲಿ ಮಾತ್ರ ಶಿಕ್ಷೆಯ ಪ್ರಮಾಣ ಶೇ.109 ರಷ್ಟಿತ್ತು ಎಂದು ಸಚಿವೆ ಲೋಕಸಭೆಗೆ ಮಾಹಿತಿ ನೀಡಿದ್ದಾರೆ. 2020 ನೇ ವರ್ಷದ ಅಂತ್ಯದಲ್ಲಿ ದೇಶಾದ್ಯಂತ 1,70,000 ಪ್ರಕರಣಗಳು ಪೋಕ್ಸೋ ಅಡಿ ದಾಖಲಾಗಿದ್ದವು ಎಂದು ಸಚಿವೆ ತಿಳಿಸಿದ್ದಾರೆ.

ಈ ರೀತಿಯಲ್ಲಿ ಪೋಕ್ಸೋ ಕಾಯ್ದೆಯು ಅತ್ಯಾಚಾರಿಗಳ ಹಾಗೂ ವಿಕೃತ ಕಾಮಿಗಳ ಪಾಲಿಗೆ ಸಿಂಹಸ್ವಪ್ನವಾಗಿದ್ದು ಈ ಕಾಯಿದೆಯ ಅಡಿಯಲ್ಲಿ ದೇಶಾದ್ಯಂತ ಸಾವಿರಾರು ಪ್ರಕರಣಗಳು ದಾಖಲಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತಿದೆ. ಆದ್ದರಿಂದ, ಪೋಕ್ಸೋ ಕಾಯ್ದೆ ಅತ್ಯಂತ ಪ್ರಬಲ ಕಾಯಿದೆಯಾಗಿದೆ. ಇಂದು ದೇಶಾದ್ಯಂತ ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯ, ಲೈಂಗಿಕ ಹಲ್ಲೆ, ಅತ್ಯಾಚಾರ ಎಲ್ಲೆ ಮೀರುತ್ತಿದೆ. ವಿದ್ಯಾರ್ಥಿ ನಿಲಯಗಳಲ್ಲಿ, ಆಶ್ರಮಗಳಲ್ಲಿ, ಶಾಲೆಗಳಲ್ಲಿ, ಮಠ ಮಂದಿರಗಳಲ್ಲಿ, ಮಕ್ಕಳ ಮೇಲೆ ಅದರಲ್ಲೂ ಅಪ್ರಾಪ್ತ ವಯಸ್ಸಿನ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಲಾಗುತ್ತಿದ್ದು, ಇಂತಹ ವಿಷಯಗಳನ್ನು ಮಕ್ಕಳು ತಮ್ಮ ತಂದೆ ತಾಯಿಗಳ ಜೊತೆ ಹೇಳಿಕೊಳ್ಳಲು ನಾಚಿಕೆ ಅಥವಾ ಭಯಪಟ್ಟುಕೊಳ್ಳುತ್ತಾರೆ. ಹೀಗಾಗಿ ಇಂತಹ ನೂರಾರು ಪ್ರಕರಣಗಳು ಬೆಳಕಿಗೆ ಬರುವುದೇ ಇಲ್ಲ. ಕೆಲವು ಕಾವಿಧಾರಿ ಸ್ವಾಮೀಜಿಗಳು ತಮ್ಮ ವಿಕೃತ ಕಾಮವನ್ನು ಅಥವಾ ಅತೃಪ್ತ ಬಯಕೆಯನ್ನು ತೀರಿಸಿಕೊಳ್ಳಲು ಮಕ್ಕಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದು ತೀರಾ ಖಂಡನೀಯ.

ಇಂತಹ ದೌರ್ಜನ್ಯಗಳನ್ನು ನಡೆಸುವವರು ಸಾಮಾನ್ಯವಾಗಿ ಪ್ರಭಾವಶಾಲಿಗಳಾಗಿರುವುದರಿಂದ ಅಂತಹವರ ಮೇಲೆ ಪ್ರಕರಣ ದಾಖಲಾಗುವುದೇ ಇಲ್ಲ. ಒಂದು ವೇಳೆ ದಾಖಲಾದರೂ ಹಣ ಅಥವಾ ರಾಜಕೀಯ ಪ್ರಭಾವ ಬೀರಿ ಆರೋಪಿಗಳು ಕಾನೂನಿನ ಕಬಂಧಬಾಹುಗಳಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಪೋಕ್ಸೋ ಕಾಯ್ದೆಯನ್ನು ಸಹ ಇತರ ಕಾಯಿದೆಗಳ ರೀತಿಯಲ್ಲಿ ನಿಷ್ಕ್ರೀಯಗೊಳಿಸುವ ಪ್ರವೃತ್ತಿ ಹೆಚ್ಚಾಗುತ್ತಿದೆ.

ಇತ್ತೀಚಿನ ವರದಿಯೊಂದರ ಪ್ರಕಾರ, ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ವಸತಿ ಶಾಲೆಯೊಂದರ ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಸದರಿ ವಸತಿ ಶಾಲೆಯ ಪ್ರಾಚಾರ್ಯ ಹಾಗೂ ಮತ್ತೊಬ್ಬ ಸಿಬ್ಬಂದಿಯನ್ನು ಬಂಧಿಸಿ, ಪೋಕ್ಸೋ ಕಾಯ್ದೆ ಅಡಿ ಪ್ರಕರಣ ದಾಖಲಿಸಿದ್ದಾರೆ. ಈ ರೀತಿ ಪೋಕ್ಸೋ ಕಾಯಿದೆ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸುವವರ ವಿರುದ್ಧ ಕಠಿಣ ಕ್ರಮದ ಅಸ್ತ್ರವಾಗಿದೆ. ಈ ಕಾಯ್ದೆಯ ಅಡಿಯಲ್ಲಿ ಹಲವಾರು ಮಹತ್ವದ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಿದ್ದು, ಅದರ ಪೈಕಿ ಕೆಲವನ್ನು ಹೆಸರಿಸ ಬಹುದಾದರೆ,

1) ಸ್ಟೇಟ್ ಆಫ್ ಕೇರಳ Vs ಮಧು ..... 6.1.2021.
2) ದಿ ಸ್ಟೇಟ್ ಆಫ್ ಮಹಾರಾಷ್ಟ್ರ Vs ಭಾಗವತ್ 11.01.2018
3) ಅನಿಲ್ ಯಾದವ್ Vs ಸ್ಟೇಟ್ ಆಫ್ ಗುಜರಾತ್

ಇತ್ಯಾದಿ ಪ್ರಕರಣಗಳು.

ಈ ರೀತಿ ಪೋಕ್ಸೋ ಕಾಯಿದೆ ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲೆ ಅತ್ಯಾಚಾರ ಸೇರಿದಂತೆ ಲೈಂಗಿಕ ದೌರ್ಜನ್ಯ ಕಿರುಕುಳ ನಡೆಸುವ ಅಪರಾಧಿಗಳ ವಿರುದ್ಧ ಸೂಕ್ತ ಹಾಗೂ ನ್ಯಾಯಬದ್ಧ ಕಾನೂನು ಕ್ರಮ ಜರುಗಿಸಲು ಸ್ವಲ್ಪಮಟ್ಟಿಗೆ ಯಶಸ್ವಿಯಾಗಿದೆ ಎನ್ನಬಹುದು.

ನೇತ್ರದಾನ ಮಹಾದಾನ



ಡಾ॥ ಕೃಷ್ಣ ಆರ್.ಜೋಷಿ
ನೇತ್ರ ತಜ್ಞರು,
ಮೊ: 9900150675

ನೇತ್ರದಾನ ಮಹಾದಾನ ಇದು ನಮ್ಮ ಭರತ ವರ್ಷಕ್ಕೆ ಹೊಸತಲ್ಲ. ಬೇಡರ ಕಣ್ಣಪ್ಪ ಪುರಾತನ ಪುರಾಣ ಕಥೆಯಿಂದಲೂ ವಿಧಿತವಿದೆ. ಆದರೆ ಅದಕ್ಕೆ ವಿಜ್ಞಾನದ ತಿರುವು ಇತ್ತೀಚಿನದು. ನೇತ್ರದಾನದ ಸಾಮಾನ್ಯ ಜ್ಞಾನದ ಅರಿವು ಮಾಡಿಸುವುದು ಈ ದಶಕದ್ದು.

ಜೀವನ ಪರ್ಯಂತ ನಿಮಗಾಗಿ, ನಿಮ್ಮ ಜ್ಞಾನಾರ್ಜನೆಗಾಗಿ, ಸುಖ ಜೀವನಕ್ಕಾಗಿ ಮತ್ತು ಮರಣಾನಂತರ ಮತ್ತೊಬ್ಬ ಅಂಧನಿಗೆ ವರದಾನವಾಗ ಬಹುದಾದ ಭಗವಂತನ (ಪ್ರಕೃತಿಯ) ಕೊಡುಗೆ ನಿಮ್ಮ ಕಣ್ಣುಗಳು.

ಪಂಚೇಂದ್ರಿಯಗಳಲ್ಲಿ ಬಹು ಮುಖ್ಯವಾದದ್ದು ಮತ್ತು ಅಗ್ರವಾದದ್ದು ನಯನಗಳು. ಕಣ್ಣುಗಳು ನಮ್ಮ ಅಂತರಂಗದ ಭಾವನೆಗಳನ್ನು ವ್ಯಕ್ತಗೊಳಿಸುತ್ತವೆ. ನೇತ್ರಗಳು ನಮ್ಮ ಆರೋಗ್ಯ ಮತ್ತು ರೋಗದ ಬಗ್ಗೆ ಲಕ್ಷಣಗಳನ್ನು ಸೂಚಿಸುವುದನ್ನು ತಜ್ಞ ವೈದ್ಯರು ಅರಿಯುತ್ತಾರೆ. ನಾವು ಜಗತ್ತನ್ನು ನೋಡುವುದು ಮತ್ತು ಅರಿಯುವುದು ಕಣ್ಣು ಗಳಿಂದ. ಮಾನವನ ಮುಖದ ಸುಂದರತೆಗೆ ಕಣ್ಣೇ ಕಾರಣ.

ನಮ್ಮ ದೇಶದಲ್ಲಿ ಸುಮಾರು ಒಂದು ಕೋಟಿಗೂ ಮೀರಿ ಅಂಧರಿದ್ದಾರೆ. ಇದರಲ್ಲಿ ನಮ್ಮ ಕರ್ನಾಟಕದಲ್ಲೇ ಸುಮಾರು 5,78,003 ಕುರುಡರಿದ್ದಾರೆ. ಅಂದರೆ 10,000 ಜನರಲ್ಲಿ 129 ಕುರುಡರಿದ್ದಾರೆಂದಾಗುತ್ತದೆ. ಇದರಲ್ಲಿ ಸುಮಾರು ಶೇಕಡ 20 ಕಾರ್ನಿಯ ದೋಷದಿಂದ ಅಂಧರಾಗಿದ್ದಾರೆ. ಕಾರ್ನಿಯ ದೋಷದ ಕುರುಡನ್ನು ಬೇರೆಯವರ(ದಾನ ಮಾಡಿದ) ಕಾರ್ನಿಯ ಕಸಿ ಮಾಡುವುದರಿಂದ ನಿವಾರಿಸಬಹುದು.

ಸಮಸ್ಯೆ: ಒಂದು ಅಂದಾಜಿನಂತೆ ನಮ್ಮ ದೇಶದಲ್ಲಿ ವಾರ್ಷಿಕ ಮರಣ ಸಂಖ್ಯೆ 80 ರಿಂದ 90 ಲಕ್ಷವಿದೆ. ಆದರೆ ಇದರಲ್ಲಿ ಸುಮಾರು 3000 ದಿಂದ 3500 ಜನರು ಮಾತ್ರ ನೇತ್ರದಾನ ಮಾಡಿದ ದಾಖಲಾತಿಯಿದೆ. ಈ ದಾನದಿಂದ ನಾವು ಸುಮಾರು 6000 ದಿಂದ 7000 ಕಾರ್ನಿಯ ಅಂಧರಿಗೆ 'ದೃಷ್ಟಿದಾನ' ಮಾಡಬಹುದು. ನೇತ್ರದಾನಿಗಳ ಸಂಖ್ಯೆ ಬಹಳ ಕಡಿಮೆಯಲ್ಲವೇ? ಮತ್ತೊಂದು ವಿಷಾದಕರ ಸಂಗತಿಯೆಂದರೆ ಅಂಧರ ಸಂಖ್ಯೆ ಹೆಚ್ಚುತ್ತಿರುವಂತೆ ನೇತ್ರದಾನಿಗಳ ಸಂಖ್ಯೆ ಹೆಚ್ಚುತ್ತಿಲ್ಲ.

ನಿಮ್ಮ ಪರಿಸರದಲ್ಲಿ ಮರಣದ ನಂತರ ಚಿತೆಯಲ್ಲಿ ಭಸ್ಮವಾಗುವ ಅಥವಾ ಮಣ್ಣಿನಲ್ಲಿ ಹೂತು ಹೋಗುವ ಕಣ್ಣುಗಳನ್ನು ದಾನ ಮಾಡಲು ಪ್ರೇರೇಪಿಸಿ, ಹೆಚ್ಚು ಹೆಚ್ಚು ನೇತ್ರದಾನಿಗಳು ಮುಂದಾದ ಹಾಗೆ ನಮ್ಮಲ್ಲಿನ ಅಂಧರ ಅಂಧತ್ವವನ್ನು ಹೋಗಲಾಡಿಸಲು ಸಾಧ್ಯ. ಬಹಳ ಕಾರ್ನಿಯ ಅಂಧರು ದೃಷ್ಟಿಯನ್ನು ಮರಳಿ ಪಡೆದು ಎಲ್ಲರ ಹಾಗೆ ಸುಂದರ ಪ್ರಕೃತಿ ಮತ್ತು ಪ್ರಪಂಚವನ್ನು ನೋಡಲು ಸಾಧ್ಯವಾಗುತ್ತದೆ. ಈ ಶಸ್ತ್ರಚಿಕಿತ್ಸೆ (ಕಾರ್ನಿಯ ಕಸಿ) ಪರಿಣಿತರ ಕೈಯ್ಯಲ್ಲಿ ಅತೀ ಸಹಜ ಮತ್ತು ಸುಲಭ. ಇದನು ನೀವು 'ಕೈಗಡಿಯಾರದ ಗೀಚಾದ ಗಾಜನು ತೆಗೆದು (ಅಂಧರ ಕಾರ್ನಿಯ) ಹೊಸ ಗಾಜನ್ನು (ದಾನಿಯ ಕಾರ್ನಿಯ) ಕೂಡಿಸುವ ಕಾರ್ಯಕ್ಕೆ ಹೋಲಿಸಬಹುದು.

ನೇತ್ರದಾನದ ಬಗ್ಗೆ ಅರಿತಿರಬೇಕಾದ ವಿಷಯಗಳು

- ನೇತ್ರ ಭಂಡಾರವು ಮೃತರ ನೇತ್ರಗಳನ್ನು ಮಾತ್ರ ಸ್ವೀಕರಿಸುತ್ತದೆ. ಯಾವುದೇ ಕಾರಣದಿಂದಲೂ ಜೀವಂತ ವ್ಯಕ್ತಿಯ ನೇತ್ರಗಳನ್ನು ಸ್ವೀಕರಿಸುವುದಿಲ್ಲ.
- ನೇತ್ರ ಭಂಡಾರಕ್ಕೆ ಕರೆ ಕಳುಹಿಸುವಾಗ ಮೃತ ವ್ಯಕ್ತಿಯ ಮರಣ ಪ್ರಮಾಣ ಪತ್ರ ಇದ್ದರೆ ಕಾರ್ಯಾಚರಣೆಯಲ್ಲಿ ವಿಳಂಬ ತಪ್ಪಿಸಬಹುದು.
- ನೇತ್ರದಾನಕ್ಕೆ ವಯಸ್ಸಿನ ಮಿತಿ ಇಲ್ಲ. ಎರಡು ವರ್ಷದ ಮೇಲ್ಪಟ್ಟು ಎಲ್ಲರ ಕಣ್ಣುಗಳು ದಾನಕ್ಕೆ ಅರ್ಹ. ಆದರೆ ಮರಣ ಪೂರ್ವದಲ್ಲಿ ಹೆಸರು ನೋಂದಾಯಿಸಲು 18 ವರ್ಷ ವಯಸ್ಸಾಗಿರಬೇಕು. ನೇತ್ರದಾನಕ್ಕೆ ಪೂರ್ವ ನೋಂದಣಿ ಅತ್ಯವಶ್ಯಕವಲ್ಲ. ವಾರಸುದಾರರು ನೋಂದಣಿ ಇಲ್ಲದಿದ್ದರೂ, ಸ್ವ ಇಚ್ಛೆಯಿಂದ ನೇತ್ರ ಭಂಡಾರಕ್ಕೆ ಕರೆ ಕಳುಹಿಸಬಹುದು.
- ಕಣ್ಣುಗಳನ್ನು ಸಂಗ್ರಹಿಸುವುದು ಮತ್ತು ಕಾರ್ನಿಯ ಕಸಿ ಮಾಡುವುದು ಯಾವುದಕ್ಕೂ ವಿಳಂಬ ಸಲ್ಲದು. ಸದುಪಯೋಗವಾಗಲು 2 ರಿಂದ 4 ಘಂಟೆಯೊಳಗೆ ಸಂಗ್ರಹಿಸುವುದು ಮತ್ತು 48 ಘಂಟೆಯೊಳಗೆ ಕಸಿ ಮಾಡುವುದು ಒಳೆಯದು. ಮೃತರ ಕಣ್ಣಿನ ರೆಪ್ಪೆಗಳನ್ನು ಮುಚ್ಚಿ ಕಣ್ಣಿನ ತೇವಾಂಶವನ್ನು ಕಾಪಾಡಬೇಕು. ಅವಶ್ಯವಿದ್ದಲ್ಲಿ ಫ್ಯಾನ್ ಆರಿಸುವುದು ಮತ್ತು ಶುಭ್ರವಾದ ತೋಯಿಸಿದ ತಣ್ಣನೆಯ ಒದ್ದೆ ಬಟ್ಟೆಯನ್ನು ಮುಚ್ಚಿದ ಕಣ್ಣಿನ ಮೇಲೆ ಇಡಬಹುದು.
- ಜಾತಿ, ಲಿಂಗ, ಮತ, ವಯಸ್ಸು, ಸಕ್ಕರೆ ರೋಗ, ರಕ್ತದ ಒತ್ತಡ, ಕನ್ನಡಕ ಧಾರಣೆ, ಮಾತಿಬಿಂದು ಮುಂತಾದವುಗಳು ನೇತ್ರದಾನಕ್ಕೆ ಅಡ್ಡಿಬರುವುದಿಲ್ಲ ಕೆಲವು ಕಾಯಿಲೆಗಳು ಅಡ್ಡಿ ಬಂದಾಗ ನೇತ್ರ ತಜ್ಞರು ನಿರ್ಧಾರ ತೆಗೆದುಕೊಳ್ಳುತ್ತಾರೆ ಮತ್ತು ಸಮಜಾಯಿಷಿ ನೀಡುತ್ತಾರೆ.
- ಮೃತರ ದೇಹದಿಂದ ಕಣ್ಣುಗಳನ್ನು 15 ಅಥವಾ 20 ನಿಮಿಷಗಳಲ್ಲಿ ದೇಹವಿರುವ ಜಾಗದಲ್ಲಿ ಯಾವ ವೇಳೆಯಲ್ಲಾದರೂ, ದಾನಿಯ ಮುಖಚರ್ಯೆಯನ್ನು ಸ್ವಲ್ಪವೂ ವಿಕಾರಗೊಳಿಸದೆ ತೆಗೆಯಲಾಗುವುದು.
- ನೇತ್ರದಾನಕ್ಕೆ ನೋಂದಣಿ ಮಾಡಿದ ವ್ಯಕ್ತಿಯ ಕಣ್ಣುಗಳನ್ನು ಮರಣಾನಂತರ ನೋಂದಾಯಿಸಿದ ನೇತ್ರ ಭಂಡಾರವಲ್ಲದೆ ಇನ್ನಿತರ ಮಾನ್ಯತೆ ಪಡೆದ ಯಾವುದೇ ನೇತ್ರ ಭಂಡಾರಕ್ಕೆ ಕೊಡುಗೆಯಾಗಿ ನೀಡಬಹುದು.
- ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ನೇತ್ರದಾನ ಇಬ್ಬರು ಕಾರ್ನಿಯ ಅಂಧರಿಗೆ ದೃಷ್ಟಿ ಲಾಭ ನೀಡಬಹುದು. ಅಂದರೆ ಒಬ್ಬ ನೇತ್ರದಾನಿ ಇಬ್ಬರಿಗೆ ದೃಷ್ಟಿದಾನ ಮಾಡಬಲ್ಲನು.
- ಅಂತರ ರಾಷ್ಟ್ರೀಯ ನಿಯಮಗಳಿಗನುಸಾರವಾಗಿ ನೇತ್ರದಾನ ಮಾಡಿದ ವ್ಯಕ್ತಿ ಮತ್ತು ಸ್ವೀಕರಿಸಿದ ವ್ಯಕ್ತಿಗಳ ಬಗ್ಗೆ ಮಾಹಿತಿಯನ್ನು ಗುಪ್ತವಾಗಿಡಲಾಗುವುದು.
- ನಮ್ಮ ದೇಹ ನಶ್ವರ, ಆತ್ಮ ಅಮರ. ಅಮರವಾದ ಆತ್ಮದ ಎರಡು ಸುಂದರ ಕಣ್ಣುಗಳನ್ನು ದಾನ ಮಾಡಿ ಪ್ರಪಂಚ ಮತ್ತು ಪ್ರಕೃತಿಯನ್ನು ನೋಡಲು ಕಾರ್ನಿಯ ಅಂಧರಿಗೆ ಸಹಾಯಕರಾಗಿರಿ. ನೇತ್ರದಾನ ಅಂಧರಿಗೆ ವರದಾನವಾಗುತ್ತದೆ

ಕೊನೆಯದಾಗಿ ಭಗವಂತನಿತ್ತ ಭಾಗ್ಯ ಕಣ್ಣುಗಳು. ಅವುಗಳನ್ನು ಪಾತ್ರರಿಗೆ ನೀಡುವುದರಿಂದ ಭಗವಂತನಿಗೆ ವಂದನೆ ಸಲ್ಲಿಸಿದಂತಾಗುತ್ತದೆ. ತಡ ಮಾಡಬೇಡಿ, ಇಂದೇ ನಿಮ್ಮ ಹೆಸರನ್ನು ನೋಂದಾಯಿಸಿ, ಹೆಚ್ಚಿನ ಮಾಹಿತಿಗೆ ನಿಮ್ಮ ಹತ್ತಿರದ ನೇತ್ರ ತಜ್ಞರನ್ನು ಸಂಪರ್ಕಿಸಿ.



ವಾರಭವಿಷ್ಯ
18.9.2022 ರಿಂದ 24.9.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ–ಕನ್ಯಾ, ಚಂದ್ರ–ಮಿಥುನ, ಕಟಕ, ಸಿಂಹ, ಕುಜ–ವೃಷಭ, ಬುಧ–ಕನ್ಯಾ, ಗುರು–ಮೀನ, ಶುಕ್ರ–ಸಿಂಹ, ಶನಿ–ಮಕರ, ರಾಹು–ಮೇಷ ಮತ್ತು ಕೇತು–ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದ ಆದಿಗೆ ನಿಮ್ಮ ಆತ್ಮೀಯ ಗೆಳೆಯನಿಂದ ಮನಸ್ಸಿಗೆ ನೆಮ್ಮದಿ ನೀಡುವ ಹೊಸ ಮಾರ್ಗವೊಂದು ನಿಮ್ಮ ಗಮನಕ್ಕೆ ಬರುವುದು. ಇದಕ್ಕೆ ಅನುಭವಿಗಳ ಮಾರ್ಗದರ್ಶನವೂ ದೊರಕಲಿದೆ. ಹಣಕಾಸಿನ ಸ್ಥಿತಿ ಸುಧಾರಿಸಿದರೂ ನಿಮ್ಮ ರಾಶಿ ಸ್ಥಿತ ರಾಹು ಅನುಚಿತ ಕೆಲಸಗಳಿಗೆ ವ್ಯಯ ಮಾಡಿಸುವನು. ಮನೆಯ ಆಂತರಿಕ ಕಲಹಗಳು ಬೀದಿಗೆ ಬಾರದಿರಲಿ. ಜಾಯಿಂಟ್ ಪೇನ್ ಕಾಡಬಹುದು. ಆತುರದ ವಾಹನ ಚಾಲನೆ ನಿಮಗೆ ಮುಳುವಾಗುವುದು. –ಶ್ರೀ ವಿನಾಯಕ ಸೇವೆ, ಶುಭಸಂಖ್ಯೆ–1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ವಾರದ ಪ್ರಾರಂಭಕ್ಕೆ ಗ್ರಹಗಳ ಶುಭ ಸಂಚಾರದ ಫಲವಾಗಿ ಶುಭವಾರ್ತೆ, ಶುಭ ಫಲಗಳನ್ನು ನಿರೀಕ್ಷಿಸಬಹುದು. ಆಪ್ತೇಷ್ಟರ ಮಿಲನ, ಅತಿಥಿ ಅಭ್ಯಾಗತರ ಆಗಮನ, ಜೊತೆಗೆ ಸಂತೋಷ ಕೂಟಗಳಿಂದ ಧಾರಾಳ ಹಣ ವ್ಯಯವಾಗುವುದು. ವಾರ ಮಧ್ಯೆ ನಿಮ್ಮ ರಾಶಿಗೆ ಬರುವ ಉಚ್ಛಚಂದ್ರ ನಿಮಗೆ ಉನ್ನತ ಸ್ಥಾನ, ಅಧಿಕಾರ ನೀಡಲಿದ್ದಾನೆ. ಯಾವುದೇ ಕೆಲಸವನ್ನು ಮನಸ್ಸಿಟ್ಟು ಮಾಡಿದರೆ ಗುರಿ ಮುಟ್ಟಲಿರುವಿರಿ. ವ್ಯಯದಲ್ಲಿ ರಾಹು ಇರುವ ಕಾರಣ ಸಹವಾಸಗಳು ನೆಟ್ಟಗಿರಲಿ. – ಶ್ರೀ ದೇವಿ ಪೂಜನ, ಶುಭಸಂಖ್ಯೆ–6.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ನಿಮ್ಮ ಸ್ವಸಾಮರ್ಥ್ಯದಲ್ಲಿ ನಂಬಿಕೆ ಇರಲಿ, ಚಂದ್ರಗ್ರಹ ಒಂದು ಬಿಟ್ಟು ಇತರ ಗ್ರಹಗಳು ಕಠಿಣ ಸಮಯವನ್ನು ಒಡ್ಡುತ್ತಿವೆ. ಇಂದಿನ ಸೋಲೆ ಮುಂದಿನ ಗೆಲುವಿಗೆ ದಾರಿ. ಧೃತಿಗೆಡುವ ಅಗತ್ಯವಿಲ್ಲ. ಮಹತ್ವದ ಯೋಜನೆ, ಹಣಕಾಸಿನ ವಿಚಾರಗಳನ್ನು ಸ್ವಲ್ಪ ಮುಂದೂಡಿ. ಕಷ್ಟಗಳು ಚಲಿಸುವ ಮೋಡಗಳಂತೆ. 'ಮಂಥನ ಮಾಡದೆ ಅಮೃತ ಸಿಗದು' ತಾಳ್ಮೆ ಇರಲಿ. ಅಪರಿಚಿತರೊಂದಿಗೆ ಯಾವ ವ್ಯವಹಾರವೂ ಬೇಡ. – ಭುವನ ನಾಯಕ ಶ್ರೀ ವಿಷ್ಣು ಪ್ರಾರ್ಥನೆ, ಶುಭಸಂಖ್ಯೆ–3.

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)
ಸಪ್ತಾಹದ ಆರಂಭಕ್ಕೆ ನಿಮ್ಮ ರಾಶ್ಯಾಧಿಪತಿ ಚಂದ್ರನ ಶುಭ ಸಂಚಾರದ ಫಲವಾಗಿ ನಿಮ್ಮ ಮನೋಸ್ಥೈರ್ಯ ಉಚ್ಛಸ್ಥರವಾಗಿರುತ್ತದೆ. ಜಟಿಲ ಕಾರ್ಯವೊಂದು ಸುಸೂತ್ರವಾಗಿ ನೆರವೇರಲು ಗುರುಬಲವೂ ಇದೆ. ಬಂಧು ಜನರಿಂದ ಸುವಾರ್ತೆಯನ್ನು ಕೇಳುವಿರಿ. ಪುತ್ರ–ಪುತ್ರಿಯರ ಸಾಧನೆಯಿಂದ ಹೆಮ್ಮೆ ಪಡುವಿರಿ. ನೂತನ ವಾಹನ ಹೊಂದಲು ಗುರುಕೃಪೆಯಿದೆ. ವಧು–ವರಾನ್ವೇಷಣೆ ಪ್ರಯತ್ನಗಳು ಸಫಲವಾಗಲಿದೆ. – ಶ್ರೀ ದುರ್ಗಾಸ್ತುತಿ, ಶುಭಸಂಖ್ಯೆ–2.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
'ಬಿತ್ತಿದ್ದನ್ನು ಬೆಳೆದುಕೊ...' ಎಂಬ ನಾಣ್ಣುಡಿ ಇದೆ. ಅದರಂತೆ ಫಲ ನೀಡಲಿದ್ದಾರೆ ಗ್ರಹಗಳು. ನಿರಾಶರಾಗುವ ಅಗತ್ಯವಿಲ್ಲ. ನಿಮ್ಮ ರಕ್ಷೆಗಿದ್ದಾನೆ ಶನಿದೇವ. ವಾರಾಂತ್ಯಕ್ಕೆ ಶಶಿಯೂ ಲಾಭಕ್ಕೆ ಬರುವುದರ ಪರಿಣಾಮ ನಿಮ್ಮ ವೈಯಕ್ತಿಕ ಕೆಲಸ ಕಾರ್ಯಗಳಲ್ಲಿ ನವ ಚೈತನ್ಯವನ್ನು ತುಂಬಲಿದ್ದಾನೆ. ಹವಳ, ಮುತ್ತು ವ್ಯಾಪಾರಿಗಳಿಗೆ ಉತ್ತಮ ಲಾಭ ದೊರಕುವುದು. ಕೃಷಿ ಉತ್ಪನ್ನಗಳಿಗೂ ಒಳ್ಳೆಯ ಬೆಲೆ ದೊರಕುವುದು. ಬಂಧು ಜನರ ಭೇಟಿಯೊಂದಿಗೆ ವಾರಕ್ಕೆ ವಿದಾಯ.– ಶ್ರೀ ರವಿ ಪ್ರಾರ್ಥನೆ, ಶುಭಸಂಖ್ಯೆ–3.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಸಪ್ತಾಹದ ಆದಿಗೆ ಕೈಗೊಂಡ ಮಹತ್ವದ ಕೆಲಸ ಕಾರ್ಯಗಳು ಚುರುಕಾಗಿ ಸಾಗುವುವು. ಮನೆಯಲ್ಲಿ ಶುಭ ಕಾರ್ಯಕ್ಕೆ ಸುವರ್ಣ, ರಜತ ವಸ್ತು ಖರೀದಿಗಾಗಿ ಹಣ ವ್ಯಯವಾಗುವುದು. ಮುದ್ರಣ ಪ್ರಕಾಶಕ ಸಂಸ್ಥೆಗಳಿಗೆ ದೊಡ್ಡ ವ್ಯವಹಾರ ಕುದುರುವ ಸಾಧ್ಯತೆ. ಕೋಪದಿಂದ ಕಾರ್ಯಗೆಡುವುದು. ಅಕಾಲ ಭೋಜನ, ಶಾರೀರಿಕ ಪೀಡೆ, ವ್ಯಾಕುಲತೆ, ಬಲಹೀನತೆ ಕಾಡಬಹುದು. ವೈದ್ಯರ ದರ್ಶನ, ಭಾರೀ ಉದ್ಯಮಗಳಲ್ಲಿ ಜಯ. – ಶ್ರೀ ನಾರಾಯಣ ಸ್ತುತಿ, ಶುಭಸಂಖ್ಯೆ–5.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಈ ವಾರ ನಿಮ್ಮ ತೀರಾ ಅನಿವಾರ್ಯವಲ್ಲದ ಕೆಲಸಗಳನ್ನು ಮುಂದೂಡಿ. ನಿಮಗೆ ಅನುಭವಿಗಳ, ಗುರುಜನರ ಮಾರ್ಗದರ್ಶನದ ಅಗತ್ಯವಿದೆ. ಗೃಹಲಕ್ಷ್ಮಿಯ ಸಹಾಯ, ಸಹಕಾರಗಳೂ ಬೇಕಿದೆ. ಗಂಡ–ಹೆಂಡತಿ ಪರಸ್ಪರ ಸೋತು ಗೆಲ್ಲಿ, ಸೋತವರೇ ಗೆದ್ದಂತೆ. 'ಜಾಣ ಕಿವುಡು ಬುದ್ಧಿವಂತರ ಲಕ್ಷಣ'. ಅರ್ಧಾಷ್ಟಮ ಶನಿ ನಿಮ್ಮ ಆರೋಗ್ಯಕ್ಕೆ ಕುಂದುಂಟು ಮಾಡಬಹುದು. ದೂರ ಪ್ರಯಾಣಗಳನ್ನು ಅವಾಯ್ಡ್ ಮಾಡಿ. ವಾರಾಂತ್ಯಕ್ಕೆ ಶುಭ ವಾರ್ತೆಯನ್ನು ನಿರೀಕ್ಷಿಸಿ. – ಶ್ರೀ ಚಾಮುಂಡೇಶ್ವರಿ ದರ್ಶನ, ಶುಭಸಂಖ್ಯೆ–7.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ಸಪ್ತಾಹದ ಆರಂಭಕ್ಕೆ ಕೆಲಸ ಕಾರ್ಯಗಳು ನಿಮ್ಮ ಯೋಜನೆಯಂತೆ ನಡೆಯುವುದು. ದೈವಾನುಕೂಲವಿದ್ದಾಗ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತದೆ. ತರುಣ–ತರುಣಿಯರ ಸಂಗ ಏರ್ಪಡುವುದು, ವಿವಾಹಯೋಗ್ಯರಿಗೆ ಸೂಕ್ತ ಜೋಡಿ ಸಿಗುವ ಸಂಭವವಿದೆ. ಪೂಜ್ಯರೊಬ್ಬರ ಸಲಹೆ ನಿಮ್ಮ ಏಳಿಗೆಗೆ ಸಹಾಯವಾಗುವುದು. ಆದಾಯ ಹೆಚ್ಚಾದಂತೆ ಖರ್ಚುಗಳೂ ಹುಡುಕಿಕೊಂಡು ಬರುವುದು. ಸಂಚಾರಿ ನಿಯಮ ಪಾಲಿಸಿ. ದಂಡ ತಪ್ಪಿಸಿಕೊಳ್ಳಿ. – ಶ್ರೀ ಗುರು ಚರಿತ್ರೆ ಓದು, ಶುಭಸಂಖ್ಯೆ–4.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಆಪ್ತರೇ 'ಕೈ'ಕೊಟ್ಟಾಗ ನಿಮಗೆ ತಿಳಿದು ಬರುವುದು. 'ಹಂಗಿನ ಅರಮನೆಗಿಂತ ರಾಗಿ ಅಂಬಲಿ ಲೇಸು' ಎಂಬ ಸತ್ಯ. ಕಛೇರಿಯಲ್ಲಿ ನಿಮ್ಮ ಸಹೋದ್ಯೋಗಿಗಳು ಸರಿಯಾಗಿ ಸ್ಪಂದಿಸುವುದಿಲ್ಲ. ಕೆಲವು ಅನಿವಾರ್ಯ ಪ್ರಸಂಗಗಳನ್ನು ಬುದ್ಧಿ ಕುಶಲತೆಯಿಂದ ಎದುರಿಸುವಿರಿ. ಯಾರಿಗೂ ಸಾಲ ಕೊಟ್ಟು ಕೈ ಸುಟ್ಟುಕೊಳ್ಳದಿರಿ. ವಾರಾಂತ್ಯಕ್ಕೆ ಧನಾತ್ಮಕ ಚಿಂತನೆಯಿಂದ ಇತರರ ಮೆಚ್ಚುಗೆ ದೊರೆಯುವುದು. ವಾರಾಂತ್ಯಕ್ಕೆ ಗುರುಜನರ ಜೊತೆ ಉಭಯ ಕುಶಲೋಪರಿ. – ಶ್ರೀ ಹರಿನಾಮ ಸ್ತುತಿ, ಶುಭಸಂಖ್ಯೆ–8.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ವಾರದಾರಂಭಕ್ಕೆ ಅವಿಶ್ವಾಸ, ಭಯ, ಮನಃ ಚಂಚಲತೆ, ಬಂಧುಜನರಲ್ಲಿ ವಿರೋಧ, ವಿದ್ವಜ್ಜನರ ಭೇಟಿ ಹಾಗೂ ಲೋಕ ಕಲ್ಯಾಣಾರ್ಥವಾಗಿ ದಾನ–ಧರ್ಮಗಳು ನಡೆಯುವುದು. ಕೃಷಿ ಉತ್ಪನ್ನ ಹಾಗೂ ಕೃಷಿ ಉಪಕರಣ ಮಾರಾಟಗಾರರಿಗೆ ಉತ್ತಮ ಧನ ಲಾಭವಾಗುವುದು. ವಾರ ಮಧ್ಯೆ ನಂತರ ಚಂದ್ರಗ್ರಹದ ಶುಭ ಭ್ರಮಣದ ಪರಿಣಾಮವಾಗಿ ವಿತ್ತಲಾಭ, ಸುಖ, ಸಂತೋಷ, ಅಧಿಕಾರಿ ವರ್ಗದವರ ಸಹಾಯ ಹಸ್ತ, ಆತುರದ ವಾಹನ ಚಾಲನೆಯಿಂದ ತೊಂದರೆಗೆ ಈಡಾಗುವಿರಿ. – ಶ್ರೀ ಶನಿ ಚಾಲೀಸ ಪಠಿಸಿ, ಶುಭಸಂಖ್ಯೆ–6.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಗುರು–ಶನಿಗ್ರಹದ ಕರ್ತರೀ ಯೋಗದಲ್ಲಿರುವಿರಿ. ಸಾಧ್ಯವಾಗಲಶಕ್ಯವಾದ ಕೆಲಸಗಳಿಗೆ ಕೈ ಹಾಕದಿರಿ. ತಂದೆ–ಪುತ್ರರಲ್ಲಿ ಭೇದ–ಭಾವದಿಂದ ಮನೋವ್ಯಾಕುಲತೆ ಉಂಟಾಗುವುದು. ಕೂಡಿಟ್ಟ ವಸ್ತು, ಧಾನ್ಯ ವ್ಯಾಪಾರದಲ್ಲಿ ನಷ್ಟವನ್ನು ಅನುಭವಿಸಬೇಕಾದೀತು. ವಾರದ ಕಡೆಗೆ ಹೊಸ ವೃತ್ತಿ ಆರಂಭಿಸುವ ಸಾಧ್ಯತೆ. ಸ್ತ್ರೀಯರೊಬ್ಬರ ಸಹಾಯ ದೊರೆತು ಸಮಸ್ಯೆಗೆ ಪರಿಹಾರ ದೊರಕುವುದು. ನಿಮ್ಮ ಆರೋಗ್ಯದ ಕಡೆ ಗಮನ ನೀಡಿ. – ಶ್ರೀ ಆಂಜನೇಯನಿಗೆ ಕೇಸರಿ ಸೇವೆ, ಶುಭಸಂಖ್ಯೆ–3.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ವಾರದಾರಂಭಕ್ಕೆ ಲವಲವಿಕೆಯ ಜೀವನ. ಚಂದ್ರಮನ ಶುಭ ಭ್ರಮಣದಿಂದ ನಿರೀಕ್ಷಿತ ಧನ ಕೈ ಸೇರುವುದು. ಸಾರ್ವಜನಿಕ ಮಟ್ಟದಲ್ಲಿ ಗೌರವಕ್ಕೆ ಭಾಜನರಾಗುವಿರಿ. ಅದೃಷ್ಟದ ಮಿಲನದಿಂದ ಸಂತೋಷ. 'ಶ್ಮಶಾನಕ್ಕೆ 'ಪಾರ್ಟಿಗಳು' ನಡೆಯದು. ರಾಹು–ಕೇತುಗಳು ಅಶುಭರಿರುವರು. ನಿಮ್ಮ ಬುದ್ಧಿ ನಿಮ್ಮ ಕೈಯಲ್ಲಿರಲಿ. [illegible] ಆರೋಗ್ಯದ ಬಗ್ಗೆ ಕಾಳಜಿ ಇರಲಿ. [illegible] ಧರಿಸಿದ್ದರೆ ಕ್ಷೇಮ. – ಶ್ರೀ ಗುರ್ವಾಷ್ಟೋತ್ತರ ಪಠಿಸಿ, ಶುಭಸಂಖ್ಯೆ–4.

ಬಿಜೆಪಿಯಿಂದ ಕೋಮುವಾದ ರಾಜಕಾರಣ

ಭಾರತ್ ಜೋಡೋ ಪಾದಯಾತ್ರೆಯ ಪೂರ್ವಭಾವಿ ಸಭೆಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ವಾಗ್ದಾಳಿ



ಮಂಡ್ಯ ಸೆ17– ಬಿಜೆಪಿ ಸರ್ಕಾರದಲ್ಲಿ ಕೋಮುವಾದ ಹೆಚ್ಚಾಗಿದೆ. ಗಣಪತಿ ಉತ್ಸವಗಳಲ್ಲಿ ಗೋಡ್ಸೆ, ಸಾವರ್ಕರ್ ಭಾವಚಿತ್ರ ಬಳಸುವ ಮೂಲಕ ಕೋಮುವಾದದ ರಾಜಕಾರಣ ಮಾಡುತ್ತಿದೆ. ಬಿಜೆಪಿಯವರಂಥ ಮಾನಗೆಟ್ಟವರು ಯಾರೂ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗುಡುಗಿದರು.

ನಗರದ ಸುಮ ರವಿ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಭಾರತ್ ಜೋಡೋ ಪಾದಯಾತ್ರೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ಬಿಜೆಪಿಯವರಿಗೆ ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ಮೇಲೆ ಗೌರವ ವಿಲ್ಲ. ವೈವಿಧ್ಯತೆಯಲ್ಲಿ ಏಕತೆ ಇರುವ ದೇಶದಲ್ಲಿ ಬಿಜೆಪಿ ಜನರಿಗೆ ವಿಷ ಹಾಕುವ ಕೆಲಸ ಮಾಡುತ್ತಿದೆ. ಸರ್ವ ಜನಾಂಗದ ಶಾಂತಿಯ ತೋಟವನ್ನು ಹಾಳು ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಸರ್ಕಾರದಲ್ಲಿ ದೇಶದ ಬಡವರು, ಹಿಂದುಳಿದವರು, ದಲಿತರು, ರೈತರು, ಕಾರ್ಮಿಕರು, ಮಹಿಳೆಯರಿಗೆ ರಕ್ಷಣೆ ಇಲ್ಲದಂತಾಗಿದೆ. ರೈತರು, ಯುವಕರು, ಬಡವರು ಕೆಲಸ ಮಾಡದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದು ರೀತಿಯ ಆತಂಕದ ವಾತಾವರಣ ಇದೆ ಎಂದರು.

ಬಿಜೆಪಿ ನೇತೃತ್ವದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬಡವರ ರಕ್ತ ಹೀರುತ್ತಿವೆ. ಹಾಲು, ಮಜ್ಜಿಗೆಗೆ ತೆರಿಗೆ ಹಾಕುತ್ತಿದ್ದಾರೆ. ಕೊನೆಗೂ ಕಡ್ಲೆಪುರಿಗೂ ಶೇ.5ರಷ್ಟು ತೆರಿಗೆ ವಿಧಿಸುವ ಮೂಲಕ ದೇಶವನ್ನು ಲೂಟಿ ಮಾಡುತ್ತಿದ್ದಾರೆ. ಇವರಿಗೆ ನಾಚಿಕೆಯಾಗಬೇಕು. ಕರ್ನಾಟಕ ರಾಜ್ಯದಿಂದ ಕೇಂದ್ರಕ್ಕೆ 3.50 ಲಕ್ಷ ಕೋಟಿ ರೂ. ತೆರಿಗೆ ಹಣ ಹೋಗಲಿದೆ. ಆದರೆ ನಮಗೆ ಭಿಕ್ಷೆಗೆ ಹಾಕುವಂತೆ ಕೇವಲ 50 ಸಾವಿರ ಕೋಟಿ ರೂ. ನೀಡುತ್ತಾರೆ. ಎಲ್ಲ ಬೆಲೆಗಳು ಗಗನಕ್ಕೇರಿವೆ. ಆದರೆ ರಾಜ್ಯದಲ್ಲಿ ಮಳೆಯಿಂದ ಅತಿವೃಷ್ಟಿ ಉಂಟಾಗಿ ಮನೆಗಳು, ರಸ್ತೆ, ಸೇತುವೆಗಳು, ಜನರು ಸಾವನ್ನಪ್ಪಿದ್ದರೂ ಪರಿಹಾರ ಹಣ ನೀಡದೆ ವಂಚಿಸುತ್ತಿದ್ದಾರೆ. ದೇಶದಲ್ಲಿ ಸಾಕಷ್ಟು ಸಮಸ್ಯೆಗಳಿದ್ದು, ನಿವಾರಿಸಲು ಕ್ರಮ ವಹಿಸಬೇಕು. ಒಡೆದ ಮನಸ್ಸುಗಳನ್ನು ಒಗ್ಗೂಡಿಸುವ ಕಾರ್ಯ ಮಾಡಬೇಕು. ಆದರೆ ಅದನ್ನು ಮಾಡುತ್ತಿಲ್ಲ ಎಂದು ಕಿಡಿಕಾರಿದರು.

ಕಾಂಗ್ರೆಸ್‌ನ ನಾಯಕರಾದ ರಾಹುಲ್ ಗಾಂಧಿಯವರು ಬಿಜೆಪಿಯಿಂದ ಒಡೆದಿರುವ ಮನಸ್ಸುಗಳನ್ನು ಒಗ್ಗೂಡಿಸುವ ಉದ್ದೇಶದಿಂದ ಭಾರತ ಐಕ್ಯತಾ ಪಾದಯಾತ್ರೆ ಮಾಡುತ್ತಿದ್ದಾರೆ. ಇದೊಂದು ಐತಿಹಾಸಿಕ ಪಾದಯಾತ್ರೆಯಾಗಲಿದೆ. ಆದ್ದರಿಂದ ಎಲ್ಲರೂ ಇದಕ್ಕೆ ಕೈಜೋಡಿಸಬೇಕು. ಲಕ್ಷಾಂತರ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ರಾಹುಲ್‌ಗಾಂಧಿ ಅವರ ಭಾರತ ಐಕ್ಯತಾ ಪಾದಯಾತ್ರೆ ಇದೊಂದು ಐತಿಹಾಸಿಕ ಪಾದಯಾತ್ರೆಯಾಗಿದೆ. ಇದರ ಯಶಸ್ವಿಗೆ ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು.

157 ದಿನಗಳ ಕಾಲ ದೇಶದ 12 ರಾಜ್ಯಗಳು, 2 ಕೇಂದ್ರಾಡಳಿತ ಪ್ರದೇಶ ಸೇರಿದಂತೆ 3570 ಕಿ.ಮೀ ಪಾದಯಾತ್ರೆ ನಡೆಸಲಿದ್ದಾರೆ. ರಾಜ್ಯದಲ್ಲಿ 22 ದಿನಗಳ ಕಾಲ ಪಾದಯಾತ್ರೆ ನಡೆಯಲಿದೆ. ಮಂಡ್ಯದಲ್ಲಿ 3 ದಿನಗಳ ಕಾಲ ಪಾದಯಾತ್ರೆ ಮಾಡುವರು. ಮುಂದಿನ ಅಕ್ಟೋಬರ್ 3, 6 ಹಾಗೂ 7ರಂದು ಪಾದಯಾತ್ರೆ ನಡೆಯಲಿದೆ. ರಾಹುಲ್‌ಗಾಂಧಿ ಅವರ ಪಾದಯಾತ್ರೆಯಲ್ಲಿ ಭಾಗವಹಿಸುವರು ನೋಂದಣಿ ಮಾಡಿಕೊಳ್ಳಬೇಕು. ಸುಮಾರು 25 ಸಾವಿರ ಮಂದಿ ಪಾದಯಾತ್ರೆಯಲ್ಲಿ ಭಾಗವಹಿಸಬೇಕು. ಕಾರ್ಯಕರ್ತರು ಪ್ರತೀ ಮನೆ ಮನೆಗೆ ಭೇಟಿ ನೀಡಿ ಕರಪತ್ರಿಕೆ ಹಂಚಿ ಜನರನ್ನು ಆಹ್ವಾನಿಸಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಪ್ರತಿಯೊಬ್ಬ ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಿದಾಗ ಗೆಲುವು ಸಾಧ್ಯವಾಗಲಿದೆ. ಒಗ್ಗಟ್ಟಿನಿಂದ ಈಗಾಗಲೇ ಎರಡು ವಿಧಾನಪರಿಷತ್ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದೇವೆ. ಅದರಂತೆ ಮುಂದಿನ ಚುನಾವಣೆಯಲ್ಲಿ 7 ವಿಧಾನಸಭಾ ಕ್ಷೇತ್ರದಲ್ಲೂ ಗೆಲುವು ಸಾಧಿಸಬೇಕು ಎಂದು ಹೇಳಿದರು.

ಮೈಸೂರು ವಿಭಾಗದ ಎಐಸಿಸಿ ಕಾರ್ಯದರ್ಶಿ ರೋಹಿಜಾನ್, ಕೆಪಿಸಿಸಿ ಕಾರ್ಯದರ್ಶಿ ಆರ್.ಧ್ರುವನಾರಾಯಣ್, ಮಾಜಿ ಸಚಿವ ಎನ್.ಚಲುವರಾಯಸ್ವಾಮಿ, ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಮಾಜಿ ಶಾಸಕರಾದ ರಮೇಶ್‌ಬಂಡಿಸಿದ್ದೇಗೌಡ, ಕೆ.ಬಿ.ಚಂದ್ರಶೇಖರ್, ಬಿ.ರಾಮಕೃಷ್ಣ, ವಿಧಾನಪರಿಷತ್ ಸದಸ್ಯರಾದ ದಿನೇಶ್‌ಗೂಳಿಗೌಡ, ಮಧು ಜಿ.ಮಾದೇಗೌಡ, ಮುಖಂಡರಾದ ಡಾ.ಕೃಷ್ಣ, ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಡಾ.ರವೀಂದ್ರ ಸೇರಿದಂತೆ ಮತ್ತಿತರರಿದ್ದರು.

ಸೆ.30ರೊಳಗೆ ಮೈಶುಗರ್ ಸಕ್ಕರೆ ಕಾರ್ಖಾನೆ ಪೂರ್ಣ ಕಾರ್ಯಾರಂಭ



ಮಂಡ್ಯ, ಸೆ.17– ಮೈಶುಗರ್ ಸಕ್ಕರೆ ಕಾರ್ಖಾನೆ ಸೆಪ್ಟೆಂಬರ್ 30 ರೊಳಗಾಗಿ ಸಂಪೂರ್ಣವಾಗಿ ಚಾಲನೆಗೊಳ್ಳಲಿದೆ ಎಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯಕೆ ತಿಳಿಸಿದರು. ಇಂದು ಮೈಶುಗರ್ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಖಾನೆಯ ಕೆಲಸ ನಿರ್ವಹಣೆ ಕುರಿತು ಪ್ರಗತಿ ಪರಿಶೀಲನೆ ನಡೆಸಿದರು. ಕಾರ್ಖಾನೆಯ ಎರಡನೇ ಬಾಯ್ಲರ್‌ನ ಕಾರ್ಯ ಸೆ.19 ರಿಂದ ಪ್ರಾರಂಭವಾಗಬೇಕು ಎಂದರು.

ಮೈಶುಗರ್ ಕಾರ್ಯವ್ಯಾಪ್ತಿಗೆ ಬರುವ ಕಬ್ಬನ್ನು ಬೇರೆ ಕಾರ್ಖಾನೆಯವರು ಕಟಾವು ಮಾಡದಂತೆ ಈಗಾಗಲೇ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿದೆ. ಮೈಶುಗರ್ ಕಾರ್ಖಾನೆ ವ್ಯಾಪ್ತಿಯ ಕಬ್ಬು ಬೇರೆ ಕಡೆಗೆ ಸಾಗಾಣಿಕೆಯಾಗುತ್ತಿದ್ದಲ್ಲಿ ವಶಪಡಿಸಿಕೊಳ್ಳಲು ಕ್ರಮ ವಹಿಸಿ ಎಂದರು. ರೈತರಲ್ಲಿ ವಿಶ್ವಾಸ ಮೂಡಿಸಿ ರೈತರಿಂದ ಕಬ್ಬು ಖರೀದಿಸಿ ನಿಗದಿತ ಅವಧಿಯೊಳಗೆ ಪಾವತಿ ಮಾಡಿ. ಇದರಿಂದ ರೈತರಲ್ಲಿ ಕಾರ್ಖಾನೆಯ ಬಗ್ಗೆ ವಿಶ್ವಾಸ ಹೆಚ್ಚಳವಾಗಿ, ಮೈಶುಗರ್ ವ್ಯಾಪ್ತಿಯ ಕಬ್ಬನ್ನು ಮೈಶುಗರ್ ಸಕ್ಕರೆ ಕಾರ್ಖಾನೆಗೆ ನೀಡುತ್ತಾರೆ ಎಂದರು. ಸೆ.30ರ ನಂತರ ಮುಖ್ಯಮಂತ್ರಿಗಳನ್ನು ಮೈಶುಗರ್ ಸಕ್ಕರೆ ಕಾರ್ಖಾನೆಗೆ ಆಹ್ವಾನಿಸಿ, ಇಲ್ಲಿಯ ಎಲ್ಲಾ ಘಟಕಗಳ ಕಾರ್ಯನಿರ್ವಹಣೆಯನ್ನು ಪರಿಚಯಿಸಲಾಗುವುದು. ಇದಕ್ಕೆ ಪೂರ್ವಭಾವಿಯಾಗಿ ಖುದ್ದು ಸೆ.30 ರೊಳಗಾಗಿ ಸಕ್ಕರೆ ಕಾರ್ಖಾನೆಗೆ ಭೇಟಿ ನೀಡಿ ಪರಿಶೀಲಿಸುತ್ತೇನೆ ಎಂದರು.

ಸಕ್ಕರೆ ಕಾರ್ಖಾನೆ ಪುನರಾರಂಭಗೊಂಡಿರುವುದರಿಂದ ಸಣ್ಣ ಪುಟ್ಟ ತೊಂದರೆಗಳು ಉಂಟಾಗಬಹುದು. ಅವುಗಳನ್ನು ಸರಿಪಡಿಸಿಕೊಂಡು ಪೂರ್ಣ ಪ್ರಮಾಣದಲ್ಲಿ ಚಾಲನೆಗೊಳ್ಳಬೇಕು ಎಂದು ರೇಷ್ಮೆ ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವ ಡಾ:. ನಾರಾಯಣಗೌಡ ತಿಳಿಸಿದರು. ಉಪವಿಭಾಗಾಧಿಕಾರಿ ಶಿವಾನಂದಮೂರ್ತಿ ಸಕ್ಕರೆ ಕಾರ್ಖಾನೆಯ ಕಾರ್ಯನಿರ್ವಹಣೆಯ ಬಗ್ಗೆ ಹಾಗೂ ಮುಂದಿನ ದಿನಗಳಲ್ಲಿ ಕೈಗೊಳ್ಳುವ ಕ್ರಮಗಳ ಬಗ್ಗೆ ಸಚಿವರಿಗೆ ವಿವರಿಸಿದರು. ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಜಯರಾಮ್ ರಾಯಪುರ, ಡಿಸಿ ಎಸ್.ಅಶ್ವತಿ, ಜಿ.ಪಂ ಸಿಇಓ ಶಾಂತಾ ಎಲ್.ಹುಲ್ಮನಿ, ಎಸ್‌ಪಿ ಎನ್.ಯತೀಶ್, ಎಸಿ ಆರ್.ಐಶ್ವರ್ಯ ವಿವಿಧ ಇಲಾಖೆ ಅಧಿಕಾರಿಗಳಿದ್ದರು.

ನಾಗಮಂಗಲದಲ್ಲಿ ಹಣ್ಣು–ಹಂಪಲು ವಿತರಿಸುವ ಮೂಲಕ ಪ್ರಧಾನಿ ಮೋದಿ ಹುಟ್ಟುಹಬ್ಬ ಆಚರಣೆ

ನಾಗಮಂಗಲ, ಸೆ.17– ಬಿಜೆಪಿ ಮುಖಂಡರಾದ ಸುರೇಶ್ ಉಪ್ಪಾರಹಳ್ಳಿ ಮತ್ತು ವಕೀಲ ಜಯಪ್ರಕಾಶ್ ಅವರ ನೇತೃತ್ವದಲ್ಲಿ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ



ಹಣ್ಣು ವಿತರಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿಯವರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಮೋದಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಆಸ್ಪತ್ರೆಯಲ್ಲಿ ಒಳರೋಗಿಗಳಾಗಿ ದಾಖಲಾಗಿರುವ ಸುಮಾರು ಐವತ್ತಕ್ಕೂ ಹೆಚ್ಚು ರೋಗಿಗಳಿಗೆ ಹಣ್ಣು– ಹಂಪಲಿನ ಬ್ಯಾಗ್‌ನ್ನು ವಿತರಿಸಲಾಯಿತು.

ನಂತರ ಮಾತನಾಡಿದ ಸುರೇಶ್ ಉಪ್ಪಾರಹಳ್ಳಿ, ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ವಾಜಪೇಯಿ ನಂತರ ಭಾರತ ಕಂಡ ಅಪ್ರತಿಮ ನಾಯಕ ಮೋದಿಯವರಾಗಿದ್ದು, ದೇಶದ ಜನ ಕೊರೊನಾ ಸಮಯದಲ್ಲಿ ಸಂಕಷ್ಟದಲ್ಲಿದ್ದಾಗ ಭಾರತೀಯರಿಗೆ ಧೈರ್ಯ ತುಂಬಿ ಕೋಟ್ಯಾಂತರ ಜನರಿಗೆ ಲಸಿಕೆ ನೀಡುವುದರ ಮೂಲಕ ವಿಶ್ವದಲ್ಲಿ ಭಾರತಕ್ಕೆ ಹೆಸರು ತಂದರು. ಆಡಳಿತಕ್ಕೆ ಬಂದ ಕೆಲವೇ ಸಮಯದಲ್ಲಿ ಇಡೀ ವಿಶ್ವ ನಮ್ಮತ್ತ ನೋಡುವಂತೆ ಮಾಡಿದ್ದು ನರೇಂದ್ರ ಮೋದಿಯವರು. ದೇಶವನ್ನು ವಿಶ್ವ ಗುರುವಾಗಿ ಮಾಡಲು ಹೊರಟಿರುವ ಮೋದಿ ಅವರಿಗೆ ಭಾರತೀಯರು ಬೆಂಬಲವಾಗಿ ನಿಲ್ಲಬೇಕು ಎಂದರು. ಡಾ.ವೆಂಕಟೇಶ್, ಡಾ.ನಾಯಕ್, ಡಾ.ಆದಿತ್ಯಾ, ಕೃಷ್ಣಮೂರ್ತಿ, ಶ್ರೀನಿವಾಸ್, ಕೃಷ್ಣೇಗೌಡ, ವರದ ಪಾಪಯ್ಯ, ಲೋಕೇಶ್ ಮುಂತಾದವರಿದ್ದರು.

ಬಾವಿಯಲ್ಲಿ ದೊರೆತ ಹಸುಳೆಗೆ ಮಿಮ್ಸ್‌ನಲ್ಲಿ ಚಿಕಿತ್ಸೆ

ಮಂಡ್ಯ, ಸೆ.17– ಪಾಂಡವಪುರ ಚಂದ್ರೆ ಗ್ರಾಮದಲ್ಲಿ 35 ಅಡಿ ಆಳದ ನೀರಿಲ್ಲದ ತೆರೆದ ಬಾವಿಗೆ ಎಸೆದಿದ್ದ ನವಜಾತ ಶಿಶುವನ್ನು ಪಾಂಡವಪುರ ತಾಲೂಕಿನ ವೈದ್ಯಾಧಿಕಾರಿಗಳ ತಂಡ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲು ಮಾಡಿದೆ.

ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯ ಕೆ ಅವರು ಇಂದು ಮಿಮ್ಸ್‌ನ ಐ.ಸಿ.ಯು. ನಲ್ಲಿ ಮಗುವಿನ ಆರೋಗ್ಯದ ಬಗ್ಗೆ ಮಾಹಿತಿ ಪಡೆದುಕೊಂಡು ಮಗುವಿಗೆ ಉತ್ತಮ ಚಿಕಿತ್ಸೆ ನೀಡುವಂತೆ ತಿಳಿಸಿದರು.

ಜಿಲ್ಲಾಧಿಕಾರಿ ಎಸ್. ಅಶ್ವತಿ ಅವರು ಜಿಲ್ಲಾಡಳಿತದ ವತಿಯಿಂದ ಮಗುವಿನ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ ಎಂದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ: ಧನಂಜಯ್ ಅವರು ಮಗು ಅವಧಿಗೆ ಮುನ್ನವೇ ಜನಿಸಿರುವ ಹಿನ್ನೆಲೆಯಲ್ಲಿ ಮಗುವಿನ ತೂಕ 1.50 ಕೆಜಿ ಮಾತ್ರ ಇದ್ದು, ಮಗುವಿನ ತೂಕ ಹೆಚ್ಚಳವಾಗುವವರೆಗೆ ಒಂದು ವಾರ ಐ.ಸಿ.ಯು ನಲ್ಲಿ ಚಿಕಿತ್ಸೆ ಒದಗಿಸಲಾಗುವುದು ಎಂದು ಮಾಹಿತಿ ನೀಡಿದರು.

10 ಕೋಟಿ ವೆಚ್ಚದಲ್ಲಿ ಸರ್‌ಎಂವಿ ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಮಂಡ್ಯ, ಸೆ.17– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ 10 ಕೋಟಿ ವೆಚ್ಚದಲ್ಲಿ ಮಂಡ್ಯದ ಸರ್.ಎಂ.ವಿ.ಜಿಲ್ಲಾ ಕ್ರೀಡಾಂಗಣದ ಅಭಿವೃದ್ಧಿ ಕಾಮಗಾರಿಗಳ ಗುದ್ದಲಿ ಪೂಜೆ/ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಅಬಕಾರಿ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಗೋಪಾಲಯ್ಯ ಹಾಗೂ ರೇಷ್ಮೆ, ಯುವಸಬಲೀಕರಣ ಮತ್ತು ಕ್ರೀಡಾ ಸಚಿವರಾದ ಡಾ.ಕೆ ಸಿ.ನಾರಾಯಣಗೌಡ ಅವರುಗಳು ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಸಚಿವ ಡಾ.ಕೆ.ಸಿ. ನಾರಾಯಣಗೌಡ ಶೀಘ್ರದಲ್ಲಿ ಕಾಮಗಾರಿಯನ್ನು ಆರಂಭಿಸಿ ಮೂರರಿಂದ ನಾಲ್ಕು ತಿಂಗಳಲ್ಲಿ ಕೆಲಸವನ್ನು ಸಂಪೂರ್ಣವಾಗಿ ಮುಗಿಸಿ ಉದ್ಘಾಟನೆ ಮಾಡಲು ಅವಕಾಶ ಮಾಡಿಕೊಡುವಂತೆ ಕ್ರೀಡಾ ಆಯುಕ್ತರಾದ ಗೋಪಾಲಕೃಷ್ಣ ಅವರಿಗೆ ತಿಳಿಸಿದರು.

ಸರ್ ಎಂ.ವಿ. ಕ್ರೀಡಾಂಗಣದಲ್ಲಿ ಸಂಪೂರ್ಣ ಪ್ರೇಕ್ಷಕರ ಗ್ಯಾಲರಿಗೆ ಮೇಲ್ಛಾವಣಿ ನಿರ್ಮಿಸುವುದು ಮತ್ತು ಬಣ್ಣ ಬಳಿಯುವುದು, ಹೊರಾಂಗಣ ಕ್ರೀಡಾಂಗಣದ ಸುತ್ತಲೂ ಒಳಚರಂಡಿ ವ್ಯವಸ್ಥೆ ಕಾಮಗಾರಿ ಕೈಗೊಳ್ಳುವುದು, 400 ಮೀಟರ್ ಮಡ್ ಟ್ರ್ಯಾಕ್ ನಿರ್ಮಿಸುವುದು, ಹೊಡ್ಡು ಮಣ್ಣಿಗೆ ಪಿಚ್ಚಿಂಗ್ ಮಾಡುವುದು ಹಾಗೂ ವಿವಿಧ ಕ್ರೀಡಾಂಗಣಗಳ ನವೀಕರಣ ಹಾಗೂ ಇನ್ನಿತರೆ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದರು.

ಜಿಲ್ಲೆಯ ಕ್ರೀಡಾಪಟುಗಳು ಕ್ರೀಡೆಗಳಲ್ಲಿ ಉತ್ತಮ ಸಾಧನೆ ಮಾಡಲು ಹಾಗೂ ಅವರು ಅನೇಕ ಕ್ರೀಡೆಗಳಲ್ಲಿ ಭಾಗವಹಿಸಲು ಅನುಕೂಲವಾಗುವಂತಹ ಉದ್ದೇಶದಿಂದ ಈ ಒಂದು ದೊಡ್ಡ ಯೋಜನೆಯನ್ನು ಮಂಡ್ಯ ಜಿಲ್ಲೆಗೆ ಮಾಡಲಾಗಿದೆ. ಇದರ ಸಂಪೂರ್ಣ ಉಪಯೋಗವನ್ನು ಪಡೆದುಕೊಂಡು ಜಿಲ್ಲೆಯ ಕ್ರೀಡಾಪಟುಗಳು ಉನ್ನತ ಕ್ಷೇತ್ರಗಳಲ್ಲಿ ಹೆಸರು ಮಾಡಿ ಜಿಲ್ಲೆಗೆ ಕೀರ್ತಿಯನ್ನು ತರುವಂತಹ ಕೆಲಸ ಮಾಡಿ ಎಂದು ಹೇಳಿದರು.

ಈ ಬಾರಿ ಶ್ರೀರಂಗಪಟ್ಟಣ ಕ್ರೀಡಾಕೂಟದಲ್ಲಿ ಕ್ರೀಡೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಕಬಡ್ಡಿ, ಫುಟ್ಬಾಲ್, ಕುಸ್ತಿ ಇನ್ನಿತರ ಕ್ರೀಡೆಯಲ್ಲಿ ಹೆಚ್ಚಿನ ಕ್ರೀಡಾಪಟುಗಳು ಭಾಗವಹಿಸಿ ಎಂದರು.

ಇದೇ ವೇಳೆ ಸಂಸದೆ ಸುಮಲತಾ ಅಂಬರೀಶ್ ಅವರು ಮಾತನಾಡಿ, ಸರ್.ಎಂ.ವಿ ಕ್ರೀಡಾಂಗಣಕ್ಕೆ 10 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸುತ್ತಿರುವುದು ಬಹಳ ಸಂತಸವಾದ ವಿಷಯ ಎಂದರು.

ಮಂಡ್ಯ ಜಿಲ್ಲೆಯಲ್ಲಿ ಉತ್ತಮ ಕ್ರೀಡಾಂಗಣದ ನಿರ್ಮಾಣ ಮಾಡಿ ಗ್ರಾಮೀಣ ಕ್ರೀಡಾಪಟುಗಳಿಗೆ ಉತ್ತಮ ತರಬೇತಿಯನ್ನು ನೀಡಿ ಅವರನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಲು ಅವಕಾಶ ಮಾಡಿಕೊಡಬೇಕು ಎಂಬಂತಹ ಬಹಳ ದೊಡ್ಡ ಕನಸನ್ನು ಅಂಬರೀಶ್ ಕಂಡಿದ್ದರು. ಈ ಕನಸನ್ನು ನನಸು ಮಾಡುವಂತಹ ಕೆಲಸ ಇಂದು ನಡೆಯುತ್ತಿದೆ. ಆಗಾಗಿ ಯುವಸಬಲಿಕರಣ ಮತ್ತು ಕ್ರೀಡಾ ಸಚಿವರಾದ ಡಾ.ನಾರಾಯಣಗೌಡರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಸಕ ಎಂ.ಶ್ರೀನಿವಾಸ್, ನಗರಸಭೆಯ ಅಧ್ಯಕ್ಷ ಹೆಚ್.ಎಸ್.ಮಂಜು, ನಗರಸಭೆಯ ಸ್ಥಾಯಿ ಸಮಿತಿಯ ಅಧ್ಯಕ್ಷೆ ಮೀನಾಕ್ಷಿ ಪುಟ್ಟರಾಜು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಯರಾಮ್ ರಾಯಪುರ, ಡಿಸಿ ಎಸ್.ಅಶ್ವತಿ, ಜಿಪಂ ಸಿಇಓ ಶಾಂತಾ ಎಲ್.ಹುಲ್ಮನಿ, ಎಸ್‌ಪಿ ಎನ್.ಯತೀಶ್, ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿಧಾನಸಭೆಯಲ್ಲಿ ಭಾರೀ ಹಗರಣ

ಬ್ಲಾಸ್ಟ್ ಮಾಡಲು ಕುಮಾರಸ್ವಾಮಿ ಸಿದ್ಧತೆ!

ದಿಢೀರ್ ದೇವೇಗೌಡರ ಭೇಟಿಯಾದ ಸಚಿವ ಅಶೋಕ್



- ರಾಜ್ಯ ರಾಜಕೀಯದಲ್ಲಿ ತೀವ್ರ ಕುತೂಹಲ
- ಬಿಜೆಪಿ ವರಿಷ್ಠರ ಸಲಹೆಯಂತೆ ಮುಖ್ಯಮಂತ್ರಿ ದೂತರಾಗಿ ಅಶೋಕ್‌ರಿಂದ ದೇವೇಗೌಡರ ಭೇಟಿ
- ಇದೊಂದು ಸೌಜನ್ಯ ಭೇಟಿ ಅಷ್ಟೇ ಎಂದ ಕಂದಾಯ ಸಚಿವರು
- ತೆಲಂಗಾಣ ಸಿಎಂ ಚಂದ್ರಶೇಖರ ರಾವ್ ಸಭಾದ ಬಗ್ಗೆಯು ಬಿಜೆಪಿಯಲ್ಲಿ ಚರ್ಚೆ

"ಒಂದು 1200 ಕೋಟಿ ರೂ. ಮೌಲ್ಯದ ಸರ್ಕಾರದ ಆಸ್ತಿಯನ್ನು ಸಚಿವ ಮತ್ತು ಬಿಜೆಪಿಯ ಪ್ರಮುಖ ಮುಖಂಡರೊಬ್ಬರು ಗುಳುಂ ಮಾಡಲು ಹೊರಟಿರುವುದು, ಮತ್ತೊಂದು ಆರೋಗ್ಯ ಇಲಾಖೆಗೆ ಸಂಬಂಧಿಸಿದ್ದು ಎಂದು ಹೇಳಲಾಗುತ್ತಿದೆ. ರಾಜ್ಯದಲ್ಲಿ ಭ್ರಷ್ಟಾಚಾರ ಯಾವ ರೀತಿ ಇದೆ ಎನ್ನುವುದು ನಾಡಿನ ಜನತೆಗೆ ಹಾಗೂ ಪ್ರಧಾನಿ ಮೋದಿ ಅವರಿಗೂ ಗೊತ್ತಾಗಲಿ. ಅದಕ್ಕೇ ಎಲ್ಲ ದಾಖಲೆ ಇಟ್ಟು ಮಾತನಾಡುತ್ತೇನೆ.
–ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ

ಬೆಂಗಳೂರು, ಸೆ.17(ಕೆಎಂಶಿ)–ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಕೋಟ್ಯಾಂತರ ರೂಪಾಯಿ ಅವ್ಯವಹಾರದ ಎರಡು ಹಗರಣಗಳನ್ನು ವಿಧಾನಸಭೆಯಲ್ಲಿ ಬಯಲು ಮಾಡಲು ಮುಂದಾಗಿದ್ದಾರೆ. ಈ ಹಗರಣಗಳು ಬಯಲಾದರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂಪುಟದ ಇಬ್ಬರು ಸಚಿವರ ತಲೆದಂಡ ಖಚಿತ ಎಂಬ ಮಾತು ಜೆಡಿಎಸ್ ವಲಯದಲ್ಲಿ ಕೇಳಿಬಂದಿದೆ. ಈ ಹಗರಣ ಪ್ರಸ್ತಾಪಿಸಲು ಕುಮಾರಸ್ವಾಮಿ, ವಿಧಾನ ಸಭಾ ಕಚೇರಿಯನ್ನು ಸಂಪರ್ಕಿಸಿದ್ದಾರೆ ಎನ್ನಲಾಗಿದೆ.

ಈ ಮಾಹಿತಿ ಹೊರ ಬರುತ್ತಿದ್ದಂತೆ ಕಂದಾಯ ಸಚಿವ ಆರ್.ಅಶೋಕ್, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರನ್ನು ಇಂದು ಮಧ್ಯಾಹ್ನ ಹಠಾತ್ ಭೇಟಿ ಮಾಡಿ, ಮುಖಾಮುಖಿ ಚರ್ಚೆ ಮಾಡಿದ್ದಾರೆ. ಮುಖ್ಯಮಂತ್ರಿಯವರ ಸಲಹೆ ಮೇರೆಗೆ ಅಶೋಕ್ ಅವರು ಪದ್ಮನಾಭನಗರದ ದೇವೇಗೌಡರ ನಿವಾಸಕ್ಕೆ ತೆರಳಿ, ಸುಮಾರು ಒಂದು ಗಂಟೆ ಕಾಲ ಅವರೊಟ್ಟಿಗೆ ಗೌಪ್ಯವಾಗಿ ಮಾತನಾಡಿದ್ದಾರೆ. ಕುಮಾರಸ್ವಾಮಿ ಹಗರಣಗಳನ್ನು ಪ್ರಸ್ತಾಪಿಸುತ್ತಿರುವುದು ಮತ್ತು ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಜೊತೆ ಸಂಪರ್ಕ ಬೆಳೆಸುತ್ತಿರುವ ಬಗ್ಗೆಯು ಚರ್ಚೆ ಮಾಡಿದ್ದಾರೆ ಎನ್ನಲಾಗಿದೆ. ಚಂದ್ರಶೇಖರ್‌ರಾವ್ ಅವರ ಜೊತೆ ಜೆಡಿಎಸ್ ರಾಜಕೀಯ ಮಾಡಲು ಹೊರಟಿರುವುದು ಬಿಜೆಪಿ ವರಿಷ್ಠರಿಗೆ ನುಂಗಲಾರದ ತುತ್ತಾಗಿದೆ. ಟಿಎಸ್‌ಆರ್ ದಕ್ಷಿಣ ಭಾರತದಲ್ಲಿ ಪ್ರಬಲ ರಾಜಕೀಯ ಶಕ್ತಿಯಾಗಿ ರೂಪುಗೊಳ್ಳುತ್ತಿರುವುದು ಬಿಜೆಪಿಗೆ ಸಹಿಸಲಾಗುತ್ತಿಲ್ಲ. ಅವರ ಜೊತೆ ಕುಮಾರಸ್ವಾಮಿ ಕೈಜೋಡಿಸಿ, ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಅವರ ಸಹಕಾರ ಪಡೆಯುತ್ತಿರುವುದರಿಂದ ಬಿಜೆಪಿಗೆ ಭಾರೀ ಹಿನ್ನಡೆಯಾಗುತ್ತದೆ ಎಂಬ ಲೆಕ್ಕಾಚಾರದಲ್ಲಿದೆ.

ಇದೆಲ್ಲವನ್ನೂ ಮುಂದಿಟ್ಟುಕೊಂಡು ಅಶೋಕ್, ಗೌಡರ ಜೊತೆ ಚರ್ಚೆ ಮಾಡಿದ್ದಾರೆ. ವರಿಷ್ಠರ ಸಲಹೆ ಮೇರೆಗೆ ಮುಖ್ಯಮಂತ್ರಿಯವರು ಅಶೋಕ್ ಅವರನ್ನು ದೇವೇಗೌಡರ ಬಳಿ ದೂತರಾಗಿ ಕಳುಹಿಸಿದ್ದರು ಎಂದು ಹೇಳಲಾಗಿದೆ. ದೇವೇಗೌಡರ ಭೇಟಿಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅಶೋಕ್, ಇದೊಂದು ಸೌಜನ್ಯದ ಭೇಟಿ, ಗೌಡರ ಯೋಗಕ್ಷೇಮ ವಿಚಾರಿಸಲು ಬಂದಿದ್ದೆ. ಇದರಲ್ಲಿ ಯಾವುದೇ ರಾಜಕೀಯವಿಲ್ಲ. ಪ್ರಸಕ್ತ ವಿದ್ಯಮಾನಗಳ ಬಗ್ಗೆ ಚರ್ಚೆ ಮಾಡಿಲ್ಲ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ. ಕುಮಾರಸ್ವಾಮಿ ಮಾತ್ರ ಭ್ರಷ್ಟಾಚಾರದ ಹಗರಣಗಳನ್ನು ವಿಧಾನಸಭೆಯಲ್ಲಿ ಮಂಡಿಸಲು ಕಳೆದ ಮೂರು ದಿನದಿಂದಲೇ ಪೂರ್ವ ಸಿದ್ಧತೆ ನಡೆಸಿದ್ದಾರೆ. ಹಗರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ಮತ್ತು ತಜ್ಞರ ಸಲಹೆ ಮತ್ತು ಸಹಕಾರ ಪಡೆದುಕೊಂಡಿದ್ದಾರೆ. ಎಂದು ಈಗಾಗಲೇ ಹೇಳಿದ್ದಾರೆ. ಇದೊಂದು ದೊಡ್ಡ ಹಗರಣ ಎಂದು ಬಿಂಬಿಸಿದ್ದಾರೆ.

ಬಿಜೆಪಿ ಓಬಿಸಿ ಮೋರ್ಚಾ ವತಿಯಿಂದ ಉಚಿತ ಕೋವಿಡ್ ಲಸಿಕೆ ನೀಡಿ ಮೋದಿ ಜನ್ಮದಿನ ಆಚರಣೆ



ಮೈಸೂರು, ಸೆ.17(ಆರ್‌ಕೆಬಿ)– ಪ್ರಧಾನಿ ನರೇಂದ್ರ ಮೋದಿ ಅವರ 72ನೇ ಜನ್ಮದಿನದ ಪ್ರಯುಕ್ತ ನರಸಿಂಹರಾಜ ಕ್ಷೇತ್ರ ಬಿಜೆಪಿ ಓಬಿಸಿ ಮೋರ್ಚಾ ವತಿಯಿಂದ 29ನೇ ವಾರ್ಡ್‌ನ ಮಾರುತಿ ಸರ್ಕಲ್‌ನಲ್ಲಿ ಸೇವಾ ಪಾಕ್ಷಿಕ ಅಭಿಯಾನ ಅಂಗವಾಗಿ ಜೀವ ರಕ್ಷಕ ಲಸಿಕಾ ಅಭಿಯಾನದಲ್ಲಿ ಸುಮಾರು 150 ಸಾರ್ವಜನಿಕರಿಗೆ ಉಚಿತ ಲಸಿಕೆ ಹಾಕುವ ಮೂಲಕ ಮೋದಿ ಜನ್ಮದಿನವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ನರಸಿಂಹರಾಜ ಕ್ಷೇತ್ರದ ಅಧ್ಯಕ್ಷ ಡಾ.ಬಾನು ಪ್ರಕಾಶ್, ಮಾಜಿ ಮೇಯರ್ ಸಂದೇಶ್ ಸ್ವಾಮಿ, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಜಿ.ಗಿರಿಧರ್, ಸೋಮಸುಂದರ್, ಕ್ಷೇತ್ರ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಗೌಡ, ವೇಲು, ಓಬಿಸಿ ಪ್ರಧಾನ ಕಾರ್ಯದರ್ಶಿ ಬಿ.ವಿಜಯ್, ಅಭಿಯಾನದ ಸಂಚಾಲಕ ಡಾ.ಗಿರೀಶ್, ಬಿಜೆಪಿ ಮಾಜಿ ಅಧ್ಯಕ್ಷ ಮುರಳಿ ಇನ್ನಿತರರಿದ್ದರು.

ಪಿಎಚ್.ಡಿ ಪದವೀಧರರು

ನೇದಾ ಪೌರಾದೇಲಿ ಆಶಾಜೇಯಿ



ಮೈಸೂರು, ಸೆ. 17– ಡಾ. ಎನ್. ನಾಗರಾಜ ಅವರ ಮಾರ್ಗದರ್ಶನದಲ್ಲಿ ನೇದಾ ಪೌರಾದೇಲಿ ಆಶಾಜೇಯಿ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ದೇವರಾಜು ಎನ್.ಬಿ.



ಮೈಸೂರು, ಸೆ. 17– ಡಾ. ಅಲೋಕ್ ಕುಮಾರ್ ಉಪಾಧ್ಯಾಯ ಅವರ ಮಾರ್ಗದರ್ಶನದಲ್ಲಿ ದೇವರಾಜು ಎನ್.ಬಿ. ಅವರು ಶಿಕ್ಷಣ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 107ನೇ ಜಯಂತಿ ಆಚರಣೆ



ಮೈಸೂರು, ಸೆ. 17– ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೆಯ ಜಯಂತಿ ಮಹೋತ್ಸವನ್ನು ಶನಿವಾರ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಆಚರಿಸಲಾಯಿತು.

ಕುವೆಂಪುನಗರ ಅಧ್ಯಯನ ಸಂಸ್ಥೆಯ ವಿಶ್ರಾಂತ ನಿರ್ದೇಶಕರಾದ ಪ್ರೊ. ನೀಲಗಿರಿ ತಳವಾರ್ ಅವರು ರಾಜೇಂದ್ರ ಶ್ರೀಗಳಿಗೆ ನುಡಿನಮನ ಸಲ್ಲಿಸಿ ಈ ಘಳಿಗೆ ಅಮೃತ ಘಳಿಗೆ ಎಂದು ತಿಳಿಸುತ್ತಾ ಶ್ರೀಗಳ ಅನ್ನ ದಾಸೋಹ, ಅಕ್ಷರ ದಾಸೋಹ, ಆಧ್ಯಾತ್ಮ ಮತ್ತು ಆರೋಗ್ಯ ಸೇವೆ ಮತ್ತು ಸಮಾಜ ಸೇವೆಗಳನ್ನು ತಿಳಿಸಿದರು. ಈ ಸಂದರ್ಭದಲ್ಲಿ ಜಾನಪದ ತ್ರಿಪದಿ ಮತ್ತು ಮುದ್ಧರಾಮ ಚರಿತೆ ಕಾವ್ಯಗಳನ್ನು ಉಲ್ಲೇಖಿಸಿ ಶ್ರೀಗಳು ಆಡಂಬರ ಜೀವನವನ್ನು ತ್ಯಜಿಸಿ ಲೋಕ ಕಲ್ಯಾಣ ಮತ್ತು ಆತ್ಮಕಲ್ಯಾಣಕ್ಕಾಗಿ ತಮ್ಮನ್ನು ಮುಡಿಪಾಗಿರಿಸಿಕೊಂಡಿದ್ದರು ಎಂದರು. ಶ್ರೀಗಳು ಅವರು ಮಾತೃ ಹೃದಯಿಗಳಾಗಿ, ಕರುಣಾಮಯಿಯಾಗಿ ಬದುಕಿದ್ದಾಗಲೇ ದಂತ ಕಥೆಯಾಗಿದ್ದರು ತಮ್ಮ 12ನೆ ವಯಸ್ಸಿನಲ್ಲೇ ಶ್ರೀ ಮಠದ ಪೀಠಾಧಿಪತಿಯಾಗಿ ಧಾರ್ಮಿಕ ಪೀಠವನ್ನು ನಿಭಾಯಿಸುವುದಕ್ಕೆ ಎಂಟೆದೆ ಬೇಕು ಅದು ಶ್ರೀಗಳ ಬಳಿಯಿತ್ತು ಅವರೇ ನಿಜವಾದ ತಪಸ್ವಿಗಳು ಎಂದು ತಿಳಿಸಿದರು, ಇಂದು ಸುತ್ತೂರು ಮಠದ ಕಾರ್ಯಕ್ರಮಗಳು ರಾಜ್ಯ ಮತ್ತು ದೇಶ ವಿದೇಶಗಳಲ್ಲೂ ವಿಸ್ತರಿಸಿ ಮಹಾವೃಕ್ಷವಾಗಿದೆ ಅಂದರೆ ಅದಕ್ಕೆ ತಾಯಿ ಬೇರು ರಾಜೇಂದ್ರ ಶ್ರೀಗಳು ಎಂದು ಶ್ರೀಗಳ ಸಾಧನೆಗಳನ್ನು ನೆನಪಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರೊ. ಎಸ್.ಪಿ.ಮಂಜುನಾಥ್, ಕಾರ್ಯದರ್ಶಿಗಳು, ಜೆಎಸ್‌ಎಸ್ ಮಹಾವಿದ್ಯಾಪೀಠ ಇವರು ಮಾತನಾಡಿ ರಾಜೇಂದ್ರ ಶ್ರೀಗಳ ಸೇವೆಯನ್ನು ಸ್ಮರಿಸಿ ಶ್ರೀಗಳು ಕಷ್ಟಪಟ್ಟು ಭಿಕ್ಷೆ ಮಾಡಿ, ಶ್ರಮವಹಿಸಿ ಕಟ್ಟಿದ ಸಂಸ್ಥೆ ಇದು ಎಂದು ತಿಳಿಸುತ್ತಾ ರಾಜೇಂದ್ರ ಶ್ರೀಗಳ ಹಾದಿ ಸುಗಮವಾಗಿರಲಿಲ್ಲ ಅವರ ಹಾದಿ ಕಠಿಣವಾಗಿ ಕಲ್ಲು ಮುಳ್ಳುಗಳಿಂದ ಕೂಡಿತ್ತು, ಎಷ್ಟೇ ಕಷ್ಟವಿದ್ದರೂ ಸದಾ ಹಸನ್ಮುಖಿಗಳಾಗಿರುತ್ತಿದ್ದರು, ಅವರ ವಿದ್ಯಾಭ್ಯಾಸದ ಸಂದರ್ಭದಲ್ಲಿ ತಮ್ಮ ಜೊತೆ ಇನ್ನೂ 8 ರಿಂದ 10 ಜನರಿಗೆ ಪಡಿ ಪದಾರ್ಥಗಳನ್ನು ಬಡಿಸಿ ಅವರ ವಿದ್ಯಾಭ್ಯಾಸಕ್ಕೆ ನೆರವಾಗುತ್ತಿದ್ದರು ಎಂದರು. ವಾಟಾಳಿನ ಶ್ರೀ ಸೂರ್ಯ ಸಿಂಹಾಸನ ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಸಾನ್ನಿಧ್ಯ ವಹಿಸಿದ್ದರು ಹಾಗೂ ಇವರು ರಾಜೇಂದ್ರ ಶ್ರೀಗಳ ಜೊತೆ ಇದ್ದ ಒಡನಾಟವನ್ನು ವಿವರಿಸುತ್ತಾ ಮಾತೃ ಹೃದಯಿಗಳಾಗಿದ್ದ ಶ್ರೀಗಳು ಪ್ರತಿಯೊಬ್ಬ ವಿದ್ಯಾರ್ಥಿಯು ಹಸಿವಿನಿಂದ ಬಳಲಬಾರದು ಎಂದು ಮನಗಂಡ ಪ್ರಸಾದ ನಿಲಯಗಳನ್ನು ಸ್ಥಾಪಿಸಿದರು, ತಮ್ಮ ಚಿನ್ನದ ಕರಡಿಗೆಯನ್ನು ಮಾರಾಟ ಮಾಡಿ ವಿದ್ಯಾರ್ಥಿಗಳಿಗೆ ದವಸ ದಾನ್ಯಗಳನ್ನು ತಂದು ಅನ್ನದಾಸೋಹ ಮಾಡುತ್ತಿದ್ದರು ಎಂದು ತಿಳಿಸಿದರು.

ಜಯಂತಿ ಅಂಗವಾಗಿ ಪ್ರತಿವರ್ಷದಂತೆ ಈ ವರ್ಷವೂ ಕೂಡ ವಿಶೇಷ ಚೇತನರಿಗೆ ಜೈನ್ ಮಿಲನ್, ಆಸರೆ ಗ್ರೂಪ್, ಮತ್ತು ಎನ್.ಜೆ.ಎಸ್ ಸಂಸ್ಥೆಯ ವತಿಯಿಂದ ಉಚಿತವಾಗಿ ಗಾಲಿಕುರ್ಚಿ ಮತ್ತು ಕೃತಕಾಂಗಗಳನ್ನು ಶ್ರೀ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಎಸ್ ಪಿ ಮಂಜುನಾಥ್, ಕಾರ್ಯದರ್ಶಿಗಳು, ಜೆಎಸ್‌ಎಸ್ ಮಹಾವಿದ್ಯಾಪೀಠ, ಹಾಗೂ ಡಾ.ಸುರಿಂದರ್ ಸಿಂಗ್, ಉಪಕುಲಪತಿಗಳು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ, ಇವರುಗಳು ಫಲಾನುಭವಿಗಳಿಗೆ ವಿತರಿಸಿದರು.

ಕಾರ್ಯಕ್ರಮದಲ್ಲಿ ಡಾ. ಸುರಿಂದರ್ ಸಿಂಗ್, ಉಪಕುಲಪತಿಗಳು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ, ಡಾ.ಮಧು. ಸಿ.ಪಿ ವೈದ್ಯಕೀಯ ಅಧೀಕ್ಷಕರು, ಡಾ.ಬಸವನಗೌಡಪ್ಪ, ಪ್ರಾಂಶುಪಾಲರು, ಜೆಎಸ್‌ಎಸ್ ಮೆಡಿಕಲ್ ಕಾಲೇಜ್, ಹಾಗೂ ಆಸ್ಪತ್ರೆಯ ಸಂದರ್ಶಕ ಸಮಿತಿ ಸದಸ್ಯರುಗಳು, ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಗಳು ಹಾಜರಿದ್ದರು.

ಅಬ್ದುಲ್ ಖಾದರ್ ಜೆಡಿಎಸ್ ರಾಜ್ಯ ಕಾರ್ಯದರ್ಶಿ



ಕರ್ನಾಟಕ ಪ್ರದೇಶ ಜನತಾದಳ (ಜಾತ್ಯತೀತ)ದ ರಾಜ್ಯ ಕಾರ್ಯದರ್ಶಿಯನ್ನಾಗಿ ಮೈಸೂರಿನ ಎನ್.ಆರ್. ಮೊಹಲ್ಲಾ ರಾಜೇಂದ್ರನಗರ ಕೆಸರೆ ನಿವಾಸಿ ಅಬ್ದುಲ್ ಖಾದರ್ ಅಲಿಯಾಸ್ ಶಾಯಿದ್ ಅವರನ್ನು ನೇಮಿಸಿ, ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ನೇಮಕಾತಿ ಪತ್ರ ನೀಡಿದರು. ರಾಜ್ಯ ಅಲ್ಪಸಂಖ್ಯಾತ ಅಧ್ಯಕ್ಷ ಹಂಸಕ್ ವಿಲ್ಲಾಖಾನ್, ರಾಜು, ಯುವ ಪ್ರಧಾನ ಕಾರ್ಯದರ್ಶಿ ಚಂದ್ರುಗೌಡ, ನಗರ ಪ್ರಧಾನ ಕಾರ್ಯದರ್ಶಿ ಮುದ್ದುರಾಜ್, ಇಬ್ರಾನ್ ಖಾನ್, ಅಬ್ರಾರ್ ಇತರರಿದ್ದರು.

ಒಂದನೇ ಪುಟದಿಂದ

ಇನ್ನೆರಡು ದಿನದಲ್ಲಿ ಸಿದ್ಧತೆ ಪೂರ್ಣ

10.04ರೊಳಗೆ ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ದಸರಾ ಮಹೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಈ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಕಚೇರಿಯಿಂದ ಕಾರ್ಯಕ್ರಮದ ಕ್ಷಣ ಕ್ಷಣ(ಮಿನಿಟ್ ಟು ಮಿನಿಟ್)ದ ಮಾಹಿತಿ ಹಾಗೂ ಕೆಲ ಸ್ಪಷ್ಟನೆ ನೀಡಿದ್ದಾರೆ. ಅದರಂತೆ ಜಿಲ್ಲಾಧಿಕಾರಿಗಳು ಎಲ್ಲಾ ಮಾಹಿತಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ ಮೂಲಕ ರಾಷ್ಟ್ರಪತಿ ಕಚೇರಿಗೆ ಕಳುಹಿಸಿದ್ದಾರೆ. ನಾಳೆ(ಸೆ.18) ಮಧ್ಯಾಹ್ನ ಅಥವಾ ಸೋಮವಾರ ರಾಷ್ಟ್ರಪತಿ ಕಚೇರಿಯಿಂದ ಮಾಹಿತಿ ಲಭ್ಯವಾಗುವ ಸಾಧ್ಯತೆ ಇದ್ದು, ನಂತರದಲ್ಲಿ ಆಹ್ವಾನ ಪತ್ರಿಕೆ ಇನ್ನಿತರ ಸಿದ್ಧತೆ ಮಾಡಿಕೊಳ್ಳಲಾಗುತ್ತದೆ. ಬಳಿಕ ದೆಹಲಿಗೆ ತೆರಳಿ ರಾಷ್ಟ್ರಪತಿಯವರನ್ನು ದಸರೆ ಉದ್ಘಾಟನೆಗೆ ಅಧಿಕೃತವಾಗಿ ಆಹ್ವಾನಿಸಲಾಗುವುದು. ರಾಷ್ಟ್ರಪತಿಯವರ ಮಾಹಿತಿಗಾಗಿ ಉದ್ಘಾಟನಾ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಮಾತ್ರ ಇಂಗ್ಲಿಷ್‌ನಲ್ಲಿ ಮುದ್ರಿಸಲಾಗುತ್ತದೆ ಎಂದು ತಿಳಿಸಿದರು.

ವೇದಿಕೆಗೆ 49 ಜನರ ಪಟ್ಟಿ: ಹಿಂದಿನ ವರ್ಷಗಳಲ್ಲಿದ್ದಂತೆ ದಸರಾ ಉದ್ಘಾಟನಾ ಸಮಾರಂಭ ವೇದಿಕೆಯಲ್ಲಿ ಉಪಸ್ಥಿತರಿ ರಬಹುದಾದ ಮೈಸೂರು ಹಾಗೂ ಚಾಮರಾಜ ನಗರ ಜಿಲ್ಲೆಗಳ ಶಾಸಕರು, ಸಂಸದರು, ಸಂಬಂಧಿಸಿದ ಇಲಾಖೆ ಸಚಿವರು, ಮೇಯರ್, ಕಾರ್ಪೊರೇಟರ್‌ಗಳು, ಅಧಿಕಾರಿಗಳು ಸೇರಿದಂತೆ ಒಟ್ಟು 49 ಗಣ್ಯರ ಪಟ್ಟಿಯನ್ನು ರಾಷ್ಟ್ರಪತಿ ಕಚೇರಿಗೆ ಕಳುಹಿಸಲಾಗಿದೆ. ಆದರೆ ವೇದಿಕೆಯಲ್ಲಿ ಯಾರಿಗೆ ಅವಕಾಶ ಕಲ್ಪಿಸಬೇಕು ಎಂಬುದನ್ನು ರಾಷ್ಟ್ರಪತಿ ಕಚೇರಿಯಿಂದಲೇ ನಿರ್ದೇಶನ ನೀಡಲಾಗುತ್ತದೆ. ಒಂದು ವೇಳೆ ವೇದಿಕೆಯಲ್ಲಿ ಎಲ್ಲರಿಗೂ ಅವಕಾಶ ಇಲ್ಲವಾದರೆ ಮುಂಭಾಗದಲ್ಲಿ ಆಸನ ವ್ಯವಸ್ಥೆ ಮಾಡಲಾಗುವುದು. ಆ ದಿನ ಸಾರ್ವಜನಿಕರಿಗೆ ನಿರ್ಬಂಧವಿರುವುದಿಲ್ಲ. ಹಾಗಾಗಿ ಇನ್ನೂ 2 ಸಾವಿರ ಆಸನ ವ್ಯವಸ್ಥೆ ಮಾಡಲಾಗುತ್ತದೆ ಎಂದರು.

ಗೊಂದಲಗಳಿಗೆ ಆಸ್ಪದವಿಲ್ಲ: ನಾನು ಯಾವುದೇ ಒತ್ತಡಕ್ಕೆ ಮಣಿಯುವುದಿಲ್ಲ, ಯಾವುದೇ ಗೊಂದಲ-ಗದ್ದಲಗಳಿಲ್ಲದೆ ಸುಸೂತ್ರವಾಗಿ ದಸರಾ ನಡೆಸಬೇಕೆಂಬುದಷ್ಟೇ ನಮ್ಮ ಗುರಿ. ಆರಂಭದಲ್ಲಿ ಗೋಲ್ಡ್ ಕಾರ್ಡ್ ಬೇಡವೆಂದು ನಿರ್ಧರಿಸಲಾ ಗಿತ್ತು. ಆದರೆ ಪ್ರವಾಸೋದ್ಯಮ ದೃಷ್ಟಿಯಿಂದ ಗೋಲ್ಡ್ ಕಾರ್ಡ್‌ಗೆ ಒತ್ತಾಯ ಕೇಳಿಬಂದಿದ್ದು, ಸದ್ಯದಲ್ಲೇ ಪೂರಕ ತೀರ್ಮಾನ ಕೈಗೊಳ್ಳಲಾಗುವುದು. ಜಂಬೂಸವಾರಿ ವೀಕ್ಷಣೆಗೆ ಅರಮನೆ ಆವರಣ ಹಾಗೂ ಬನ್ನಿಮಂಟಪ ಪಂಜಿನ ಕವಾ ಯತು ವೀಕ್ಷಣೆಗೆ ನೀಡಲಾಗುವ ಪಾಸ್ ವಿತರಣೆ ವಿಚಾರದಲ್ಲಿ ಗೊಂದಲವಾಗದಂತೆ ಎಚ್ಚರ ವಹಿಸಲಾಗುವುದು. ಆಸನ ವ್ಯವಸ್ಥೆಗೆ ಸರಿಹೊಂದುವಂತೆ ಗೋಲ್ಡನ್ ಕಾರ್ಡ್, ಟಿಕೆಟ್ ಹಾಗೂ ಪಾಸ್ ವಿತರಣೆ ಮಾಡಲಾಗುವುದು. ಖಂಡಿತವಾಗಿ ಸಾರ್ವಜನಿಕರಿಗೆ ಅವಕಾಶ ಇರುತ್ತದೆ. ಉಸ್ತುವಾರಿ ಸಚಿವರ ಕ್ಷೇತ್ರದಿಂದ ಜನರನ್ನು ಕರೆಸುತ್ತಾರೆಂಬ ಆಪಾದನೆಗೆ ಗುರಿ ಯಾಗಲು ನಾನು ಸಿದ್ಧನಿಲ್ಲ. ಹಾಗಾಗಿ ನಾನು ಪ್ರತಿನಿಧಿಸುವ ಯಶವಂತಪುರ ಜನತೆಗೆ ಉದ್ಘಾಟನೆ ಹಾಗೂ ಜಂಬೂ ಸವಾರಿ ದಿನ ಹೊರತುಪಡಿಸಿ ಉಳಿದ ದಿನಗಳಲ್ಲಿ ಬರುವಂತೆ ತಿಳಿಸಿದ್ದೇನೆ. ಪಾಸ್, ಆಸನ ವ್ಯವಸ್ಥೆಗೆ ಸಂಬಂಧಿಸಿದಂತೆ ಯಾವುದೇ ಅಧ್ವಾನಕ್ಕೆ ಆಸ್ಪದ ನೀಡದಂತೆ ಎಚ್ಚರ ವಹಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಎಲ್ಲಾ ಕಾರ್ಯಕ್ರಮ ಸಿದ್ಧತೆ: ದಸರಾ ಉದ್ಘಾಟನೆ ದಿನ ಸಂಜೆ ಅರಮನೆ ಮುಂಭಾಗದ ವೇದಿಕೆಯಲ್ಲಿ ಮುಖ್ಯ ಮಂತ್ರಿಗಳು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಮೂರು ವರ್ಷಗಳಿಂದ ಅವಕಾಶ ಸಿಗದಿರುವ ಸ್ಥಳೀಯ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪ್ರಸಿದ್ಧ ಕಲಾವಿದರ ಕಾರ್ಯ ಕ್ರಮಗಳನ್ನು ಜೋಡಿಸಲಾಗುತ್ತಿದೆ. ಈ ಬಾರಿ 96 ವೃತ್ತಗಳು ಸೇರಿ ಒಟ್ಟು 124 ಕಿ.ಮೀ. ದೀಪಾಲಂಕಾರ, 23 ಸ್ಥಳಗಳಲ್ಲಿ 'ದಸರಾಗೆ ಸ್ವಾಗತ' ಲೈಟಿಂಗ್ಸ್ ಅಳವಡಿಸಲಾಗುತ್ತಿದೆ. ಜಂಬೂ ಸವಾರಿ ಮಾರ್ಗದಲ್ಲಿ 24 ಅಡಿ ಎತ್ತರದಲ್ಲಿ ದೀಪಾಲಂಕಾರ ಮಾಡಲಾಗುತ್ತಿದೆ. ಯುವ ದಸರಾ, ಗ್ರಾಮೀಣ ಕ್ರೀಡಾ ದಸರಾ, ಕವಿಗೋಷ್ಠಿ, ರಂಗಾಯಣ ನಾಟಕೋತ್ಸವ, ರೈತ ದಸರಾ, ಕುಸ್ತಿ, ಮಹಿಳಾ ಮತ್ತು ಮಕ್ಕಳ ದಸರಾ, ಚಲನ ಚಿತ್ರೋತ್ಸವ, ಫಲಪುಷ್ಪ ಪ್ರದರ್ಶನ, ದಸರಾ ವಸ್ತುಪ್ರದರ್ಶನ, ಕೈಗಾರಿಕಾ ದಸರಾ, ಹೆರಿಟೇಜ್ ದಸರಾ, ಕ್ರೀಡಾ ದಸರಾ ಹೀಗೆ ದಸರಾ ಪ್ರಯುಕ್ತ ವಿವಿಧ ಕಾರ್ಯಕ್ರಮಗಳನ್ನು ನಿಗದಿತ ದಿನಗಳಲ್ಲಿ ಆಯೋಜನೆ ಮಾಡಲಿದ್ದು, ಸಂಬಂಧಿಸಿದ ಇಲಾಖೆ ಸಚಿವರು ಉದ್ಘಾಟನೆ ನೆರವೇರಿಸಲಿದ್ದಾರೆ. ಏರ್‌ಶೋ, ಹೆಲಿರೈಡ್ ಬಗ್ಗೆ ಚರ್ಚೆ ನಡೆಸಲಾಗುವುದು. ಈಗಾಗಲೇ ಡಾಂಬರೀಕರಣ, ಸ್ವಚ್ಛತಾ ಕಾರ್ಯ ಆರಂಭವಾಗಿದೆ ಎಂದು ತಿಳಿಸಿದರು. ಇದೇ ವೇಳೆ ಕಾಂಬೋ ಟಿಕೆಟ್, ರೈತ ದಸರಾ, ಮಹಿಳಾ ದಸರಾ ಇನ್ನಿತರ ಕಾರ್ಯಕ್ರಮಗಳ ಪೋಸ್ಟರ್ ಬಿಡುಗಡೆ ಮಾಡಿದರು.

ಆರೋಪ ಮಾಡಲು ನೀವೇ ಕಾರಣ...!

ಅಡ್ಡಿಪಡಿಸಿದರೆ ಶಾಸಕರು, ಅರಣ್ಯ ಸಚಿವರ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸಬೇಕೇ ಹೊರತು, ಈ ರೀತಿ ಕೆಲಸ ಬಾಕಿ ಉಳಿಸಿದರೆ ಜನರು ಓಡಾಡುವುದಾದರೂ ಹೇಗೆ? ಎಂದು ಸಚಿವರು ಪ್ರಶ್ನಿಸಿದರು.

ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ: ನನ್ನ ಕ್ಷೇತ್ರ ವ್ಯಾಪ್ತಿಯ ಮೂಗನಹುಂಡಿ, ಕೆ. ಹೆಮ್ಮನಹಳ್ಳಿ, ಮಾಣಿಕ್ಯಪುರ, ತಿಬ್ಬಯ್ಯನಹುಂಡಿ ಗ್ರಾಮಗಳ ರಸ್ತೆ, ಸೇತುವೆ ಮಳೆಯಿಂದಾಗಿ ಹಾಳಾಗಿವೆ, ಕೆರೆಗಳು ತುಂಬಿ ಕೋಡಿ ಬಿದ್ದು ತಗ್ಗು ಪ್ರದೇಶ ಜಲಾವೃತಗೊಂಡು ಜನಜೀವನ ದುಸ್ತರವಾಗಿದೆ. ಕೂಡಲೇ ಕಾಮಗಾರಿ ಕೈಗೆತ್ತಿಕೊಂಡು ಜನರು ಓಡಾಡಲು ಅನುವು ಮಾಡಿ, ಹೆಚ್ಚಿನ ಅನುದಾನ ಅಗತ್ಯವಿದ್ದರೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಎಂದು ಶಾಸಕ ಜಿ.ಟಿ. ದೇವೇಗೌಡರು ಸೂಚಿಸಿದರು. ರಸ್ತೆಗಳೇ ಕೊಚ್ಚಿ ಹೋಗಿ ಗ್ರಾಮಗಳ ನಡುವೆ ಸಂಪರ್ಕ ಕಡಿತವಾಗಿದೆ. ಸೇತುವೆಗಳು ಕುಸಿದು ಬಿದ್ದಿವೆ. ನಿವೃತ್ತ ಮೇಜರ್ ಜನರಲ್ ಕರುಂಬಯ್ಯ ಅವರ ತೋಟ, ಮನೆ ಜಲಾವೃತಗೊಂಡು ರಸ್ತೆಯೇ ಇಲ್ಲದಂತಾಗಿದೆ. ದೇಶ ಕಾಯ್ದ ಸೈನಿಕನಿಗೇ ರಕ್ಷಣೆ ಕೊಡಲಾಗದಿದ್ದರೆ ನಾವೇಕೆ ಅಧಿಕಾರದಲ್ಲಿರಬೇಕು ಎಂದು ಜಿಟಿಡಿ ಕಿಡಿಕಾರಿದರು.

ಯಾಕೆ ಸುಳ್ಳು ಹೇಳ್ತೀರಿ: ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಮಾಡಿರುವ ರಸ್ತೆಗಳು ಹಾಳಾಗಿವೆ, ನಿರ್ವಹಣೆ ಗುತ್ತಿಗೆದಾರನ ಜವಾಬ್ದಾರಿಯಲ್ಲವೇ ಎಂದು ಪ್ರಶ್ನಿಸಿದ ಶಾಸಕರಿಗೆ ಯಾವುದೇ ರಸ್ತೆಗಳೂ ಹಾಳಾಗಿಲ್ಲ ಎಂದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಅವರು, ಯಾಕೆ ಸುಳ್ಳು ಹೇಳ್ತೀರಿ, ಹಾರೋಹಳ್ಳಿ, ಗುಮಚಗಳ್ಳಿ ರಸ್ತೆಗಳನ್ನು ನೋಡಿದ್ದೀರಾ, ನೀವು ಫೀಲ್ಡ್‌ಗೆ ಹೋಗಿ ನೋಡಿದರೆ ತಿಳಿಯುತ್ತದೆ ಎಂದು ಗದರಿಸಿದರು.

ಪಿರಿಯಾಪಟ್ಟಣದಲ್ಲೂ: ಪಿರಿಯಾಪಟ್ಟಣ ತಾಲೂಕಿನ ಎಲ್ಲಾ ರಸ್ತೆಗಳೂ ಮಳೆಯಿಂದ ಹಾಳಾಗಿವೆ. ಜನರು ನಮ್ಮನ್ನು ಮನಬಂದಂತೆ ಬಯ್ಯುತ್ತಿದ್ದಾರೆ. ರಸ್ತೆ ನಿರ್ಮಿಸಲು ಅರಣ್ಯ ಇಲಾಖೆಯವರು ಅನುಮತಿ ನೀಡುತ್ತಿಲ್ಲ ಎಂದು ಶಾಸಕ ಕೆ. ಮಹದೇವ ಸಚಿವರ ಗಮನಕ್ಕೆ ತಂದರು. ಅದಕ್ಕೆ ಪ್ರತಿಕ್ರಿಯಿಸಿದ ಎಸ್.ಟಿ. ಸೋಮಶೇಖರ್, ಇದು ಕೇವಲ ಮೈಸೂರಿಗಷ್ಟೇ ಸೀಮಿತವಾಗಿಲ್ಲ, ಇಡೀ ರಾಜ್ಯದಲ್ಲಿ ಈ ಸಮಸ್ಯೆ ಇದೆ ಎಂದಾಗ ಸಭೆಯಲ್ಲಿದ್ದ ಡಿಸಿಎಫ್ ಕಮಲಾ ಕರಿಕಾಳನ್, ನಮ್ಮ ಹಂತದಲ್ಲೇ ಪರಿಹರಿಸಲೆತ್ನಿಸುತ್ತೇವೆ ಎಂದರು.

ಮನೆ ಕೆಡವಿ ಪರಿಹಾರಕ್ಕೆ ಅರ್ಜಿ!

ಎಂದು ಸಚಿವರು ತಿಳಿಸಿದರು. ಅಂತಹ ನಕಲಿ ಪರಿಹಾರ ಕೇಳುವವರಿಗೆ ಜನಪ್ರತಿನಿಧಿಗಳು ಶಿಫಾರಸು ಮಾಡಬಾರದು, ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಮಹಜರು ನಡೆಸಿ ಅಕ್ಕಪಕ್ಕದವರಿಂದಲೂ ಮಾಹಿತಿ ಪಡೆದು, ನಿಜವಾಗಲೂ ಮಳೆಯಿಂದ ಕುಸಿದಿದೆಯೇ ಅಥವಾ ಉದ್ದೇಶಪೂರ್ವಕವಾಗಿ ಮನೆಯನ್ನು ಕೆಡವಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಂಡ ನಂತರವಷ್ಟೇ ಪರಿಹಾರಕ್ಕೆ ವರದಿ ಸಲ್ಲಿಸಬೇಕು ಎಂದು ಸಚಿವರು ಸೂಚನೆ ನೀಡಿದರು. ಅದಕ್ಕೆ ಪ್ರತಿಕ್ರಿಯಿಸಿದ ಶಾಸಕ ಕೆ.ಮಹದೇವು ಅವರು, ನಮ್ಮ ಕ್ಷೇತ್ರದಲ್ಲಿ ಯಾರೂ ಆ ರೀತಿ ಮಾಡುವುದಿಲ್ಲ. ನಾವು ಅಂತಹುದಕ್ಕೆ ಶಿಫಾರಸು ಮಾಡುವುದಿಲ್ಲ ಎಂದಾಗ, ನನಗೆ ಬಂದ ಮಾಹಿತಿಯನ್ನು ಹೇಳಿದ್ದೆನಷ್ಟೆ, ಇಂತಹವರೇ ಮಾಡಿದ್ದಾರೆಂದು ಹೇಳಲಿಲ್ಲ. ಅಂತಹ ಅರ್ಜಿಗಳು ಬಂದಲ್ಲಿ ಎಚ್ಚರ ವಹಿಸಬೇಕೆಂದು ಹೇಳಿದ್ದೆನಷ್ಟೇ ಎಂದು ಸೋಮಶೇಖರ್ ತಿಳಿಸಿದರು.

ಒತ್ತುವರಿ ತೆರವಿಗೆ ಜಿಟಿಡಿ ಮನವಿ

ನಾಲೆ ಒತ್ತುವರಿ ತೆರವುಗೊಳಿಸುವಂತೆ ಜಿ.ಟಿ.ದೇವೇಗೌಡರು ತಿಳಿಸಿದರು. ಜಿಲ್ಲಾ ಉಸ್ತುವಾರಿ ಸಚಿವರು ನೀಡಿದ ಸೂಚನೆಯಂತೆ ಕಂದಾಯ ಇಲಾಖೆಯ ಮೂಲ ನಕ್ಷೆ, ದಾಖಲಾತಿಗಳಂತೆ ಸರ್ವೆ ಮಾಡಿಸಿ ನಾಲೆಯ ಒತ್ತುವರಿ ತೆರವುಗೊಳಿಸಲು ಮುಡಾ, ಬೋಗಾದಿ ಪುರಸಭೆ ಹಾಗೂ ನಗರ ಪಾಲಿಕೆ ಅಧಿಕಾರಿಗಳು ಸಮಗ್ರ ವರದಿ ನೀಡಿ ಎಂದು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಅವರು ಸೂಚನೆ ನೀಡಿದರು.

ಮಳೆ ಹಾನಿ ಪರಿಹಾರ: ಜನವರಿಯಿಂದ ಈವರೆಗೆ ಜಿಲ್ಲೆಯಲ್ಲಿ ಅತೀ ಹೆಚ್ಚು 971.2 ಮಿ.ಮೀ. ಮಳೆಯಾಗಿದ್ದು, 418 ಹೆಕ್ಟೇರ್ ಬೆಳೆ ನಾಶವಾಗಿದೆ. 171 ಹೆಕ್ಟೇರ್ ಭತ್ತದ ಫಸಲು ಹಾನಿಯಾಗಿದ್ದು, ರೈತರ ಬ್ಯಾಂಕ್ ಖಾತೆಗೆ ಪರಿಹಾರದ ಹಣ ಪಾವತಿಯಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ಚಂದ್ರಶೇಖರ್ ಮಾಹಿತಿ ನೀಡಿದರು.

ಸಮೀಕ್ಷೆ ಸರಿಯಿಲ್ಲ: ಬೆಳೆ ನಾಶ ಪ್ರಮಾಣವನ್ನು ವಿಎ, ಆರ್‌ಐಗಳು ಸಮೀಕ್ಷೆ ಮಾಡುತ್ತಿರುವುದು ಸರಿಯಿಲ್ಲ. ಅಲ್ಲದೇ ಕೆಲವರನ್ನು ಕೈಬಿಡಲಾಗಿದೆ ಎಂದು ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಆರೋಪಿಸಿದರು. ಅದಕ್ಕೆ ಧನಿಗೂಡಿಸಿದ ಶಾಸಕ ಜಿ.ಟಿ.ದೇವೇಗೌಡರು, ಬೆಳೆ ಹಾನಿ ಸಮೀಕ್ಷೆ ಮಾಡುವಾಗ ಯಾವುದೇ ರೈತರ ಜಮೀನನ್ನು ಕೈಬಿಡಬಾರದು. ಮಳೆ ನಿಂತ ಮೇಲಾದರೂ ನಿಖರವಾಗಿ ನಷ್ಟದ ಪ್ರಮಾಣ ತಿಳಿದು ಪರಿಹಾರ ನೀಡಬೇಕು ಎಂದರು.

ಶೇ.60ರಷ್ಟು ಪರಿಹಾರ: ಈಗಾಗಲೇ ಶೇ.60ರಷ್ಟು ಬೆಳೆ ಹಾನಿ ಪರಿಹಾರ ನೀಡಲಾಗಿದೆ. ಒಂದು ವಾರದೊಳಗಾಗಿ ಉಳಿದ ಜಮೀನಿಗೆ ಪರಿಹಾರದ ಹಣ ಪಾವತಿಸುತ್ತೇನೆ ಎಂದ ಜಿಲ್ಲಾಧಿಕಾರಿಗಳು, ಕೃಷಿ ಮತ್ತು ತೋಟಗಾರಿಕೆ ಅಧಿಕಾರಿಗಳು ಪರಿಶೀಲಿಸಿ ಪ್ರಸ್ತಾವನೆ ಕಳಿಸಿದ್ದಲ್ಲಿ ಪರಿಹಾರ ಮಂಜೂರು ಮಾಡುತ್ತೇನೆ ಎಂದರು.

ಶಾಸಕರ ಸಲಹೆ: ಕೆರೆಗಳ ಸುರಕ್ಷತೆ ಬಗ್ಗೆ ಎಚ್ಚರ ವಹಿಸಿ, ಸ್ಥಳಕ್ಕೆ ಭೇಟಿ ನೀಡಿ ವಸ್ತುಸ್ಥಿತಿ ನೋಡಿ ಅತೀವೃಷ್ಟಿ ಹಾನಿಗೆ ಪರಿಹಾರ ನೀಡಿ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ತಿಳಿಸಿದರೆ, ಪಿರಿಯಾಪಟ್ಟಣ ತಾಲೂಕಿನ ಹಲವು ರಸ್ತೆ, ಕೆರೆಗಳು ಹಾಳಾಗಿವೆ. ಸರಿಯಾದ ಮಾಹಿತಿಯೊಂದಿಗೆ ಎಸ್ಟಿಮೇಟ್ ತಯಾರಿಸಿದಲ್ಲಿ ಅನು ದಾನಕ್ಕಾಗಿ ಸರ್ಕಾರದ ಮೇಲೆ ಒತ್ತಡ ತರಬಹುದು ಎಂದು ಶಾಸಕ ಕೆ.ಮಹದೇವ್ ನುಡಿದರು.

ಪ್ರತ್ಯೇಕ ಮಿನಿ ವಿಧಾನಸೌಧ: ಸರಗೂರು ತಾಲೂಕು ಕಚೇರಿಗಾಗಿ ಪ್ರತ್ಯೇಕ ಮಿನಿ ವಿಧಾನಸೌಧ ನಿರ್ಮಿಸಲು ಉಚಿತವಾಗಿ ಜಾಗ ನೀಡಿ ಕಟ್ಟಡ ನಿರ್ಮಾಣಕ್ಕೆ ಅನುದಾನ ಕೊಡಿಸಬೇಕು. ಬುಡಕಟ್ಟು ಜನರಿಗೆ ಹಕ್ಕು ಪತ್ರ ವಿತರಿಸಬೇಕು. ಬೆಳೆ ನಷ್ಟ, ಮನೆ ಹಾನಿಗೊಳಗಾದವರಿಗೆ ಸೂಕ್ತ ಪರಿಹಾರ ಪಾವತಿಸಬೇಕೆಂದು ಶಾಸಕ ಅನಿಲ್ ಚಿಕ್ಕಮಾದು ಆಗ್ರಹಿಸಿದರು.

ಮೈಸೂರಲ್ಲಿ ಕಾವೇರಿ ಕಲಾ ಗ್ಯಾಲರಿ ಲೋಕಾರ್ಪಣೆ

ಜೀವನದಿ ಕಾವೇರಿ ಉಗಮದಿಂದ ಸಮುದ್ರ ಸೇರುವವರೆಗಿನ ಮಹತ್ವದ ವೈಜ್ಞಾನಿಕ ಮಾಹಿತಿ





ಕಾವೇರಿ ಕಲಾ ಗ್ಯಾಲರಿಯನ್ನು ಉದ್ಘಾಟಿಸಿದ ಸಚಿವ ಎಸ್.ಟಿ.ಸೋಮಶೇಖರ್ ಕಾವೇರಿ ನದಿ ಪಾತ್ರದಲ್ಲಿರುವ ಕೊಡವರ, ಜೇನು ಕುರುಬಾ ಸಾಂಪ್ರದಾಯವನ್ನು ಸಾರುವ ಪ್ರದರ್ಶಿಕೆಯನ್ನು ವೀಕ್ಷಿಸಿದರು. ಈವೇಳೆ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ. ರೂಪ, ವಸ್ತುಪ್ರದರ್ಶನದ ಸಿಇಓ ಕೆ.ರುದ್ರೇಶ್ ಇದ್ದರು.

ವರ್ಷದ 365 ದಿನವೂ ಗ್ಯಾಲರಿ ಲಭ್ಯ

"ಕಾವೇರಿ ನದಿಯ ಮಹತ್ವವನ್ನು ಇಡೀ ರಾಜ್ಯದ ಜನರಿಗೆ ತಿಳಿಸಲು ಕಾವೇರಿ ಕಲಾ ಗ್ಯಾಲರಿ ಸಹಕಾರಿಯಾಗಲಿದ್ದು, ಗ್ಯಾಲರಿ ಮತ್ತು ಮರಳಿನಲ್ಲಿ ನಿರ್ಮಾಣ ವಾಗುತ್ತಿರುವ ಕಲಾಕೃತಿಗಳು ವರ್ಷದ 365 ದಿನಗಳು ವೀಕ್ಷಣೆಗೆ ಲಭ್ಯವಿರಲಿದೆ. ಪ್ರವೇಶ ದರವನ್ನು ನಿಗದಿಪಡಿಸಿಲ್ಲ. 20ರಿಂದ 30 ರೂ. ನಿಗದಿಪಡಿಸಲು ಚಿಂತಿಸಲಾಗಿದೆ. 8 ಕೋಟಿ 9 ಲಕ್ಷ ರೂ.ಗೆ ಬೆಂಗಳೂರಿನ ಫನ್ ವರ್ಡ್ ಸಂಸ್ಥೆಗೆ ಈ ಬಾರಿ ದಸರಾ ಮಹೋತ್ಸವದ ಗ್ಲೋಬಲ್ ಟೆಂಡರ್ ಆಗಿದೆ. ದಸರಾಗೆ ಸಂಬಂಧಿಸಿದಂತೆ ಪ್ರಾಧಿಕಾರದ ಆವರಣದಲ್ಲಿ ಎಲ್ಲಾ ಕಾರ್ಯಗಳು ತ್ವರಿತಗತಿಯಲ್ಲಿ ಸಾಗಿದೆ. –ಮಿರ್ಲೆ ಶ್ರೀನಿವಾಸ್‌ಗೌಡ, ಅಧ್ಯಕ್ಷ, ವಸ್ತು ಪ್ರದರ್ಶನ ಪ್ರಾಧಿಕಾರ

ಮೈಸೂರು, ಸೆ.17(ಜಿಎ)– ಮೈಸೂರು ದಸರಾ ಉತ್ಸವಕ್ಕೆ ಬರುವ ಪ್ರವಾಸಿಗರಿಗೆ ಕಾವೇರಿ ನದಿಯ ಮಹತ್ವ ಮತ್ತು ಕಾವೇರಿ ಕಣಿವೆಯಲ್ಲಿರುವ ತಾಣಗಳ ಬಗ್ಗೆ ವೈಜ್ಞಾನಿಕವಾಗಿ ಮಾಹಿತಿ ನೀಡುವ 'ಕಾವೇರಿ ಕಲಾ ಗ್ಯಾಲರಿ' ಶನಿವಾರ ಲೋಕಾರ್ಪಣೆಗೊಂಡಿತು.

ಕರ್ನಾಟಕ ಪ್ರವಾಸೋದ್ಯಮ ಇಲಾಖೆ, ಮೈಸೂರು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ, ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸ್ ಮತ್ತು ನ್ಯಾಷನಲ್ ಕೌನ್ಸಿಲ್ ಆಫ್ ಸೈನ್ಸ್ ಮ್ಯೂಸಿಯಂ ಸಹಯೋಗದೊಂದಿಗೆ ನಗರದ ವಸ್ತು ಪ್ರದರ್ಶನ ಪ್ರಾಧಿಕಾರ ಆವರಣದಲ್ಲಿ ನಿರ್ಮಾಣವಾಗಿರುವ 'ಕಾವೇರಿ ಕಲಾ ಗ್ಯಾಲರಿ' ಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಶನಿವಾರ ಲೋಕಾರ್ಪಣೆಗೊಳಿಸಿದರು.

ನಂತರ ಮಾತನಾಡಿದ ಅವರು, ಕಾವೇರಿ ಕಲಾ ಗ್ಯಾಲರಿಯೂ ಎಂದೋ ಉದ್ಘಾಟನೆಯಾಗಬೇಕಿತ್ತು. ಈ ಹಿಂದೆ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಹೇಮಂತ್ ಕುಮಾರ್‌ಗೌಡ ಗ್ಯಾಲರಿ ನಿರ್ಮಾಣ ಮಾಡುವ ಉದ್ದೇಶದಿಂದ ಕಾರ್ಯ ಆರಂಭಿಸಿದ್ದರು. ಆದರೆ, ಯಾವುದಕ್ಕೂ ಸಮಯ ಎಂಬುದು ಬಹಳ ಮುಖ್ಯ. ಆ ಸಮಯ ಇಂದು ಕೂಡಿ ಬಂದಿದ್ದು, ಗ್ಯಾಲರಿ ಇಂದು ಲೋಕಾರ್ಪಣೆಯಾಗಿದೆ ಎಂದರು.

ದಸರಾ ಮುಂಚಿತವಾಗಿ ವಸ್ತುಪ್ರದರ್ಶನ ಆರಂಭಗೊಳ್ಳಬೇಕು ಎಂಬ ಮುಖ್ಯಮಂತ್ರಿಗಳ ನಿರ್ದೇಶನದಂತೆ ಅದರ ಅನುಸಾರವಾಗಿ ಇಂದು ಮೊದಲ ಹಂತವಾಗಿ ಕಾವೇರಿ ಕಲಾ ಗ್ಯಾಲರಿ ಅನಾವರಣಗೊಂಡಿದೆ. ಕಾವೇರಿ ನದಿಗೆ ನಾಡಿನಲ್ಲಿ ವಿಶೇಷ ಸ್ಥಾನಮಾನವಿದ್ದು, ಮೈಸೂರು ಭಾಗದ ಜನತೆಗೆ ಇದರ ಮಹತ್ವ ಹೆಚ್ಚು ತಿಳಿದಿದೆ.

ಬೆಂಗಳೂರಿನ ಜನತೆಗೆ ಕಾವೇರಿ ನದಿ ಮೇಲೆ ವಿಶೇಷ ಗೌರವ, ಪಾವಿತ್ರ್ಯತೆ ಇದ್ದು, ಪೂಜೆ ಮಾಡುತ್ತಾರೆ. ಕಾವೇರಿ ಬಗ್ಗೆ ಹೊರಗಿನವರಿಗೆ ಹೆಚ್ಚು ಮಾಹಿತಿ ಇಲ್ಲ. ಈ ಬಗ್ಗೆ ತಿಳಿಸುವ ಪ್ರಯತ್ನವಾಗಿ ಈ ಕಾವೇರಿ ಕಲಾ ಗ್ಯಾಲರಿ ನಿರ್ಮಾಣವಾಗಿರುವುದು ವಿಶೇಷವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಳೆದ 2 ವರ್ಷಗಳಿಂದ 124 ಟಿಎಂಸಿಯಷ್ಟು ನೀರು ತಮಿಳುನಾಡಿನ ಕಡೆ ಹರಿದ ಪರಿಣಾಮ ಎರಡು ಮೂರು ವರ್ಷಗಳಿಂದ ಕಾವೇರಿ ವಿಚಾರ ವಾಗಿ ಯಾವುದೇ ಸಮಸ್ಯೆಗಳಾಗಿಲ್ಲ. ಇಲ್ಲವೆಂದರೆ ತಮಿಳುನಾಡು ಕಾವೇರಿ ಹೆಸರನ್ನು ತೆಗೆದುಕೊಂಡು ಕ್ಯಾತೆ ಮಾಡುತ್ತಿದ್ದರು. ಕಾವೇರಿ ಗ್ಯಾಲರಿಯೂ ಅದ್ಭುತವಾಗಿ ಮೂಡಿ ಬಂದಿದೆ. ಇದನ್ನು ವೀಕ್ಷಿಸಲು ಸುಧೀರ್ಘ 3 ತಿಂಗಳ ಅವಕಾಶವಿದ್ದು, ಪ್ರತಿಯೊಬ್ಬರು ನೋಡಿ ಕಾವೇರಿ ಮಹತ್ವವನ್ನು ತಿಳಿದುಕೊಳ್ಳಿ ಎಂದರು.

ಕಾವೇರಿ ಕಲಾ ಗ್ಯಾಲರಿಯಲ್ಲಿ ಕಾವೇರಿ ನದಿಯೂ ಎಲ್ಲಿ ಹುಟ್ಟುತ್ತದೆ ಮತ್ತು ಎಲ್ಲಿಗೆ ಹೋಗಿ ಸೇರುತ್ತದೆ ಎಂಬುದನ್ನು ವೈಜ್ಞಾನಿಕವಾಗಿ ರೂಪಿಸಲಾಗಿದೆ ಎಂದು ಗುಲ್ಬರ್ಗಾ ವಿವಿ ವಿಶ್ರಾಂತ ಕುಲಪತಿ ಪ್ರೊ. ಡಾ.ಎಸ್.ಆರ್.ನಿರಂಜನ್ ತಿಳಿಸಿದರು.

'ಗಂಗಾ' ನದಿ ಗ್ಯಾಲರಿಯನ್ನು ಅಲಹಾಬಾದ್‌ನಲ್ಲಿ, 'ಬ್ರಹ್ಮಪುತ್ರ' ಗ್ಯಾಲರಿಯನ್ನು ಅಸ್ಸಾಂನ ಗುವಾಹಟಿಯಲ್ಲಿ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸ್ ಇಂಡಿಯಾ ನಿರ್ಮಿಸಿದ್ದು, ನಮ್ಮಲ್ಲಿಯೂ ಪ್ರೊ. ಕಸ್ತೂರಿ ರಂಗನ್ ಅವರು ಯಡಿಯೂರಪ್ಪ ಮುಖ್ಯಮಂತ್ರಿಗಳಾಗಿದ್ದಾಗ ಕಾವೇರಿ ಕಲಾ ಗ್ಯಾಲರಿ ಬಗ್ಗೆ ಪ್ರಸ್ತಾವನೆ ಸಲ್ಲಿಸಿದ್ದರು. ಅದರಂತೆ ಇಂದು ಎನ್‌ಎಎಸ್‌ಐ ಸಹಯೋಗದೊಂದಿಗೆ ಗ್ಯಾಲರಿ ನಿರ್ಮಾಣವಾಗಿದೆ. ನಮ್ಮಲ್ಲಿ ಬಹಳ ಜನಕ್ಕೆ ಕಾವೇರಿ ನದಿಯ ಪ್ರಾಮುಖ್ಯತೆ ಮತ್ತು ಬೇರೆ ಬೇರೆ ಆಯಾಮದಲ್ಲಿ ಉಪಯುಕ್ತವಾಗಿದೆ ಎಂಬುದೇ ತಿಳಿದಿಲ್ಲ. ಅದನ್ನು ತಿಳಿಯಲು ಇದು ಸಹಕಾರಿಯಾಗಿದ್ದು, ಶಾಲೆ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ ತಿಳಿದುಕೊಳ್ಳಬೇಕಿದೆ ಎಂದರು. ಕಾರ್ಯಕ್ರಮದಲ್ಲಿ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಮೇಯರ್ ಶಿವಕುಮಾರ್, ಉಪಮೇಯರ್ ರೂಪಾ ಯೋಗೇಶ್, ಬಿಜೆಪಿ ಅಧ್ಯಕ್ಷ ಶ್ರೀವತ್ಸ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಗ್ಯಾಲರಿಯ ವಿಶೇಷತೆಗಳು

ವಸ್ತು ಪ್ರದರ್ಶನ ಪ್ರಾಧಿಕಾರದ ಕಾರಂಜಿ ಕಟ್ಟಡದಲ್ಲಿನ ಅಂದಾಜು 19 ಸಾವಿರ ಚದರ ಅಡಿ ಪ್ರದೇಶದಲ್ಲಿ ಸುಮಾರು 3.5 ಕೋಟಿ ರೂ. ವೆಚ್ಚದಲ್ಲಿ 'ಕಾವೇರಿ ಕಲಾ ಗ್ಯಾಲರಿ'ಯನ್ನು ನಿರ್ಮಿಸಲಾಗಿದೆ. ನೆಲ ಮಹಡಿಯಲ್ಲಿ ನದಿಗೆ ಸಂಬಂಧಿಸಿದ ವಿವರಗಳನ್ನು ಜೋಡಿಸಲಾಗಿದೆ. ಗ್ಯಾಲರಿಯ ಒಳಭಾಗದಲ್ಲಿ ಕಾವೇರಿ ತಲಕಾವೇರಿಯಿಂದ ತಮಿಳುನಾಡಿನ ಪೂಂಪುಹಾರ್‌ವರೆಗೆ ಸಾಗುವ ನದಿಯ ನಕಾಶೆ, ಪ್ರವಾಸಿ ಕೇಂದ್ರಗಳು, ಸಾಂಸ್ಕೃತಿಕ ವಿವರಗಳು ಇವೆ.

3ಡಿ ಸಾಕ್ಷ್ಯಚಿತ್ರ

ದಕ್ಷಿಣ ಕರ್ನಾಟಕದ ಪ್ರಮುಖ ನದಿಯಾಗಿರುವ ಕಾವೇರಿ ಮಹತ್ವ, ಈ ಕಣಿವೆಯ ಪ್ರಮುಖ ತಾಣಗಳನ್ನು ಪರಿಚಯಿಸುವ ಮತ್ತು ಬೇರೆ ಯಾವ ಆಯಾಮಗಳಲ್ಲಿ ಉಪಯುಕ್ತವಾಗಿದೆ ಎಂಬುದನ್ನು ತಿಳಿಸುವ ಉದ್ದೇಶದಿಂದ 30 ನಿಮಿಷಗಳ 3ಡಿ ಸಾಕ್ಷ್ಯ ಚಿತ್ರವನ್ನು ವೀಕ್ಷಣೆಗೆಂದು ವಿಶೇಷ ಕೊಠಡಿಯನ್ನು ನಿರ್ಮಾಣ ಮಾಡಲಾಗಿದ್ದು, ವಿಶೇಷ ಅನುಭವವನ್ನು ನೀಡಲಿದೆ.

ತಮ್ಮ ಪಠ್ಯ ಕೈಬಿಡಿ: ಸರ್ಕಾರಕ್ಕೆ ದೇಮ ಪತ್ರ



ಬೆಂಗಳೂರು: ನೂತನ ಪಠ್ಯ ಪರಿಷ್ಕರಣೆ ವಿವಾದ ರಾಜ್ಯದಲ್ಲಿ ತೀವ್ರಗೊಳ್ಳುತ್ತಿದ್ದು, ತಮ್ಮ ಪಠ್ಯವನ್ನು ಕೈಬಿಡಬೇಕು ಎಂದು ಹಿರಿಯ ಸಾಹಿತಿ ದೇವನೂರು ಮಹಾದೇವ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರ ಬರೆದಿರುವ ದೇವನೂರು ಮಹಾದೇವ, ಈ ಹಿಂದಿನ ಪಠ್ಯದಲ್ಲಿ ಎಲ್. ಬಸವರಾಜು, ಎ.ಎನ್.ಮೂರ್ತಿರಾವ್, ಪಿ. ಲಂಕೇಶ್, ಸಾರಾ ಅಬೂ ಬಕರ್ ಮೊದಲಾದವರ ಕತೆ, ಲೇಖನಗಳನ್ನು ಕೈಬಿಟ್ಟವರಿಗೆ ಕನ್ನಡ ನಾಡು, ನುಡಿ, ಸಂಸ್ಕೃತಿ ಕುರಿತು ಏನೇನೂ ತಿಳಿದಿಲ್ಲ ಎಂದೇ ಅರ್ಥ ಎಂದು ಖಂಡಿಸಿದ್ದಾರೆ.

ಪಠ್ಯಪುಸ್ತಕ ಸಮಿತಿಯ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರು ತನಗೆ ಲೇಖಕರ ಜಾತಿ ತಿಳಿದಿಲ್ಲ ಎನ್ನುತ್ತಾರೆ. ಭಾರತದಂತಹ ಸಂಕೀರ್ಣ ದೇಶದಲ್ಲಿ ಪ್ರಜ್ಞಾಪೂರ್ವಕವಾಗಿ ಜಾತಿಯನ್ನು ಗುರುತಿಸದಿದ್ದರೆ ಅಲ್ಲಿ ಸಹಜವಾಗಿ ಶೇ.90ರಷ್ಟು ಅವರ ಜಾತಿಯವರೇ ತುಂಬಿಕೊಳ್ಳುತ್ತಾರೆ. ಅವರವರ ಅಡಿಗೆ ಮನೆ ವಾಸನೆ ಪ್ರಿಯವಾಗುವಂತೆ. ಹೀಗಾಗಿ ಭಾರತದ ಬಹುತ್ವ, ಪಾರ್ಟಿಸಿಪೇಟರಿ ಪ್ರಜಾಪ್ರಭುತ್ವ ಕಣ್ಮರೆಯಾಗುತ್ತಿದೆ. ಇದು ಈಗಿನದ್ದಲ್ಲ. ಡಾ.ಮುರಳಿ ಮನೋಹರ ಜೋಶಿ ಅವರು ಕೇಂದ್ರ ಶಿಕ್ಷಣ ಸಚಿವರಾಗಿದ್ದ ಕಾಲದಿಂದಲೂ ನಡೆದುಕೊಂಡು ಬಂದಿದೆ. ಚಾತುರ್ವರ್ಣ ಹಿಂದೂ ಪ್ರಭೇದದ ಆರ್‌ಎಸ್‌ಎಸ್ ಸಂತಾನವಾದ ಬಿಜೆಪಿ ಆಳ್ವಿಕೆಯಲ್ಲಿ ಮೊದಲು ಕೈ ಹಾಕುವುದೇ ಶಿಕ್ಷಣ ಮತ್ತು ಇತಿಹಾಸಗಳ ಕುತ್ತಿಗೆಗೆ. ಇಲ್ಲೂ ಇದೇ ಆಗಿದೆ ಎಂದಿದ್ದಾರೆ.

ಈ ಪಠ್ಯಗಳೆಲ್ಲಾ ಪ್ರಕಟವಾದ ಮೇಲೆ ಅವುಗಳನ್ನು ಪರಿಶೀಲಿಸಿ, ಅಲ್ಲಿನ ತಪ್ಪು ಮತ್ತು ಕೊರತೆಗಳನ್ನು ತುಂಬಲು, ನಮ್ಮ ಶಾಲಾ ಮಕ್ಕಳಿಗೆ ಪರ್ಯಾಯ ಪಾಠಗಳನ್ನು, ಪೂರಕ ವಿಷಯಗಳನ್ನು, ಮುಖ್ಯವಾಗಿ ಸಂವಿಧಾನವನ್ನು ಬಿತ್ತರಿಸುವ ವಾಟ್ಸಾಪ್, ಇ–ಮೇಲ್, ಆನ್‌ಲೈನ್ ಕ್ಲಾಸ್ ಇತ್ಯಾದಿಗಳನ್ನು ರೂಪಿಸಲು ಆಲೋಚಿಸುತ್ತಿರುವ ನಾಡಿನ ಆರೋಗ್ಯವಂತ ಮನಸ್ಸುಗಳ ಜೊತೆ ನಾನಿರಲು ಬಯಸುತ್ತೇನೆ ಎಂದು ತಿಳಿಸಿದ್ದಾರೆ.

ಬೆಟ್ಟ ಕುರುಬ ಸಮುದಾಯಕ್ಕೆ ಎಸ್‌ಟಿ ಮೀಸಲಾತಿ ಸ್ವಾಗತಾರ್ಹ



ಸುಬ್ರಹ್ಮಣ್ಯ

ಮೈಸೂರು, ಸೆ.17–ಬೆಟ್ಟ ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಿದ ಕೇಂದ್ರ ಸರ್ಕಾರದ ನಿರ್ಣಯವನ್ನು ತುಂಬು ಹೃದಯದಿಂದ ಸ್ವಾಗತಿಸುವುದಾಗಿ ರಾಜ್ಯ ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ತಿಳಿಸಿದ್ದಾರೆ. ಈ ಸಮುದಾಯದ ಬಹುದಿನಗಳ ಬೇಡಿಕೆಯಂತೆ ಜಾತ್ಯತೀತ ನಾಯಕರಾದ ಸಿದ್ದರಾಮಯ್ಯ ಅವರ ಆಡಳಿತಾವಧಿಯಲ್ಲಿ ಮೈಸೂರಿನ ಬುಡಕಟ್ಟು ಅಧ್ಯಯನ ಸಂಸ್ಥೆಯಿಂದ ಕುಲಶಾಸ್ತ್ರೀಯ ಅಧ್ಯಯನ ನಡೆಸಿ, ಅದರ ಶಿಫಾರಸಿನ ಆಧಾರದಲ್ಲಿ ಕಾಡು ಕುರುಬ ಜಾತಿ ಸೂಕ್ಷ್ಮ ಸಮನಾರ್ಥ ಹೊಂದಿರುವ ಬೆಟ್ಟ ಕುರುಬರನ್ನು ಕೂಡ ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂದು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದರು. ಈಗ ಕೇಂದ್ರ ಸರ್ಕಾರ ಮನವಿಯನ್ನು ಪುರಸ್ಕರಿಸಿ ಈ ನಿರ್ಧಾರ ಕೈಗೊಂಡಿದೆ. ಇಲ್ಲಿಯವರೆಗೆ ಮೀಸಲಾತಿ ಸೌಲಭ್ಯದಿಂದಲೇ ವಂಚಿತರಾಗಿದ್ದ ಬೆಟ್ಟ ಕುರುಬ ಸಮುದಾಯದ ಜನ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಮೀಸಲಾತಿಯ ಲಾಭ ಪಡೆದು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅವಕಾಶ–ಪ್ರಾತಿನಿಧ್ಯ ಪಡೆದು ಬೆಳೆಯಲಿ ಎಂಬುದು ನಮ್ಮ ಆಶಯ. ಇದು ಸರ್ವ ಜನಾಂಗದ ನಾಯಕ ಸಿದ್ದರಾಮಯ್ಯ ಅವರಿಗೆ ಸಂದ ಜಯವೂ ಆಗಿದೆ ಎಂದು ಸುಬ್ರಹ್ಮಣ್ಯ ಅಭಿಪ್ರಾಯಪಟ್ಟಿದ್ದಾರೆ.

ರಸ್ತೆ ಗುಂಡಿ ಮುಚ್ಚಲು 25 ಕೋಟಿ ಅನುದಾನ ಬಂದಿತ್ತು




ಮೈಸೂರು, ಸೆ.17(ಆರ್‌ಕೆ)–ಮೈಸೂರಿನ ರಸ್ತೆಗಳ ಗುಂಡಿ ಮುಚ್ಚಲು ನಾನು ಮೇಯರ್ ಆಗಿದ್ದಾಗಲೇ ಸರ್ಕಾರ 25 ಕೋಟಿ ರೂ. ಅನುದಾನ ಮಂಜೂರು ಮಾಡಿತ್ತು ಎಂದು ಮಾಜಿ ಮೇಯರ್ ಸುನಂದಾ ಪಾಲನೇತ್ರ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ನಾನು ಮೇಯರ್ ಆಗಿ ಅಧಿಕಾರ ವಹಿಸಿಕೊಂಡಾಗ ದಸರಾ ವೇಳೆಗೆ ಮೈಸೂರು ನಗರವನ್ನು, ಗುಂಡಿ ಮುಕ್ತ ರಸ್ತೆ ಮಾಡುತ್ತೇನೆಂದು ಹೇಳಿದ್ದೆ. ಅದರಂತೆ ಸರ್ಕಾರದ ಮಟ್ಟದಲ್ಲಿ ವ್ಯವಹರಿಸಿ 25 ಕೋಟಿ ಅನುದಾನ ತರುವಲ್ಲಿ ಯಶಸ್ವಿಯಾಗಿದ್ದೆ. ಅನುದಾನ ನೀಡಿ ಸಹಕರಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದಿದ್ದಾರೆ. ರಸ್ತೆಗಳ ಗುಂಡಿ ಮುಚ್ಚುವ ಹಾಗೂ ಡಾಂಬರೀಕರಣ ಕಾಮಗಾರಿ ಆರಂಭವಾಗಿದ್ದು, ದಸರಾ ವೇಳೆಗೆ ಕೆಲಸ ಪೂರ್ಣಗೊಂಡು ನಾಗರಿಕರು ಸುಗಮವಾಗಿ ಸಂಚರಿಸುವಂತಾಗಲಿದೆ ಎಂದು ಪಾಲನೇತ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊಸದಾಗಿ ಕೆಪಿಎಸ್ ಆರಂಭಿಸುವುದಿಲ್ಲ



ಬೆಳಗಾವಿ: ರಾಜ್ಯದಲ್ಲಿ ಇರುವ ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್)ಗಳಿಗೆ ಆಂಗ್ಲ ಮಾಧ್ಯಮ ಶಿಕ್ಷಕರನ್ನು ನೇಮಿಸುವವರೆಗೆ ಹೊಸದಾಗಿ ಕೆಪಿಎಸ್ ಹಾಗೂ ಸರ್ಕಾರಿ ಇಂಗ್ಲಿಷ್ ಮಾಧ್ಯಮ ಶಾಲೆ ಆರಂಭಿಸುವುದಿಲ್ಲ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ ಸ್ಪಷ್ಟ ಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಈಗ 276 ಕೆಪಿಎಸ್‌ಗಳಿವೆ. ಮತ್ತೆ ಕೆಪಿಎಸ್ ಹಾಗೂ ಆಂಗ್ಲ ಮಾಧ್ಯಮ ಶಾಲೆ ಆರಂಭಿಸಿದರೆ, ಭಾಷಾ ಶಿಕ್ಷಕರ ಕೊರತೆ ಎದುರಾಗುತ್ತದೆ. ಅಂತಹ ಪ್ರಯತ್ನಕ್ಕೆ ಮುಂದಾಗುವುದಿಲ್ಲ. ಶೀಘ್ರ ಆಂಗ್ಲ ಮಾಧ್ಯಮ ಶಿಕ್ಷಕರ ನೇಮಕಾತಿ ನಡೆಸುತ್ತೇವೆ ಎಂದರು. ಅಂಗನವಾಡಿ ಕೇಂದ್ರಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯೊಂದಿಗೆ ವಿಲೀನಗೊಳಿಸುತ್ತಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.


ಇಂದು ಹಲವೆಡೆ ನೀರು ವ್ಯತ್ಯಯ



ಮೈಸೂರು, ಸೆ.17–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2ನೇ ಹಂತದ ಬೂಸ್ಟರ್ ಯಂತ್ರಾಗಾರಕ್ಕೆ ವಿದ್ಯುತ್ ಸರಬರಾಜು ಮಾಡುವ ಮೇಟಗಳ್ಳಿ ಸಬ್ ಸ್ಟೇಷನ್‌ನಲ್ಲಿ ಕೆಪಿಟಿಸಿಎಲ್‌ನವರು ತ್ರೈಮಾಸಿಕ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಸೆ.18ರಂದು ಬೆಳಗ್ಗೆ 9ರಿಂದ ಸಂಜೆ 5 ರವರೆಗೆ ನಗರದ ಕೆಲವೆಡೆ ನೀರು ಸರಬರಾಜಿನಲ್ಲಿ ವ್ಯತ್ಯವಾಗಲಿದೆ.

ನೀರು ಸರಬರಾಜಿವಿನಲ್ಲಿ ವ್ಯತ್ಯಯವಾಗುವ ಪ್ರದೇಶಗಳು: ವಾರ್ಡ್ ನಂ.4, 5, 6, 7, ಹೆಚ್.ಎಲ್.ಆರ್. ಇದಕ್ಕೆ ಸಂಬಂಧ ಪಟ್ಟ ಪ್ರದೇಶಗಳಾದ ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಯಾದವಗಿರಿ, ಬನ್ನಿ ಮಂಟಪ ಎ, ಬಿ, ಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಭಾಗಶಃ, ನಜರ್ ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ವಿಶ್ವೇಶ್ವರನಗರ, ಚಾಮುಂಡಿಪುರಂ, ದೇವರಾಜ ಮೊಹಲ್ಲಾ, ಲೂರ್ದ್‌ನಗರ, ಮೀನಾಬಜಾರ್, ವಾರ್ಡ್ ಸಂಖ್ಯೆ 8, 17, 18, 19, 23ರಿಂದ 27ರವರೆಗೆ, 40, 41, 55, 60, 62 ಹಾಗೂ ಇತ್ಯಾದಿ ಪ್ರದೇಶಗಳು.

ಮೈಸೂರಲ್ಲಿ ವಿಜೃಂಭಣೆಯ ವಿಶ್ವಕರ್ಮ ಜಯಂತಿ



ಮೈಸೂರು, ಸೆ.17(ಆರ್‌ಕೆ)–ಮೈಸೂರಿನ ಕಲಾಮಂದಿರದಲ್ಲಿ ವಿಶ್ವಕರ್ಮ ಜಯಂತಿಯನ್ನು ಶನಿವಾರ ವಿಜೃಂಭಣೆಯಿಂದ ಆಚರಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿಶ್ವಕರ್ಮ ಜಯಂತಿ ಉತ್ಸವ ಸಮಿತಿ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಶಾಸಕ ಜಿ.ಟಿ.ದೇವೇಗೌಡರು, ಸೃಷ್ಟಿ, ಸ್ಥಿತಿ ಮತ್ತು ಲಯ ಈ ಮೂರೂ ಸಹ ವಿಶ್ವಕರ್ಮನ ಕಾಯಕವಾಗಿದೆ. ಬ್ರಹ್ಮ ಎಂಬ ಹೆಸರಿನ ಪರಮಾತ್ಮನು ಸುವ್ಯವಸ್ಥಿತ ಜಗತ್ತನ್ನು ಸೃಷ್ಟಿ ಮಾಡಿರುವುದರಿಂದ ಭಗವಂತನಿಗೆ ವಿಶ್ವಕರ್ಮ ಎಂಬ ಹೆಸರಿದೆ ಎಂದರು.

ಮಹಿಮಾನ್ವಿತ ಶಿಲ್ಪಿಗಳು ಪುರಾಣಗಳಲ್ಲಿ ಪಂಚ ಶಿಲ್ಪಗಳನ್ನು ರೂಪಿಸಿದರೆಂಬ ಪ್ರತೀತಿ ಇದೆ. ಕಬ್ಬಿಣ, ಮರಗೆಲಸ, ಕಂಚಿನ ಶಿಲ್ಪವನ್ನು ಮಾಡುವವರಿಗೆ ವಿಶ್ವಕರ್ಮ ಎಂದು ಕರೆಯಲಾಗುತ್ತದೆ. ಧ್ಯಾನ ಸ್ಥಿತಿಯಲ್ಲಿ ರೂಪುಗೊಂಡಿದ್ದು ಭಾವಶಿಲ್ಪವಾಗುತ್ತದೆ. ಅದನ್ನು ವಸ್ತುರೂಪವನ್ನಾಗಿಸಿದಾಗ ಅದು ಕಣ್ಣಿಗೆ ಕಾಣುವ ಶಿಲ್ಪವಾಗುತ್ತದೆ ಎಂದು ಅವರು ತಿಳಿಸಿದರು.

ವಾಲ್ಮೀಕಿ ರಾಮಾಯಣದ ಪ್ರಕಾರ, ವಿಶ್ವಕರ್ಮನು ಸ್ವರ್ಗದಲ್ಲಿ ಬ್ರಹ್ಮದೇವರಿಗಾಗಿ ರತ್ನಖಚಿತ ಪುಷ್ಪಕ ವಿಮಾನವನ್ನು ರಚಿಸಿದ, ಶಿಲ್ಪ ಸಂಹಿತೆಯ 18ನೇ ಅಧ್ಯಾಯದ ಪ್ರಕಾರ ವಿಶ್ವಕರ್ಮನು ಮೊಟ್ಟ ಮೊದಲು ದೂರದರ್ಶಕವನ್ನು ರೂಪಿಸಿದ. ಮುಂದೆ ವಿಜ್ಞಾನಿಗಳು ಅದನ್ನು ಸುಧಾರಿತ ಮಾದರಿಯಲ್ಲಿ ತಯಾರಿಸಿದರು ಎಂಬುದೂ ಸಹ ಪುರಾಣಗಳಲ್ಲಿದೆ ಎಂದ ಜಿಟಿಡಿ, ಪಂಚ ಶಿಲ್ಪಿಗಳಿಗಷ್ಟೇ ವಿಶ್ವಕರ್ಮ ಪೂಜಾ ದಿನವಲ್ಲ. ಪಂಚಶಿಲ್ಪವನ್ನು ಅಂತರ್ಗತ ಮಾಡಿಕೊಂಡವರೆಲ್ಲರೂ ವಿಶ್ವಕರ್ಮರು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎಲ್.ನಾಗೇಂದ್ರ ಮಾತನಾಡಿ, ತಲತಲಾಂತರದಿಂದ ಪಂಚ ಕಸುಬುಗಳನ್ನೇ ಅವಲಂಭಿಸಿಕೊಂಡು ಬಂದಿರುವ ವಿಶ್ವಕರ್ಮ ಸಮುದಾಯದವರ ಮೂಲ ವೃತ್ತಿಯು, ಆಧುನಿಕ ತಂತ್ರಜ್ಞಾನದ ಭರಾಟೆಯಲ್ಲಿ ನಶಿಸಿ ಹೋಗುತ್ತಿದೆ. ಈ ಅಪರೂಪದ ಕಲೆಗಳನ್ನು ಉಳಿಸಿ, ಸಂರಕ್ಷಿಸಬೇಕು ಎಂದರು.

ಸಮಾಜದ ಎಲ್ಲಾ ವರ್ಗದ ಜನರಿಗೂ ವಿಶ್ವಕರ್ಮ ಸಮುದಾಯದವರ ಕಲೆ ಅಗತ್ಯವಿದೆ. ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಬಳಸಿಕೊಂಡು ತಮ್ಮ ವೃತ್ತಿಯಲ್ಲೇ ಪ್ರಗತಿ ಸಾಧಿಸಿ ಎಂದು ಶಾಸಕರು ತಿಳಿಸಿದರು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ. ಸುದರ್ಶನ, ನಗರ ಪಾಲಿಕೆ ಸದಸ್ಯ ರಮೇಶ(ರಮಣಿ), ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ವಿಶ್ವಕರ್ಮ ಸಮುದಾಯದ ಮುಖಂಡರು ಹಾಗೂ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಭಾನುವಾರ 18 ಸೆಪ್ಟೆಂಬರ್ 2022

ಕಾಡಿಗೆ ಹೋಯಿತೆನ್ನಲಾದ ಹುಲಿ ಮಾಲ್ದಾರೆ ಬಳಿ ಮತ್ತೆ ಪ್ರತ್ಯಕ್ಷ

ಕೆಲಸ ಸ್ಥಗಿತಗೊಳಿಸಿ ಮನೆಗೆ ಹಿಂತಿರುಗಿದ ಕಾರ್ಮಿಕರು



ಸಿದ್ದಾಪುರ, ಸೆ.17– ಮಾಲ್ದಾರೆ ಸುತ್ತಮುತ್ತಲ ವ್ಯಾಪ್ತಿಯಲ್ಲಿ ಕಳೆದ ಕೆಲವು ದಿನಗಳಿಂದ ಹುಲಿಯ ಕಾಟ ಹೆಚ್ಚಾಗಿದ್ದು, ಕಾರ್ಮಿಕರು, ಬೆಳೆಗಾರರು, ಶಾಲಾ ವಿದ್ಯಾರ್ಥಿಗಳು ಮತ್ತೆ ಆತಂಕದಲ್ಲಿದ್ದಾರೆ.

ಗುರುವಾರ ಕಾಫಿ ತೋಟದಲ್ಲಿ ಪ್ರತ್ಯಕ್ಷಗೊಂಡಿದ್ದ ಹುಲಿಯನ್ನು ಅರವಳಿಕೆ ನೀಡಿ ಸೆರೆ ಹಿಡಿಯುವ ಪ್ರಯತ್ನ ವಿಫಲವಾದ್ದರಿಂದ ಹುಲಿ ತಪ್ಪಿಸಿಕೊಂಡು ದುಬಾರೆ ಅರಣ್ಯದತ್ತ ಓಡಿ ಹೋಗಿತ್ತು. ಹತ್ತು ಕಿಲೋ ಮೀಟರ್‌ನಷ್ಟು ಸುತ್ತಾಡಿದರೂ ಪತ್ತೆಯಾಗದ ಹಿನ್ನೆಲೆ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದರು. ಹುಲಿ ಕಾಡಿಗೆ ಹೋಯಿತು ಎಂದು ಜನರು ಮತ್ತು ಅರಣ್ಯ ಸಿಬ್ಬಂದಿ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದರು.

ಮಾಲ್ದಾರೆ ಸಮೀಪದ ಘಟದಳ್ಳ ಬಳಿಯ ಖಾಸಗಿ ಕಂಪನಿ ತೋಟದ ಮೂರನೇ ಬ್ಲಾಕ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಹುಲಿ ಮತ್ತೆ ಪ್ರತ್ಯಕ್ಷಗೊಂಡಿದೆ. ತೋಟದ ರೈಟರ್‌ಗೆ ಹುಲಿ ಪ್ರತ್ಯಕ್ಷಗೊಂಡಿರುವ ಮಾಹಿತಿ ತಿಳಿಸಿದ ನಂತರ ಅಲ್ಲಿಂದ ತೆರಳಿ 19ನೇ ಬ್ಲಾಕ್‌ನಲ್ಲಿ ಕೆಲಸ ನಿರ್ವಹಿಸಲು ಮುಂದಾಗಿದ್ದಾರೆ. ಹುಲಿ ಭೀತಿಯಿಂದ ಬಹುತೇಕ ಕಾರ್ಮಿಕರು ಮನೆಗೆ ತೆರಳುವುದಾಗಿ ಹೇಳಿದ ನಂತರ ಎಲ್ಲಾ ಕಾರ್ಮಿಕರಿಗೂ ಮಧ್ಯಾಹ್ನದ ನಂತರ ರಜೆ ನೀಡಿ ಮನೆಗೆ ಕಳುಹಿಸಲಾಯಿತು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿಗಳು ಸ್ಥಳ ಪರಿಶೀಲನೆ ನಡೆಸಿದ ಸಂದರ್ಭ ಯಾವುದೇ ಹೆಜ್ಜೆ ಗುರುತು ಪತ್ತೆಯಾಗಿಲ್ಲ. ಸುಮಾರು 8 ಕಿಲೋ ಮೀಟರ್‌ನಷ್ಟು ಇತರ ಕಾಫಿ ತೋಟಗಳಲ್ಲಿ ಕಾರ್ಯಾಚರಣೆ ನಡೆಸಲಾಯಿತಾದರೂ ಹುಲಿ ಎಲ್ಲೂ ಕಾಣಲಿಲ್ಲ. ಈಗಾಗಲೇ 4 ಕಡೆಗಳಲ್ಲಿ ಮರದ ಮೇಲೆ ಅಟ್ಟಣಿ ನಿರ್ಮಿಸಲಾಗಿದ್ದು, 2 ಬೋನ್ ಹಾಗೂ ಹತ್ತು ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಹುಲಿಯ ಚಲನವಲನ ಪತ್ತೆ ಹಚ್ಚಲು ಹಗಲು ರಾತ್ರಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ವಲಯ ಅರಣ್ಯಾಧಿಕಾರಿ ಅಶೋಕ್ ತಿಳಿಸಿದ್ದಾರೆ. ಕಳೆದ ಒಂದು ವರ್ಷಗಳಿಂದ ನಿರಂತರವಾಗಿ ಹುಲಿ ಕಾಣಿಸಿಕೊಂಡು ತಿಂಗಳಿಗೆ ಹತ್ತಕ್ಕೂ ಹೆಚ್ಚು ಜಾನುವಾರುಗಳನ್ನು ಬಲಿ ತೆಗೆದುಕೊಳ್ಳುತ್ತಿದೆ.

ಹುಲಿ ಸೆರೆ ಹಿಡಿಯಬೇಕೆಂದು ಹಲವು ಬಾರಿ ಮನವಿ ಮಾಡಲಾಗಿದ್ದರೂ ಅರಣ್ಯ ಇಲಾಖೆ ನಿರ್ಲಕ್ಷ್ಯ ತೋರಿದ ಹಿನ್ನೆಲೆ ಇದೀಗ ಹಾಡುಹಗಲಿನಲ್ಲೂ ಹುಲಿ ಕಾಣಿಸಿಕೊಳ್ಳುತ್ತಿದೆ. ಹುಲಿಯ ಅಟ್ಟಹಾಸದಿಂದ ಕಾರ್ಮಿಕರು ಬೆಳೆಗಾರರು ಶಾಲಾ ವಿದ್ಯಾರ್ಥಿಗಳು ಜೀವ ಭಯದಲ್ಲಿ ಓಡಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಗ್ರಾಮಸ್ಥರು ತಿಳಿಸಿದರು. ಮನುಷ್ಯರ ಮೇಲೆ ದಾಳಿ ಮಾಡುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಹುಲಿ ಸೆರೆ ಹಿಡಿಯಬೇಕೆಂದು ಮಾಲ್ದಾರೆ ಸುತ್ತಮುತ್ತಲಿನವರು ಒತ್ತಾಯಿಸಿದ್ದಾರೆ.

ಮಡಿಕೇರಿ, ಗೋಣಿಕೊಪ್ಪದಲ್ಲಿ ಸಾಂಪ್ರದಾಯಿಕ ದಸರಾ

ದಸರಾ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ನಾಗೇಶ್ ಸೂಚನೆ

ಮಡಿಕೇರಿ, ಸೆ.17– ಮಡಿಕೇರಿ ಮತ್ತು ಗೋಣಿಕೊಪ್ಪ ಜನೋತ್ಸವ ದಸರಾಗೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗಲಿದ್ದು, ಸಂಪ್ರದಾಯದಂತೆ ದಸರಾ ಆಚರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಸಿ. ನಾಗೇಶ್ ತಿಳಿಸಿದ್ದಾರೆ.



ನಗರದ ಜಿಪಂ ಸಭಾಂಗಣದಲ್ಲಿ ಮಡಿಕೇರಿ ಮತ್ತು ಗೋಣಿಕೊಪ್ಪ ದಸರಾ ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ಮಾಹಿತಿ ಪಡೆದು ಸಚಿವರು ಮಾತನಾಡಿದರು.

ಈ ಹಿಂದಿನಂತೆ ದಸರಾವನ್ನು ಆಚರಿಸುವಂತಾಗಬೇಕು ಆ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸಬೇಕು. ವಿವಿಧ ಉಪ ಸಮಿತಿಗಳು ಸೇರಿದಂತೆ ಕಾಲ ಕಾಲಕ್ಕೆ ಸಭೆ ಆಯೋಜಿಸಿ, ದಸರಾ ಯಶಸ್ಸಿಗೆ ಶ್ರಮಿಸುವಂತೆ ಅವರು ಸಲಹೆ ಮಾಡಿದರು.

ಶಾಸಕರಾದ ಕೆ.ಜಿ.ಬೋಪಯ್ಯ ಮತ್ತು ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ಮಡಿಕೇರಿ ಮತ್ತು ಗೋಣಿಕೊಪ್ಪ ದಸರಾಗೆ ಸರ್ಕಾರದಿಂದ ಹೆಚ್ಚಿನ ಅನುದಾನ ಬಿಡುಗಡೆಯಾಗಲಿದ್ದು, ದಸರಾವನ್ನು ಸಂಪ್ರದಾಯದಂತೆ ಆಯೋಜಿಸುವಂತಾಗಬೇಕು ಎಂದರು.

ಸಭೆಯ ಆರಂಭದಲ್ಲಿ ಮಾತನಾಡಿದ ನಗರ ಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಅವರು ಕೊಡಗಿನ ನಾಡಹಬ್ಬವಾದ ಮಡಿಕೇರಿ ದಸರಾ ಉತ್ಸವಕ್ಕೆ ಸುಮಾರು 165 ವರ್ಷಗಳ ಇತಿಹಾಸವಿದ್ದು, ಇತ್ತೀಚಿನ ವರ್ಷಗಳಲ್ಲಿ ದಸರಾ ನಾಡಹಬ್ಬವು ಸರ್ಕಾರದ ಅನುದಾನದೊಂದಿಗೆ ಜನೋತ್ಸವವಾಗಿ ಆಚರಿಸಲಾಗುತ್ತಿದೆ ಎಂದರು. ಮಡಿಕೇರಿ ದಸರಾ ಉತ್ಸವದಲ್ಲಿ 4 ಶಕ್ತಿದೇವತೆಗಳ ಕರಗ ಮೆರವಣಿಗೆ ಪ್ರಮುಖವಾಗಿದ್ದು, ಆ ನಿಟ್ಟಿನಲ್ಲಿ ಸೆ.26 ರಂದು 4 ಶಕ್ತಿ ದೇವತೆಗಳ ಕರಗ ಮೆರವಣಿಯೊಂದಿಗೆ ದಸರಾಗೆ ಚಾಲನೆ ದೊರೆಯಲಿದೆ. ಸೆ.27 ಮತ್ತು 28 ರಂದು ಸಾಂಸ್ಕೃತಿಕ ಕಾರ್ಯಕ್ರಮ, ಸೆ.29 ರಂದು ಕ್ರೀಡಾಕೂಟ, ಸೆ.30 ರಂದು ಮಹಿಳಾ ದಸರಾ, ಅ.1 ರಂದು ಯುವ ದಸರಾ, ಅ.2 ರಂದು ಜನಪದ ದಸರಾ, ಅ.3 ರಂದು ಮಕ್ಕಳ ದಸರಾ, ಅ.4 ರಂದು ಕವಿಗೋಷ್ಠಿ ಮತ್ತು ಆಯುಧ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಜೊತೆಗೆ ಈ ಎಲ್ಲಾ ದಿನಗಳಂದು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಅ.5 ರಂದು ವಿಜಯದಶಮಿಯ ರಾತ್ರಿ ದಶಮಂಟಪಗಳ ಶೋಭಾಯಾತ್ರೆಯಲ್ಲಿ 10 ದೇವಾಲಯಗಳಿಂದ ವಿಜಯದ ಸಂದೇಶ ನೀಡುವ ದಶಮಂಟಪಗಳು ಶೋಭಾಯಾತ್ರೆ ನಡೆಯಲಿದೆ. ಅ.6 ರಂದು ಮುಂಜಾನೆ ಸಂಪ್ರದಾಯದಂತೆ ಬನ್ನಿ ಕಡಿಯುವುದರ ಮೂಲಕ ದಸರಾ ಹಬ್ಬಕ್ಕೆ ತೆರೆ ಎಳೆಯಲಾಗುತ್ತದೆ ಎಂದು ಅವರು ವಿವರಿಸಿದರು.

ದಸರಾ ಸಮಿತಿ ಕಾರ್ಯಾಧ್ಯಕ್ಷ ರಮೇಶ್ ಮಾತನಾಡಿ, ದಸರಾದ ಅಂದಾಜು ಪಟ್ಟಿಯ ಖರ್ಚು ವೆಚ್ಚಗಳ ಬಗ್ಗೆ ಮಾಹಿತಿ ನೀಡಿದರು.

ದಸರಾ ಸಂದರ್ಭದಲ್ಲಿ ಅಗತ್ಯ ಪೊಲೀಸ್ ಬಂದೋಬಸ್ತ್ ಮಾಡಬೇಕು. ವಿದ್ಯುತ್ ಮಾರ್ಗ ಸರಿಪಡಿಸಬೇಕು. ಆರೋಗ್ಯ ಇಲಾಖೆಯಿಂದ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು. ಹೀಗೆ ಹಲವು ಕಾರ್ಯಗಳನ್ನು ಕೈಗೊಳ್ಳಬೇಕಿದೆ ಎಂದು ಸಚಿವರ ಗಮನಕ್ಕೆ ತಂದರು.

ಹಾಗೆಯೇ ಗೋಣಿಕೊಪ್ಪ ದಸರಾ ಸಂಬಂಧದಂತೆ ಕಾವೇರಿ ದಸರಾ ಸಮಿತಿ ಅಧ್ಯಕ್ಷ ಬಿ.ಎನ್.ಪ್ರಕಾಶ ಅವರು ಶೋಭಾಯಾತ್ರ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿದರು. ಗೋಣಿಕೊಪ್ಪ ದಸರಾ ಸಮಿತಿಯ ಸಿ.ಕೆ.ಬೋಪಣ್ಣ ಹಲವು ವಿಚಾರಗಳ ಕುರಿತು ಮಾಹಿತಿ ನೀಡಿದರು.

ಉಪ ಪೊಲೀಸ್ ವರಿಷ್ಠಾಧಿಕಾರಿ ಗಜೇಂದ್ರ ಪ್ರಸಾದ್ ಅವರು ದಸರಾ ಆಚರಣೆಗೆ ಎಲ್ಲಾ ರೀತಿಯ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗುವುದು, ವಿಜಯದಶಮಿಯ ರಾತ್ರಿ ದಶಮಂಟಪಗಳ ಶೋಭಾಯಾತ್ರೆಯನ್ನು ಬೇಗ ಆರಂಭಿಸುವಂತಾಗಬೇಕು ಎಂದು ಅವರು ಮನವಿ ಮಾಡಿದರು. ಸುರಕ್ಷೆ ದೃಷ್ಟಿಯಿಂದ ಅಗ್ನಿಶಾಮಕ ಇಲಾಖೆಯಿಂದ ಪ್ರಮಾಣ ಪತ್ರ ಪಡೆಯುವಂತಾಗಬೇಕು ಎಂದರು.

ಜೀವ ವೈವಿಧ್ಯ ಮಂಡಳಿ ರಾಜ್ಯ ಅಧ್ಯಕ್ಷರಾದ ನಾಪಂಡ ರವಿಕಾಳಪ್ಪ, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಜಿ.ಪಂ ಸಿಇಓ ಭಂವರ್ ಸಿಂಗ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ ಇತರರು ಇದ್ದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಸಚಿವರು ಮತ್ತು ಶಾಸಕರು ಈ ಹಿಂದಿನಂತೆ ದಸರಾ ನಡೆಯಲಿದೆ. ಧ್ವನಿವರ್ಧಕ ಬಳಕೆ ಮತ್ತಿತರ ಸಂಬಂಧ ಯಾವುದೇ ಗೊಂದಲ ಇಲ್ಲ ಎಂದು ತಿಳಿಸಿದರು.

ಚೌಡ್ಲು ಗ್ರಾಮದಲ್ಲಿ ಆಟೋ ವರ್ಕ್ಸ್‌ನಿಂದ ಮಾನಸಿಕ ಕಿರುಕುಳ ಆರೋಪ

ದಯಾಮರಣ ಕೋರಿ ರಾಜ್ಯಪಾಲರಿಗೆ ನಿವೃತ್ತ ಕೃಷಿ ಅಧಿಕಾರಿ ಪತ್ರ

ಸೋಮವಾರಪೇಟೆ, ಸೆ.17– ಆಟೋ ವರ್ಕ್ಸ್‌ನಿಂದ ಆಗುತ್ತಿರುವ ಕಿರುಕುಳದಿಂದ ಮನನೊಂದಿರುವ ತಾಲೂಕಿನ ಚೌಡ್ಲು ಗ್ರಾಮದ ಕೃಷಿ ಇಲಾಖೆ ನಿವೃತ್ತ ಅಧಿಕಾರಿ ಹೆಚ್.ಜಿ.ಕುಟ್ಟಪ್ಪ ಅವರು ದಯಾಮರಣ ಕೋರಿ ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ.

ಚೌಡ್ಲು ಗ್ರಾಮದ ಮಂಜುನಾಥ ಆಟೋ ವರ್ಕ್ಸ್‌ನಿಂದ ಕಳೆದ ಐದು ವರ್ಷಗಳಿಂದ ತಮಗೂ ತಮ್ಮ ಪತ್ನಿಗೂ ತೀವ್ರ ಮಾನಸಿಕ ಹಿಂಸೆಯಾಗುತ್ತಿದ್ದು, ಎಲ್ಲಿಯೂ ನ್ಯಾಯ ದೊರಕಿಲ್ಲ ಎಂದು ಕುಟ್ಟಪ್ಪ ಅವರು ಅಳಲು ತೋಡಿಕೊಂಡಿದ್ದಾರೆ. 2011ರಲ್ಲಿ ಕೃಷಿ ಇಲಾಖೆಯಿಂದ ನಿವೃತ್ತಿಯಾದ ಬಳಿಕ ಕುಟ್ಟಪ್ಪ ಅವರು ಚೌಡ್ಲು ಗ್ರಾಮದ ತಮ್ಮ ಸ್ವಂತ ನಿವಾಸದಲ್ಲಿ ನೆಲೆಸಿದ್ದಾರೆ.

ಮನೆಯ ಸಮೀಪದಲ್ಲೇ ಮಂಜುನಾಥ ಆಟೋ ವರ್ಕ್ಸ್ ಎಂಬ ವರ್ಕ್‌ಶಾಪ್ ಇದ್ದು, ತೀವ್ರ ಶಬ್ದ ಮತ್ತು ವಾಯುಮಾಲಿನ್ಯ ಉಂಟಾಗುತ್ತಿದೆ ಎಂದು ಕುಟ್ಟಪ್ಪ ದೂರಿದ್ದಾರೆ. ಇದನ್ನು ಪ್ರಶ್ನಿಸಿದ್ದಕ್ಕೆ ಗ್ಯಾರೇಜ್ ಸಿಬ್ಬಂದಿ ತಮಗೆ ಜೀವ ಬೆದರಿಕೆ ಒಡ್ಡಿದ್ದು, ನೆಮ್ಮದಿಯಿಂದ ಬದುಕಲು ಸಾಧ್ಯವಿಲ್ಲದಂತಾಗಿದೆ ಎಂದು ರಾಜ್ಯಪಾಲರಿಗೆ ಬರೆದಿರುವ ಪತ್ರದಲ್ಲಿ ಆಪಾದಿಸಿದ್ದಾರೆ. ಗ್ಯಾರೇಜ್ ಸಿಬ್ಬಂದಿ ಬೆಳಗ್ಗಿನಿಂದ ತಡರಾತ್ರಿಯವರೆಗೂ ವಿಪರೀತ ಶಬ್ದ ಮಾಡುವುದು, ವಾಹನಗಳನ್ನು ಸ್ಟಾರ್ಟ್ ಮಾಡಿ ಬೇಕೆಂದೇ ರೈಜ್ ಮಾಡುವುದು, ಗ್ಯಾರೇಜ್ ತ್ಯಾಜ್ಯಗಳಿಗೆ ಬೇಕೆಂದೇ ಮನೆಯ ಸಮೀಪ ಬೆಂಕಿ ಹಾಕಿ ಹೊಗೆ ಎಬ್ಬಿಸುವಂತಹ ಕೃತ್ಯಗಳನ್ನು ಮಾಡುತ್ತಿದ್ದಾರೆ. ಇದರ ವಿರುದ್ಧ ಕೊಡಗು ಪೊಲೀಸ್ ವರಿಷ್ಠಾಧಿಕಾರಿಗಳು, ಕೊಡಗು ಜಿಲ್ಲಾಧಿಕಾರಿ, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ, ಮಾಲಿನ್ಯ ನಿಯಂತ್ರಣ ಮಂಡಳಿ, ಚೌಡ್ಲು ಗ್ರಾಮ ಪಂಚಾಯಿತಿ ಮತ್ತು ಆಗಿನ ಉಸ್ತುವಾರಿ ಸಚಿವರಾಗಿದ್ದ ಸಾ.ರಾ. ಮಹೇಶ್ ಅವರಿಗೆ ಲಿಖಿತ ದೂರನ್ನು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಮಂಜುನಾಥ ಗ್ಯಾರೇಜ್, ಭೂ ಪರಿವರ್ತನೆ ಮಾಡದ ಹಿನ್ನೆಲೆಯಲ್ಲಿ ಚೌಡ್ಲು ಪಂಚಾಯಿತಿ ಗ್ಯಾರೇಜ್‌ನ ಲೈಸೆನ್ಸ್ ನವೀಕರಣಗೊಳಿಸುವುದಿಲ್ಲ. ಅಲ್ಲದೆ, ವಾಯು ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಕೂಡ ಸ್ಥಳ ಪರಿಶೀಲನೆ ನಡೆಸಿ ತ್ಯಾಜ್ಯ ಸುಡುವುದರಿಂದ ವಾಯುಮಾಲಿನ್ಯವಾಗಿರುವುದನ್ನು ದೃಢೀಕರಿಸಿ ಗ್ರಾಮ ಪಂಚಾಯಿತಿಗೆ ವರದಿ ನೀಡಿದೆ. ಅಲ್ಲದೆ ಸೋಮವಾರಪೇಟೆ–ಶಾಂತಳ್ಳಿ ರಾಜ್ಯ ಹೆದ್ದಾರಿ 85ರ ಬದಿಯಲ್ಲೇ ಗ್ಯಾರೇಜ್ ಇದ್ದು ರಸ್ತೆ ಬದಿಯಲ್ಲೇ ವಾಹನಗಳನ್ನು ನಿಲ್ಲಿಸಿಕೊಂಡು ವಾಹನಗಳ ಸಂಚಾರಕ್ಕೂ ಅಡ್ಡಿಯುಂಟು ಮಾಡುತ್ತಿದ್ದಾರೆ ಎಂದು ಅವರು ಆಪಾದಿಸಿದ್ದಾರೆ.

ಈ ಎಲ್ಲಾ ಕಾರಣಗಳಿಂದಾಗಿ ಚೌಡ್ಲು ಗ್ರಾಮ ಪಂಚಾಯಿತಿ ಗ್ಯಾರೇಜ್‌ನ್ನು ತೆರವುಗೊಳಿಸಲು ನಿರ್ಣಯ ಕೈಗೊಂಡು, ಗ್ಯಾರೇಜ್ ಸ್ಥಳಾಂತರಿಸಲು 2021ರ ಮಾರ್ಚ್‌ನಲ್ಲಿ ಮೂರು ತಿಂಗಳು ಗಡುವು ನೀಡಿತ್ತು. ಇದರ ವಿರುದ್ಧ ಗ್ಯಾರೇಜ್ ಮಾಲೀಕ ಮನೋಜ್ ಸೋಮವಾರಪೇಟೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಆದರೆ, ನ್ಯಾಯಾಲಯ ಈ ಪ್ರಕರಣ ತಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂದೂ ಸ್ಥಳೀಯ ಪ್ರಾಧಿಕಾರದ ವ್ಯಾಪ್ತಿಯಲ್ಲೇ ಬಗೆಹರಿಸಿಕೊಳ್ಳುವಂತೆ ಸೂಚಿಸಿತ್ತು. ಈ ಸಂದರ್ಭ ಚೌಡ್ಲು ಪಂಚಾಯಿತಿ ಸರ್ವ ಸದಸ್ಯರು ಗ್ಯಾರೇಜ್ ತೆರವಿಗೆ ಮುಂದಾದಾಗ ಇದಕ್ಕೆ ಸೋಮವಾರಪೇಟೆ ತಾಲೂಕು ಕಾರ್ಯನಿರ್ವಹಣಾಧಿಕಾರಿ ಜಯಣ್ಣ ತಡೆಯೊಡ್ಡಿದ್ದಾರೆ ಎಂದು ಕುಟ್ಟಪ್ಪ ದಂಪತಿ ಆರೋಪಿಸಿದ್ದಾರೆ.

ಇಷ್ಟೆಲ್ಲಾ ಆದರೂ ನ್ಯಾಯ ದೊರಕದ ಹಿನ್ನೆಲೆಯಲ್ಲಿ ರಾಜ್ಯಪಾಲರಿಗೆ ಜಿಲ್ಲಾಧಿಕಾರಿ ಮೂಲಕ ತಮಗೆ ದಯಾಮರಣ ನೀಡುವಂತೆ ಕುಟ್ಟಪ್ಪ ದಂಪತಿ ಮನವಿ ಮಾಡಿದ್ದಾರೆ. ಜೀವನಪೂರ್ತಿ ಸರ್ಕಾರದ ಸೇವೆ ಮಾಡಿ ನಿವೃತ್ತಿ ನಂತರ ಇಳಿ ವಯಸ್ಸಿನಲ್ಲಿ ನೆಮ್ಮದಿಯಿಂದ ಬದುಕಲು ಸಾಧ್ಯವಿಲ್ಲದಂತಾಗಿದೆ, ಹಾಗಾಗಿ ತಮಗೆ ದಯಾ ಮರಣ ನೀಡುವಂತೆ ತಹಶೀಲ್ದಾರ್, ಜಿಲ್ಲಾಧಿಕಾರಿ, ತಾಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಚೌಡ್ಲು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಲ್ಲಿ ಸೆ.15ರಂದು ಮನವಿ ಮಾಡಿದ್ದಾರೆ.

ಲಯನ್ಸ್ ಸಂಸ್ಥೆಗೆ 101ರ ಸಂಭ್ರಮ

ಸೇವಾ ಕಾರ್ಯಕ್ರಮ ಹಮ್ಮಿಕೊಳ್ಳಲು ಕರೆ

ವಿರಾಜಪೇಟೆ, ಸೆ.17– ಲಯನ್ಸ್ ಸಂಸ್ಥೆಗೆ 101ನೇ ವರ್ಷದ ಸಂಭ್ರಮ. ಈ ವೇಳೆ ಸಮಾಜ ಸೇವೆಯಂತಹ ಉತ್ತಮ ಕಾರ್ಯಕ್ರಮಗಳನ್ನು ಸದಸ್ಯರು ಹಮ್ಮಿಕೊಳ್ಳುವ ಮೂಲಕ ಸಂಭ್ರಮವನ್ನು ಆಚರಿಸಬೇಕು ಎಂದು ಲಯನ್ಸ್ ಪ್ರಾಂತಿಯ ಅಧ್ಯಕ್ಷ ಸಬ್ಬತ್ ಬೋಪಣ್ಣ ತಿಳಿಸಿದ್ದಾರೆ.



ವಿರಾಜಪೇಟೆ ಕೊಡವ ಸಮಾಜದ ಸಭಾಂಗಣದಲ್ಲಿ ಇಲ್ಲಿನ ಲಯನ್ಸ್ ಕ್ಲಬ್ ವತಿಯಿಂದ ಶಿಕ್ಷಕರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ನಿವೃತ್ತ ಶಿಕ್ಷಕರಿಗೆ ಸನ್ಮಾನ ಹಾಗೂ ಲಯನ್ಸ್ ಪ್ರಾಂತಿಯ ಅಧ್ಯಕ್ಷರ ಭೇಟಿ ಕಾರ್ಯಕ್ರಮದಲ್ಲಿ ಮುಖ್ಯಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಹೆಚ್ಚು ಜನರಿಗೆ ಅನುಕೂಲವಾಗುವಂತ ಸಮಾಜ ಸೇವಾ ಕಾರ್ಯಕ್ರಮಗಳನ್ನು ಕಡಿಮೆ ಖರ್ಚಿನಲ್ಲಿ ಹಮ್ಮಿಕೊಳ್ಳುವಂತೆ ಸಲಹೆ ನೀಡಿದರು.

ಸನ್ಮಾನ ಸ್ವೀಕರಿಸಿದ ನಿವೃತ್ತ ಶಿಕ್ಷಕಿ ನುರೇರ ಶೀಲಾ ಮಾಯಮ್ಮ ಅವರು ಮಾತನಾಡಿ, ಹಿಂದೆ ಶಿಕ್ಷಕರ ಹುದ್ದೆ ಬಹಳ ಕಷ್ಟವಾಗಿದ್ದು ದೂರದ ಶಾಲೆಗಳಿಗೆ ಬಸ್ಸುಗಳಿಲ್ಲದೆ ನಡೆದು ಹೋಗಬೇಕಾಗಿತ್ತು. ಸರ್ಕಾರಿ ಶಾಲೆಯ ಬಡಮಕ್ಕಳು ಒಂದು ದಿನ ಬಂದರೆ ಮರುದಿನ ರಜೆ ಮಾಡುತ್ತಿದ್ದರು. ಮಕ್ಕಳ ಮನವೊಲಿಸಿ ಪಾಠ ಹೇಳಿ ಕೊಡಬೇಕಾಗಿತ್ತು ಎಂದರು.

ಸಭೆಯ ಅಧ್ಯಕ್ಷತೆ ವಹಿಸಿ ಲಯನ್ಸ್ ಕ್ಲಬ್ ಅಧ್ಯಕ್ಷ ಪಿ.ಟಿ.ನರೇಂದ್ರ ಮಾತನಾಡಿದರು. ವೇದಿಕೆಯಲ್ಲಿ ಲಯನ್ ವಲಯ ಅಧ್ಯಕ್ಷ ಎಂ.ಎಂ.ವಿನಯ್, ಸಲಹೆಗಾರ ಕೆಆರ್.ಮೋಹನ್ ರೈ, ಕಾರ್ಯದರ್ಶಿ ಎ.ಎ.ಅಜೀತ್, ಖಜಾಂಚಿ ಬಿ.ಪಿ.ಗಣಪತಿ ಮತ್ತಿತರರು ಉಪಸ್ಥಿತರಿದ್ದರು. ಪಿ.ಟಿ.ನರೇಂದ್ರ ಸ್ವಾಗತಿಸಿದರೆ, ಎ.ಎ.ಅಜೀತ್ ವಂದಿಸಿದರು. ಕಾರ್ಯಕ್ರಮಕ್ಕೆ ಮಡಿಕೇರಿ, ನಾಪೋಕ್ಲು, ಮೂರ್ನಾಡು, ಸೋ.ಪೇಟೆ, ಕುಶಾಲನಗರ, ಪಿ.ಪಟ್ಟಣ, ಗೋಣಿಕೊಪ್ಪ, ಪಾಲಿಬೆಟ್ಟ ಇತರೆಡೆಗಳಿಂದಲು ಭಾಗವಹಿಸಿದ್ದರು.

ಸರ್ಕಾರಿ ಸವಲತ್ತು ಪಡೆದು ವಿಶ್ವಕರ್ಮ ಸಮಾಜ ಸದೃಢವಾಗಲಿ

ಶಾಸಕ ಸಿ.ಪುಟ್ಟರಂಗಶೆಟ್ಟಿ ಸಲಹೆ



ಚಾಮರಾಜನಗರ, ಸೆ.17–ವಿಶ್ವಕರ್ಮ ಸಮಾಜದ ಅಭಿವೃದ್ಧಿಗಾಗಿ ಸರ್ಕಾರ ರಚಿಸಿರುವ ನಿಗಮ, ಮಂಡಳಿಗಳಿಂದ ಸೌಲಭ್ಯ, ಸವಲತ್ತು ಪಡೆದು ಸಮಾಜದ ಜನರು ಆರ್ಥಿಕವಾಗಿ ಸದೃಢರಾಗುವಂತೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಸಲಹೆ ನೀಡಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಪಂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಮ್ಮಿಕೊಂಡಿದ್ದ ಶ್ರೀ ವಿಶ್ವಕರ್ಮ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ವಿಶ್ವಕರ್ಮರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

ಹಿಂದೆ ವಿಶ್ವಕರ್ಮರು ಎಲ್ಲಾ ಉದ್ಯೋಗಗಳನ್ನು ಬಲ್ಲವರಾಗಿದ್ದರು. ಇಡೀ ಮಾನವ ಕುಲಕ್ಕೆ ವಿಶ್ವಕರ್ಮರ ಕಾಯಕ ಅಗತ್ಯ. ಅವರ ಕುಲಕಸುಬನ್ನು ಉಳಿಸಿಕೊಂಡು ಬಂದಿರುವ ಸಮಾಜಕ್ಕೆ ಕೇವಲ ಜಯಂತಿ ಆಚರಿಸಿದರೆ ಸಾಲದು, ನಿಗಮ ಮಂಡಳಿಗಳಿಂದ ದೊರೆಯುವ ಸೌಲಭ್ಯ, ಸವಲತ್ತು ಬಳಸಿಕೊಂಡು ಆರ್ಥಿಕವಾಗಿ ಮುಂದೆ ಬರಬೇಕು. ಅಲ್ಲದೆ ಸಮಾಜದ ಜನರು ಸಂಘಟಿತರಾಗಿ ರಾಜಕೀಯ, ಶೈಕ್ಷಣಿಕವಾಗಿಯೂ ಮುಂದೆ ಬರಬೇಕಿದೆ ಎಂದರು. ಕಾಡಾ ಅಧ್ಯಕ್ಷ ಬಿ.ನಿಜಗುಣರಾಜು ಮಾತನಾಡಿ, ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ವಿಶ್ವಕರ್ಮ ಮಾಡದ ಕೆಲಸವಿಲ್ಲ. ಶಿಲ್ಪ, ಚಿನ್ನ, ಕಬ್ಬಿಣ, ಮರಗೆಲಸ, ಕಮ್ಮಾರ ಇತ್ಯಾದಿ ಕೆಲಸಗಳೊಂದಿಗೆ ಗುರುತಿಸಿಕೊಂಡಿದ್ದಾರೆ. ಸಮಾಜದ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದರ ಸರ್ಕಾರವು ವಿಶ್ವಕರ್ಮರ ಕಸುಬನ್ನು ತಾಂತ್ರಿಕವಾಗಿ ಮತ್ತಷ್ಟು ಅಭಿವೃದ್ಧಿಪಡಿಸಬೇಕಿದೆ ಎಂದರು.

ಮೈಸೂರು ಮಹಾರಾಣಿ ಪಿಯು ಕಾಲೇಜು ಉಪನ್ಯಾಸಕಿ ಸಿ.ತೇಜೋವತಿ ಉಪನ್ಯಾಸ ನೀಡಿದರು. ನಗರಸಭೆ ಅಧ್ಯಕ್ಷೆ ಆಶಾ ನಟರಾಜು ಮಾತನಾಡಿದರು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ಪ್ರವಾಸಿ ಮಂದಿರದಲ್ಲಿ ವಿಶ್ವಕರ್ಮರ ಭಾವಚಿತ್ರದೊಂದಿಗೆ ವಿವಿಧ ಕಲಾತಂಡಗಳೊಡನೆ ಹೊರಟ ಮೆರವಣಿಗೆಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು. ಎಡಿಸಿ ಎಸ್.ಕಾತ್ಯಾಯಿನಿ ದೇವಿ, ಎಎಸ್‌ಪಿ ಸುಂದರ್‌ರಾಜ್, ಜಿಪಂ ಉಪಕಾರ್ಯದರ್ಶಿ ಗೂಡೂರು ಭೀಮಸೇನ, ವಿಶ್ವಕರ್ಮ ನಿಗಮದ ಸದಸ್ಯ ಶ್ರೀನಿವಾಸಮೂರ್ತಿ, ಮಧು, ಸಮಿತಿಯ ಅಧ್ಯಕ್ಷ ಸೋಮಣ್ಣ ಆಚಾರ್, ಮುಖಂಡರಾದ ಅನಂತಕುಮಾರ್ ಉಪಸ್ಥಿತರಿದ್ದರು.

ಚಾಮರಾಜನಗರ ಜಿಲ್ಲೆಯೆಲ್ಲೆಡೆ ಸೇವಾ ಕಾರ್ಯದೊಂದಿಗೆ

ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬ ಆಚರಣೆ



ಚಾಮರಾಜನಗರದಲ್ಲಿ ಸಸಿ ನೆಡುವ ಮೂಲಕ ಮೋದಿಯವರ ಹುಟ್ಟುಹಬ್ಬ ಆಚರಣೆ.



ಮೋದಿಯವರ ಹುಟ್ಟುಹಬ್ಬ ಪ್ರಯುಕ್ತ ಹನೂರಲ್ಲಿ ರಕ್ತ ದಾನ ಶಿಬಿರ ನಡೆಯಿತು.

ಚಾಮರಾಜನಗರ. ಸೆ.17–ಜಿಲ್ಲೆಯೆಲ್ಲೆಡೆ ಪ್ರಧಾನಿ ನರೇಂದ್ರ ಮೋದಿ ಅವರ 72ನೇ ವರ್ಷದ ಹುಟ್ಟುಹಬ್ಬವನ್ನು ಬಿಜೆಪಿ ಕಾರ್ಯಕರ್ತರು ಹಾಗೂ ಅಭಿಮಾನಿಗಳು ವಿವಿಧ ಸೇವಾ ಕಾರ್ಯಗಳೊಂದಿಗೆ ಆಚರಿಸಿದರು.

ಚಾಮರಾಜನಗರದ ಈಶ್ವರಿ ಟ್ರಸ್ಟ್ ಮತ್ತು ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ಮೋದಿಯವರ ಹುಟ್ಟುಹಬ್ಬ ಪ್ರಯುಕ್ತ ರಾಮಸಮುದ್ರದ ಕುಲುಮೆ ರಸ್ತೆಯಲ್ಲಿ ಆಯೋಜಿಸಿದ ಸಾಲು ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೆ ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ಜಿ.ನಿಜಗುಣರಾಜು ಚಾಲನೆ ನೀಡಿ ಮಾತನಾಡಿದರು. ಪ್ರಧಾನ ಮಂತ್ರಿ ನರೇಂದ್ರಮೋದಿ ಅವರು ಕಾರ್ಯರೂಪಕ್ಕೆ ತಂದ ಹಲವಾರು ಜನಪ್ರಿಯ ಕಾರ್ಯಕ್ರಮಗಳು ನಮ್ಮ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಾಯಿತು ಎಂದು ಬಣ್ಣಿಸಿದರು.

ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಹೆಚ್.ಜಿ.ಕುಮರಸ್ವಾಮಿ, ಈಶ್ವರಿ ಟ್ರಸ್ಟ್ ಅಧ್ಯಕ್ಷ ಸಿ.ಎಂ.ವೆಂಕಟೇಶ್ ಮಾತನಾಡಿದರು. ಈ ಸಂದರ್ಭದಲ್ಲಿ ಕೆನರಾ ಬ್ಯಾಂಕ್ ವ್ಯವಸ್ಥಾಪಕ ನಂಜುಂಡಸ್ವಾಮಿ, ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಶಿಕ್ಷಕ ನಿಜಗುಣ, ರೇಣುಕಾ, ಜಯಲಕ್ಷ್ಮಿ, ರಾಧಾ, ಸುಬ್ಬಲಕ್ಷ್ಮಿ, ಲಕ್ಷ್ಮಿ, ಮಹೇಶ್ವರಿ, ಶುಭಾ ಪದ್ಮನಾಭ ಮುಂತಾದವರಿದ್ದರು.

ಮಕ್ಕಳಿಗೆ ಸಿಹಿ ವಿತರಣೆ: ಮೋದಿಯವರ ಹುಟ್ಟುಹಬ್ಬದ ಅಂಗವಾಗಿ ನಗರದ ಸಂತೇಮರಹಳ್ಳಿ ವೃತ್ತದಲ್ಲಿ 19ನೇ ವಾರ್ಡ್ ಸದಸ್ಯ ಶಿವರಾಜ್ ನೇತೃತ್ವದಲ್ಲಿ ಮಕ್ಕಳಿಗೆ ಕುಡಿಯುವ ನೀರಿನ ಬಾಟಲಿ, ಸಿಹಿ ವಿತರಿಸಲಾಯಿತು. ಈ ವೇಳೆ ನಗರಸಭಾ ಸದಸ್ಯ ರಾಘವೇಂದ್ರ, ಚಂದ್ರಶೇಖರ್, ಮಾಜಿ ಅಧ್ಯಕ್ಷ ಮಹದೇವ ನಾಯಕ, ಬಿಜೆಪಿ ಜಿಲ್ಲಾ ಕಾರ್ಯಕಾರಣಿ ಸದಸ್ಯ ನಟರಾಜು, ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ್, ಜಿಲ್ಲಾ ಸಾಮಾಜಿಕ ಜಾಲತಾಣ ಸಂಚಾಲಕ ಚಂದ್ರಶೇಖರ್, ಶ್ರೀಮಹದೇಶ್ವರ ಆಟೋ ಮಾಲೀಕ ಮತ್ತು ಚಾಲಕರ ಸಂಘದ ಅಧ್ಯಕ್ಷ ಮಹೇಶ, ಸೆಂದಿಲ್, ಶ್ರೀನಿವಾಸ, ಚೇತನ್, ಅಭಿನಾಯಕ, ಬಸವರಾಜು, ಚಂದು, ಮಹೇಶ್, ಮಂಜು, ಯೋಗಿ, ಸ್ವಾಮಿ, ಶೇಖರ್ ಇತರರು.

ಹನೂರಲ್ಲಿ ರಕ್ತದಾನ ಶಿಬಿರ: ಹನೂರು ತಾಲೂಕಿನ ರಾಮಾಪುರ ಗ್ರಾಮದ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ಪ್ರಧಾನಿ ಮೋದಿ ಅವರ ಹುಟ್ಟುಹಬ್ಬದ ಅಂಗವಾಗಿ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು. ಶಿಬಿರದಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಡಾ.ದತ್ತೇಶ್ ಕುಮಾರ್ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ಹಿನ್ನೆಲೆ ಬಿಜೆಪಿಯಿಂದ ಇಡೀ ದೇಶಾದ್ಯಂತ ಸೆ.17 ರಿಂದ ಅ.2ರವರೆಗೆ ಸೇವಾ ಪಾಕ್ಷಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಇದೇ ವೇಳೆ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದವರಿಗೆ ಶಾಲು, ಹಾರ ಹಾಕಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ಮಂಜುನಾಥ್, ನವೀನ್ ಓಬಿಸಿ ಮೋರ್ಚಾ ಅಧ್ಯಕ್ಷ ರವಿ, ಮುಖಂಡರಾದ ಶಿವಪ್ಪ ಮಾಸ್ಟರ್, ಅಶ್ವಥ್, ಚಾಂದ್, ನಾಗೇಂದ್ರಪ್ರಭು, ಕೃಷ್ಣಮೂರ್ತಿ, ಶಿವಕುಮಾರ್ ಹಾಗೂ ಕಾಮಗೆರೆ ಹೋಲಿಕ್ರಾಸ್ ಆಸ್ಪತ್ರೆ, ರೆಡ್‌ಕ್ರಾಸ್ ಸಂಸ್ಥೆಯ ವೈದ್ಯರು, ಶುಶ್ರೂಷಕಿಯರು ಹಾಗೂ ಇನ್ನಿತರರಿದ್ದರು.

ಗುಂಡ್ಲುಪೇಟೆ ಬಳಿ 4.41 ಕೋಟಿ ವೆಚ್ಚದಲ್ಲಿ ಘನತ್ಯಾಜ್ಯ ಸಂಸ್ಕರಣಾ, ವಿಲೇವಾರಿ ಘಟಕ ಸ್ಥಾಪನೆ



ಗುಂಡ್ಲುಪೇಟೆ, ಸೆ.17–ಇಲ್ಲಿನ ಪುರಸಭೆಯು ತಾಲೂಕಿನ ಕೂತನೂರು ಗ್ರಾಮದ ಸಮೀಪ 12.28 ಎಕರೆ ಪ್ರದೇಶದಲ್ಲಿ 45 ಟಿಪಿಡಿ ಸಾಮರ್ಥ್ಯದ ಘನತ್ಯಾಜ್ಯ ಸಂಸ್ಕರಣಾ ಹಾಗೂ ವಿಲೇವಾರಿ ಘಟಕ ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಕಾತ್ಯಾಯಿನಿದೇವಿ ತಿಳಿಸಿದರು.

ಪಟ್ಟಣದ ಪುರಸಭಾ ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಬೆಳೆಯುತ್ತಿರುವ ಪಟ್ಟಣದ ನೈರ್ಮಲ್ಯ ಕಾಪಾಡಲು ಗ್ರಾಮದ ಸರ್ವೆ ನಂ.75ರಲ್ಲಿ 6.30 ಎಕರೆ, 77/1ರಲ್ಲಿ 5.25 ಎಕರೆ ಹಾಗೂ 77/1ರಲ್ಲಿ 10 ಗುಂಟೆ ಸೇರಿದಂತೆ ಒಟ್ಟು 12.28 ಎಕರೆ ಪ್ರದೇಶದಲ್ಲಿ 4.41 ಕೋಟಿ ವೆಚ್ಚದಲ್ಲಿ 45 ಟಿಡಿಪಿ ಸಾಮರ್ಥ್ಯದ ಘನತ್ಯಾಜ್ಯ ಸಂಸ್ಕರಣಾ ಮತ್ತು ವಿಲೇವಾರಿ ಘಟಕ ಸ್ಥಾಪಿಸಲು ನಿರ್ಧರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸದ್ಯ ಪಟ್ಟಣದ ವ್ಯಾಪ್ತಿಯಲ್ಲಿ 13 ಟಿಪಿಡಿ ತ್ಯಾಜ್ಯ ಸಂಗ್ರಹಣೆಯಾಗುತ್ತಿದೆ. ಇದನ್ನು ಮುಂದಿನ 20 ವರ್ಷಗಳ ಮುಂದಾಲೋಚನೆಯಿಂದ ವೈಜ್ಞಾನಿಕವಾಗಿ ಘಟಕ ನಿರ್ಮಾಣ ಮಾಡುವುದರಿಂದ ಪರಿಸರಕ್ಕೆ ಯಾವುದೇ ಸಮಸ್ಯೆ ಎದುರಾಗುವುದಿಲ್ಲ ಎಂದು ಪರಿಸರ ಇಲಾಖೆಯ ಅಧಿಕಾರಿಗಳು ವಿವರಿಸಿದರು. ಸಭೆಯಲ್ಲಿ ಪುರಸಭೆ ಮುಖ್ಯಾಧಿಕಾರಿ ಹೇಮಂತಕುಮಾರ್, ಪರಿಸರ ಇಲಾಖೆಯ ಉಮಾಶಂಕರ್, ಅಧಿಕಾರಿಗಳಾದ ಗೋಪಿ, ಮಂಜುನಾಥ್ ಹಾಗೂ ಇತರರಿದ್ದರು.

ಜಿಲ್ಲಾಧಿಕಾರಿಗಳ ನಡೆ ಗ್ರಾಮಗಳ ಕಡೆ ಕಾರ್ಯಕ್ರಮ

ಉಮ್ಮತ್ತೂರಲ್ಲಿ ಜನತೆಯ ಅಹವಾಲು ಆಲಿಸಿದ ಡಿಸಿ

ಚಾಮರಾಜನಗರ, ಸೆ.17–ತಾಲೂಕಿನ ಉಮ್ಮತ್ತೂರಿನಲ್ಲಿ ನಡೆದ ಜಿಲ್ಲಾಧಿಕಾರಿಗಳ ನಡೆ ಗ್ರಾಮಗಳ ಕಡೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಜನರ ಅಹವಾಲು ಆಲಿಸಿದರು.

ಸಂತೇಮರಹಳ್ಳಿ ಹೋಬಳಿಯ ಉಮ್ಮತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿನ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಗ್ರಾಮಸ್ಥರು, ಪೌತಿ ಖಾತೆ ಸಮಸ್ಯೆ, ಬೆಳೆ ವಿಮೆ ಯೋಜನೆ ಅಡೆತಡೆ, ಅಕ್ರಮ ಮದ್ಯ ಮಾರಾಟ, ಆಟದ ಮೈದಾನ–ಮೂಲ ಸೌಕರ್ಯ ಕೊರತೆ, ಗ್ರಾಮದ ಬಡಾವಣೆಗಳಲ್ಲಿ ಅಶುಚಿತ್ವದ ಬಗ್ಗೆ ಗಮನ ಸೆಳೆದರು.

ಗ್ರಾಮದಲ್ಲಿರುವ ಆಸ್ಪತ್ರೆಯಲ್ಲಿ ಸಂಜೆಯವರೆಗೆ ಮಾತ್ರ ವೈದ್ಯರು ಲಭ್ಯವಿರುತ್ತಾರೆ. ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿರುವ ಇಲ್ಲಿಗೆ ಹಗಲು ರಾತ್ರಿ ವೈದ್ಯರ ಸೇವೆ ಲಭಿಸಬೇಕು. ಸಮುದಾಯ ಭವನಗಳು ನಿರ್ಮಾಣ ಮಾಡಬೇಕು. ಪಂಚಾಯಿತಿಯಲ್ಲಿ ಇನ್ನಷ್ಟು ಪೌರ ಕಾರ್ಮಿಕರ ನೇಮಕವಾಗಬೇಕು. ರಸ್ತೆ ಅಗಲೀಕರಣವಾಗಬೇಕು. ಕಲ್ಯಾಣಿ ಬಳಿ ಉದ್ಯಾನವನ ನಿರ್ಮಾಣವಾಗಬೇಕು. ಊರಿನ ಶಾಲೆ ಶತಮಾನ ಪೂರೈಸಿದ್ದು, ಈ ಶಾಲೆಗೆ ಇನ್ನಷ್ಟು ಸೌಕರ್ಯ ಒದಗಿಸಬೇಕು, ಕೆರೆಯಲ್ಲಿ ಹೂಳು ತೆಗೆಸಬೇಕು ಎಂಬಿತ್ಯಾದಿ ಸಮಸ್ಯೆಗಳನ್ನು ಜಿಲ್ಲಾಧಿಕಾರಿಗಳ ಬಳಿ ನಿವೇದಿಸಿಕೊಂಡರು.

ಜನರಿಂದ ಸಮಸ್ಯೆ ಪ್ರಸ್ತಾಪವಾಗುತ್ತಿದ್ದಂತೆಯೇ ಜಿಲ್ಲಾಧಿಕಾರಿ, ಸ್ಥಳದಲ್ಲಿಯೇ ಅಧಿಕಾರಿಗಳಿಗೆ ಸೂಚನೆ ನೀಡಿ ಕ್ರಮ ವಹಿಸುವಂತೆ ತಿಳಿಸಿದರು. ಆರಂಭದಲ್ಲಿ ದೀಪ ಬೆಳಗಿಸುವ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಚಾಲನೆ ನೀಡಿದರು. ಕಂದಾಯ ಇಲಾಖೆಯಿಂದ ಫಲಾನುಭವಿಗಳಿಗೆ ಮಾಸಾಶನ, ವಿಧವಾ ವೇತನ, ಮನಸ್ವಿನಿ ಯೋಜನೆ ಸೇರಿದಂತೆ ಸಾಮಾಜಿಕ ಭದ್ರತಾ ಯೋಜನೆಯಡಿ ವಿವಿಧ ಸವಲತ್ತು ಮಂಜೂರಾತಿ ಪತ್ರಗಳನ್ನು ವಿತರಿಸಲಾಯಿತು.



ಜಿಲ್ಲಾಧಿಕಾರಿ ಗ್ರಾಮ ಸಂಚಾರ

ಚಾಮರಾಜನಗರ: ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಉಮ್ಮತ್ತೂರು ಗ್ರಾಮದ ವಿವಿಧೆಡೆ ಸಂಚರಿಸಿ ಗಮನ ಸೆಳೆದರು. ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರ, ಪಶು ಆಸ್ಪತ್ರೆ, ವಸತಿ ಶಾಲೆ, ದೇವಾಲಯಗಳಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿ, ಬಳಿಕ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಭೇಟಿ ನೀಡಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ನಂತರ ಉಮ್ಮತ್ತೂರು ಕೆರೆ ವೀಕ್ಷಿಸಿ, ಹತ್ತಿರದಲ್ಲಿಯೇ ಇದ್ದ ಮಿಲಿಟರಿ ಕ್ಯಾಂಪ್‌ಗೆ ಜಿಲ್ಲಾಧಿಕಾರಿ ಭೇಟಿ ನೀಡಿದ್ದರು.

ಗ್ರಾಮಕ್ಕೆ ಆಗಮಿಸಿದ ಜಿಲ್ಲಾಧಿಕಾರಿಯವರನ್ನು ಮಕ್ಕಳು ಪೂರ್ಣಕುಂಭದೊಂದಿಗೆ ಸ್ವಾಗತಿಸಿದರು. ಈ ವೇಳೆ ಗ್ರಾಪಂ ಉಪಾಧ್ಯಕ್ಷೆ ಚಂದ್ರಮ್ಮ, ತಹಸೀಲ್ದಾರ್ ಬಸವರಾಜು, ತಾಪಂ ಇಓ ಪೂರ್ಣಿಮಾ, ಪ್ರೊಬೇಷನರಿ ತಹಸೀಲ್ದಾರ್ ರೇಷ್ಮ ಗೌರವ್, ಭೂ ದಾಖಲೆಗಳ ಉಪನಿರ್ದೇಶಕಿ ವಿದ್ಯಾಯಿನಿ ಇನ್ನಿತರರಿದ್ದರು.

ಗಾಂಜಾ ಮಾರಾಟ: ವ್ಯಕ್ತಿ ಬಂಧನ

ಚಾಮರಾಜನಗರ,ಸೆ.17–ಗಾಂಜಾ ಮಾರಾಟಗಾರನನ್ನು ಬಂಧಿಸಿರುವ ಜಿಲ್ಲಾ ಅಬಕಾರಿ ದಳ 50 ಸಾವಿರ ರೂ. ಒಣ ಗಾಂಜಾ ವಶಪಡಿಸಿಕೊಂಡಿದೆ. ಯಳಂದೂರು ತಾಲೂಕು ವೈ.ಕೆ.ಮೋಳೆ ಗ್ರಾಮದ ರಾಮಶೆಟ್ಟಿ ಬಂಧಿತ ಆರೋಪಿ. ಸೆ.14ರಂದು ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಜಿಲ್ಲಾ ಅಬಕಾರಿ ದಳ ಸಿಬ್ಬಂದಿ ಗ್ರಾಮ ಬಳಿ ದಾಳಿ ನಡೆಸಿ 500 ಗ್ರಾಂ ಒಣ ಗಾಂಜಾ, ದ್ವಿಚಕ್ರ ವಾಹನ ಸಮೇತ ಆರೋಪಿಯನ್ನು ಬಂಧಿಸಲಾಗಿದೆ. ಸದ್ಯ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮೈಸೂರು ವಿಭಾಗದ ಅಬಕಾರಿ ಜಂಟಿ ಆಯುಕ್ತ ವಿಜಯ್ ಕುಮಾರ್, ಚಾ.ನಗರ ಜಿಲ್ಲಾ ಅಬಕಾರಿ ಉಪ ಆಯುಕ್ತ ಆರ್.ನಾಗಶಯನ ಮಾರ್ಗದರ್ಶನದಲ್ಲಿ ಚಾ.ನಗರ ಉಪವಿಭಾಗದ ಅಬಕಾರಿ ಉಪ ಅಧೀಕ್ಷಕ ಮೋಹನ್ ಕುಮಾರ್ ನೇತೃತ್ವದಲ್ಲಿ ಅಬಕಾರಿ ನಿರೀಕ್ಷಕ ಸಿ.ಎಂ.ಮಹದೇವ ಸಿಬ್ಬಂದಿ ಕಾರ್ಯಾಚರಣೆ ಕೈಗೊಂಡಿದ್ದರು.





ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ಚಿಕ್ಕಾಟಿ ಗ್ರಾಮದ ಗೆಜ್ಜಗಾರಶೆಟ್ಟರ ಜನಾಂಗದ ಬೆಟ್ಟದ ತಾಯಿ ದೇವಸ್ಥಾನದ ಕಟ್ಟಡ ಅಭಿವೃದ್ಧಿಗೆ ಕಾಂಗ್ರೆಸ್ ಯುವ ಮುಖಂಡ ಹೆಚ್.ಎಸ್.ಗಣೇಶ್ ಪ್ರಸಾದ್ ಧನಸಹಾಯ ಮಾಡಿದರು. ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ಮುನಿರಾಜು, ಕಬ್ಬಹಳ್ಳಿ ಮಹೇಶ್ ಹಾಗೂ ಗ್ರಾಮಸ್ಥರಿದ್ದರು.

ಒಂದನೇ ಪುಟದಿಂದ

ಪ್ರಧಾನಿ ಮೋದಿ ಸಂತಸದ ಸ್ವಾಗತ

5 ಹೆಣ್ಣು ಹಾಗೂ 3 ಗಂಡು ಚೀತಾಗಳನ್ನು ವಿಶೇಷವಾಗಿ ಮಾರ್ಪಡಿಸಿರುವ ಬೋಯಿಂಗ್ ಜೆಟ್ ವಿಮಾನದಲ್ಲಿ ಕರೆತರಲಾಗಿದೆ. ನಮೀಬಿಯಾದಿಂದ ಮಧ್ಯಪ್ರದೇಶದ ಗ್ವಾಲಿಯರ್ ವಾಯುನೆಲೆಗೆ ಸುಮಾರು 10 ಗಂಟೆಗಳ ಪ್ರಯಾಣ ಪೂರೈಸಿದ ಜೆಟ್ ವಿಮಾನದಲ್ಲಿ ಮರದ ಪೆಟ್ಟಿಗೆಗಳಲ್ಲಿ ಕರೆತರಲಾದ ಚೀತಾಗಳನ್ನು ಕುನೊ ರಾಷ್ಟ್ರೀಯ ಉದ್ಯಾನವನಕ್ಕೆ ಕೊಂಡೊಯ್ಯಲಾಯಿತು. ಚಿನೂಕ್ ಮತ್ತು ಎಂಐ ಕೆಟಗರಿ 2 ಹೆಲಿಕಾಪ್ಟರ್‌ಗಳಲ್ಲಿ 165 ಕಿಮೀ ದೂರದ ಶಿಯೋಪುರ್ ಜಿಲ್ಲೆ ಪಾಲ್ಪುರ್ ಗ್ರಾಮಕ್ಕೆ ಕರೆತಂದು, ಅಲ್ಲಿಂದ ರಸ್ತೆಯ ಮೂಲಕ ಕುನೊ ರಾಷ್ಟ್ರೀಯ ಉದ್ಯಾನವನಕ್ಕೆ(ಕೆಎನ್‌ಪಿ) ಕರೆತಂದದ್ದು ವಿಶೇಷ. ಇದಕ್ಕಾಗಿ ಭಾರೀ ಮಳೆ ನಡುವೆಯೂ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ರಾಷ್ಟ್ರೀಯ ಉದ್ಯಾನದಲ್ಲಿ ತಮ್ಮ ಜನ್ಮದಿನ ಆಚರಿಸಿಕೊಂಡ ಪ್ರಧಾನಿ ಮೋದಿ, ಇಂದು ಬೆಳಗ್ಗೆ 10.45ರ ವೇಳೆಯಲ್ಲಿ ಉದ್ಯಾನದ ಕ್ವಾರಂಟೈನ್ ಆವರಣಕ್ಕೆ ಚೀತಾಗಳನ್ನು ಬಿಡುಗಡೆ ಮಾಡಿ, ಅವುಗಳ ಓಡಾಟವನ್ನು ತಮ್ಮ ಕ್ಯಾಮರಾದಲ್ಲಿ ಸೆರೆಹಿಡಿದು ಸಂಭ್ರಮಿಸಿದರು. ಕುನೋ ಪಾರ್ಕ್‌ನಲ್ಲಿ ಚೀತಾಗಳಿಗೆ ವಿಶೇಷ ಆರೈಕೆಗೆ ವ್ಯವಸ್ಥೆ ಮಾಡಲಾಗಿದ್ದು, ಸುಮಾರು 3 ತಿಂಗಳ ಕಾಲ ತೀವ್ರ ನಿಗಾದಲ್ಲಿಡಲಾಗುವುದು. ಇಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳುವುದನ್ನು ಖಚಿತಪಡಿಸಿಕೊಂಡ ಬಳಿಕ ಉದ್ಯಾನಕ್ಕೆ ಮುಕ್ತವಾಗಿ ಬಿಡಲಾಗುತ್ತದೆ. ಭಾರತದ ವನ್ಯಜೀವಿ ರಕ್ಷಣೆಯಲ್ಲಿ ಇದು ಸರ್ಕಾರದ ಹೊಸ ಪ್ರಯತ್ನವಾಗಿದೆ. ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ಅಂತರಖಂಡ ಪ್ರಾಣಿ ವಿನಿಮಯ ಯೋಜನೆ ಮಹತ್ವ ಪಡೆದುಕೊಂಡಿದೆ. ಮಾಂಸಾಹಾರಿ ವನ್ಯಜೀವಿಗಳನ್ನು ಹೀಗೆ ಸ್ಥಳಾಂತರ ಮಾಡಿರುವುದು ವಿಶ್ವದ ಮೊದಲ ದೊಡ್ಡ ಯೋಜನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೇಶದಲ್ಲಿ ಮತ್ತೆ ಚೀತಾ ಯುಗಾರಂಭ!

ಆಗಮನದೊಂದಿಗೆ ಭಾರತದ ಪ್ರಕೃತಿ ಪ್ರೀತಿಯ ಪ್ರಜ್ಞೆ ಜಾಗೃತಗೊಂಡಿದೆ. 1952ರಲ್ಲಿ ದೇಶದಲ್ಲಿ ಚೀತಾಗಳು ಅಳಿವಿನಂಚಿನಲ್ಲಿವೆ ಎಂದು ಘೋಷಿಸಿದ್ದು ದುರದೃಷ್ಟಕರ. ಅಲ್ಲದೆ ಏಳು ದಶಕಗಳಿಂದ ಅವುಗಳ ಸಂತತಿ ಭಾರತದಲ್ಲಿ ಬೆಳೆಸುವ ನಿಟ್ಟಿನಲ್ಲಿ ಯಾವುದೇ ಅರ್ಥಪೂರ್ಣ ಪ್ರಯತ್ನ ನಡೆದಿಲ್ಲ. ಆದರೆ ನಾವು ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸುತ್ತಿರುವಾಗ ಚೀತಾಗಳಿಗೆ ಪುನರ್ವಸತಿ ಕಲ್ಪಿಸುತ್ತಿದ್ದು ದೇಶಕ್ಕೆ ನವಶಕ್ತಿ ಸಿಕ್ಕಂತಾಗಿದೆ ಎಂದು ಅಭಿಪ್ರಾಯಿಸಿದರು. ಅಂತರರಾಷ್ಟ್ರೀಯ ಮಾರ್ಗಸೂಚಿಗಳನ್ನು ಅನುಸರಿಸಿ, ಈ ಚೀತಾಗಳನ್ನು ನೆಲೆಗೊಳಿಸಲು ಭಾರತ ಅತ್ಯುತ್ತಮ ಪ್ರಯತ್ನ ಮಾಡುತ್ತಿದ್ದು ಇದನ್ನು ವಿಫಲವಾಗಲು ಬಿಡಬಾರದು. ಕುನೋ ರಾಷ್ಟ್ರೀಯ ಉದ್ಯಾನವನದಲ್ಲಿ ಈ ಚೀತಾಗಳನ್ನು ನೋಡಲು ಜನರು ಕೆಲವು ತಿಂಗಳು ಕಾಯಬೇಕು. ಚೀತಾಗಳು ಈ ಪ್ರದೇಶದ ಬಗ್ಗೆ ಅರಿವಿಲ್ಲದ ಅತಿಥಿಗಳಾಗಿದ್ದು ಒಗ್ಗಲು ಸಮಯ ನೀಡಬೇಕು. ಪ್ರಕೃತಿ, ಪರಿಸರ, ಪ್ರಾಣಿ, ಪಕ್ಷಿಗಳು ದೇಶದ ಸುಸ್ಥಿರತೆ ಹಾಗೂ ಭದ್ರತೆ ಮಾತ್ರವಲ್ಲ ಇವು ನಮ್ಮ ಸಂವೇದನೆ ಹಾಗೂ ಆಧ್ಯಾತ್ಮಿಕತೆಯ ಆಧಾರ. ಆರ್ಥಿಕತೆ ಮತ್ತು ಪರಿಸರ ವಿಜ್ಞಾನ ಸಂಘರ್ಷದ ಕ್ಷೇತ್ರಗಳಲ್ಲ ಎಂಬ ಸಂದೇಶವನ್ನು ಭಾರತ ಜಗತ್ತಿಗೆ ಸಾರುತ್ತಿದೆ ಎಂದು ತಿಳಿಸಿದರು.

ಸೆ.26ರಿಂದ ಅ.9ರವರೆಗೆ ದಸರಾ ರಜೆ

ಅನ್ವಯ ಹಾಗೂ ಎಲ್ಲಾ ಬಿಇಓಗಳ ಅಭಿಪ್ರಾಯದ ಮೇರೆಗೆ ಅ.2ರಂದು ಮಹಾತ್ಮ ಗಾಂಧಿ ಜಯಂತಿ ಮತ್ತು ಅ.9ರಂದು ಶಾಲೆಗಳಲ್ಲಿ ವಾಲ್ಮೀಕಿ ಜಯಂತಿ ಆಚರಿಸುವ ಷರತ್ತಿಗೊಳಪಟ್ಟು ದಸರಾ ರಜೆಯನ್ನು ನೀಡಲಾಗಿದೆ ಎಂದು ತಿಳಿಸಿದ್ದಾರೆ. ಅಂತೆಯೇ ಇಚ್ಛೆಯುಳ್ಳ ಶಾಲೆ/ ಆಡಳಿತ ಮಂಡಳಿಯವರು ನಿಗಧಿತ ಮಾರ್ಗಸೂಚಿಯಂತೆ ಅ.3ರಿಂದ ಅ.16ರವರೆಗೆ ದಸರಾ ರಜಾ ಅವಧಿಯನ್ನು ಬಳಸಿಕೊಳ್ಳಲು ಆಯಾಯ ವಲಯ ಬಿಇಓಗಳ ಅನುಮತಿ ಪಡೆಯುವುದು ಕಡ್ಡಾಯ ಮಾಡಲಾಗಿದೆ ಎಂದು ಸುತ್ತೋಲೆಯಲ್ಲಿ ಉಲ್ಲೇಖಿಸಿದ್ಧಾರೆ.

ಮನೆಗೆ ನುಗ್ಗಿ ಚಿನ್ನಾಭರಣ ದರೋಡೆ

ಪತಿ ಶಂಭುಸ್ವಾಮಿ ಶಾಲೆಗೆ ತೆರಳಿದ್ದರು. ಬೆಳಗ್ಗೆ 8.40ರಲ್ಲಿ ಪಾರ್ಸಲ್ ಕೊಡುವ ನೆಪದಲ್ಲಿ ಬಂದ ಅಪರಿಚಿತರಿಬ್ಬರು ಮನೆಯ ಕಾಲಿಂಗ್‌ಬೆಲ್ ಒತ್ತಿದ್ದಾರೆ. ಬಾಗಿಲು ತೆಗೆದ ದಾಕ್ಷಾಯಿಣಿ ಅವರನ್ನು ಇಬ್ಬರೂ ಮನೆಯೊಳಗೆ ತಳ್ಳಿಕೊಂಡು ನುಗ್ಗಿ ಸೋಫಾ ಮೇಲೆ ಕೈ ಕಾಲು ಕಟ್ಟಿಹಾಕಿ, ಬಾಯಿಗೆ ಪ್ಲಾಸ್ಟರ್ ಅಂಟಿಸಿ, ಮೈ ಮೇಲಿದ್ದ ಮಾಂಗಲ್ಯ ಸರ, ಬಳೆ, ಉಂಗುರ, ಕಿವಿಯೋಲೆ ಕಸಿದಿದ್ದಾರೆ. ಅಲ್ಲದೇ ಬೀರುನಲ್ಲಿಟ್ಟಿದ್ದ ಮತ್ತೊಂದು ಜೊತೆ ಕೈಬಳೆ, ನೆಕ್ಲೆಸ್ ಸೇರಿದಂತೆ 200 ಗ್ರಾಂ ಚಿನ್ನ ಕಳ್ಳತನ ಮಾಡಿ ಮನೆಯಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾದ ಹಾರ್ಡ್‌ಡಿಸ್ಕ್‌ನೊಂದಿಗೆ ಪರಾರಿಯಾಗಿದ್ದಾರೆ.

ಸುದ್ದಿಗಾರರಿಗೆ ಮಾಹಿತಿ ನೀಡಿದ ದ್ರಾಕ್ಷಾಯಿಣಿ, ನಾನು ಆನ್‌ಲೈನ್‌ನಲ್ಲಿ ವಸ್ತುವೊಂದನ್ನು ಬುಕ್ ಮಾಡಿದ್ದೆ. ಬೈಕ್‌ನಲ್ಲಿ ಬಂದ ಮೂವರು ಪಾರ್ಸಲ್ ಎಂದು ಕೂಗಿ ಕಾಲಿಂಗ್ ಬೆಲ್ ಒತ್ತಿದರು. ನಾನು ಪಾರ್ಸಲ್ ತೆಗೆದುಕೊಳ್ಳಲು ಬಾಗಿಲು ತೆಗೆದೆ. ಆ ವೇಳೆ ನನ್ನನ್ನು ತಳ್ಳಿಕೊಂಡು ಮನೆಯೊಳಗೆ ನುಗ್ಗಿ ನನ್ನ ಬಾಯಿ ಮುಚ್ಚಿ ಕೈ, ಕಾಲು ಕಟ್ಟಿದರು. ಈ ವೇಳೆ ಕೂಗಿಕೊಂಡರೆ ರೇಪ್ ಹಾಗೂ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು. ನಂತರ ನನ್ನ ಮೈ ಮೇಲಿನ ಒಡವೆ, ಮಾಂಗಲ್ಯಸರ, ಬೀರುವಿ ನಲ್ಲಿದ್ದ ಚಿನ್ನಾಭರಣವನ್ನು ಕದ್ದು ಪರಾರಿಯಾದರು. ಮೂರು ಮಂದಿಯೂ ಕನ್ನಡ, ತಮಿಳು, ಹಿಂದಿಯಲ್ಲಿ ಮಾತನಾಡುತ್ತಿದ್ದರು ಎಂದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂಜನಗೂಡು ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ಶಿವನಂಜಶೆಟ್ಟಿ, ಎಎಸ್‌ಐ ಚೇತನ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು. ಬಳಿಕ ಬೆರಳಚ್ಚು ತಜ್ಞರು, ಶ್ವಾನದಳದವರನ್ನು ಕರೆಸಿ ಪರೀಶೀಲನೆಗೊಳಪಡಿಸಿ ಹೆಚ್ಚಿನ ತನಿಖೆ ಮುಂದುವರೆಸಿದ್ದಾರೆ. ಈ ಸಂಬಂಧ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮೋದಿಯವರೇ ಪ್ರಧಾನಿಯಾಗಿರಬೇಕು

ಭವಿಷ್ಯ ಹಾಸು ಹೊಕ್ಕಾಗಿ ಬೆಳೆಯುತ್ತಿದೆ. ವಿಶ್ವದಲ್ಲೇ ಅತ್ಯಂತ ಪ್ರಧಾನವಾಗಿ ಎದ್ದು ಕಾಣುವ ವ್ಯಕ್ತಿತ್ವ ಮೋದಿಯವರದ್ದಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ದೇಶದ ಪ್ರಧಾನಿಯಾಗಿರುವ ಮೋದಿ ಜನ್ಮದಿನವನ್ನು ಇಂದು ಆಚರಿಸುತ್ತಿದ್ದೇವೆ. ಮೈಸೂರಿನ ಪರಂಪರೆಯಲ್ಲಿ ದೇಶ, ರಾಜ್ಯಕ್ಕೆ ದುಡಿದವರ ಜನ್ಮದಿನವನ್ನು ಆಚರಿಸಿ, ಅವರಿಗೆ ಶುಭ ಹಾರೈಸುವ ಸಂಪ್ರದಾಯವಿದೆ. ಎರಡು ತಿಂಗಳ ಹಿಂದೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮಕ್ಕೆ ಮೋದಿ ಅವರು ಮೈಸೂರಿಗೆ ಬಂದಿದ್ದರು. ಆ ವೇಳೆ ಚಾಮುಂಡಿಬೆಟ್ಟಕ್ಕೆ ಹೋಗಿ ದೇವಿಯ ಆಶೀರ್ವಾದ ಪಡೆದಿದ್ದರು. ದೇಶಕ್ಕೆ ಒಳ್ಳೆಯದಾಗಲಿ ಎಂಬುದೇ ನಮ್ಮ ಆಶಯ. ದೇಶದಲ್ಲಿರುವ ಎಲ್ಲಾ ಸಮಸ್ಯೆಗಳ ಪರಿಹಾರ ಮಾಡಲು ಸಾಧ್ಯವಿಲ್ಲದೇ ಇದ್ದರೂ, ಪರಿಹಾರ ಮಾಡುವ ನಿಟ್ಟಿನಲ್ಲಿ ಮೋದಿ ಹೆಜ್ಜೆ ಇಟ್ಟಿದ್ದಾರೆ. ಆ ಸಮಸ್ಯೆ ಈಡೇರುವವರೆಗೂ ಅವರು ಪ್ರಧಾನಿಯಾಗಿ ಮುಂದುವರೆಯಲಿ ಎಂದು ಆಶಿಸುತ್ತೇನೆ. ದೇಶದ ಬಗ್ಗೆ ಚಿಂತನೆ ಮಾಡುವ ಶಕ್ತಿಯನ್ನು ಇನ್ನಷ್ಟು ಸಮಯ ಅವರಿಗೆ ನೀಡಲಿ ಎಂದು ತಾಯಿ ಚಾಮುಂಡೇಶ್ವರಿಯಲ್ಲಿ ಪ್ರಾರ್ಥಿಸುತ್ತೇನೆ. ಅವರ ಮಾತೃಶ್ರೀ ಅವರಿಗೆ 100 ವರ್ಷ ಸಂದಿದೆ, ಮೋದಿ ಅವರೂ 100 ವರ್ಷ ನಮ್ಮೊಂದಿಗೆ ಇರಲಿ ಎಂಬುದೇ ಆಗಿದೆ ಎಂದು ಆಶಿಸಿದರು.

ಮಂಡ್ಯ ಈ ಹಿಂದೆ ಮೈಸೂರಿನ ಒಂದು ಭಾಗವಾಗಿತ್ತು: ಒಂದು ಕಾಲದಲ್ಲಿ ನಾವೆಲ್ಲಾ ಮೈಸೂರಿನವರೇ ಆಗಿದ್ದೆವು. ಈ ಹಿಂದೆ ಮಂಡ್ಯ ಮೈಸೂರಿನ ಒಂದು ಭಾಗವಾಗಿತ್ತು. ಆ ನಂತರ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಮಂಡ್ಯ ಪ್ರತ್ಯೇಕ ಜಿಲ್ಲೆಯಾಯಿತು. ಮಂಡ್ಯ ಜನರನ್ನು ಮೈಸೂರಿನ ಜನ ಚೆನ್ನಾಗಿ ನೋಡಿಕೊಂಡಿದ್ದಾರೆ. ಇದು ಹಳೆ ತಲೆಮಾರಿನ ಜನರಿಗೆ ತಿಳಿದಿದೆ ಎಂದರು.

ಮೈಸೂರಿನ ಒಡನಾಟ: ನನ್ನ ಹಾಗೂ ಮೈಸೂರಿನ ಸಂಬಂಧ ತುಂಬಾ ಹಳೆಯದು. 1942ರಲ್ಲಿ, ಆಗಿದ್ದ ಮೈಸೂರು ಟ್ರಸ್ಟ್ ಬೋರ್ಡ್‌ನವರು ನಮ್ಮ ತಂದೆಗೆ ಪತ್ರ ಬರೆದು, ನಿವೇಶನ ಪಡೆಯುವಂತೆ ಮನವಿ ಮಾಡಿದ್ದರು. ಆ ನಿವೇಶನ ನಮ್ಮ ತಂದೆಯ ನಂತರ ನನ್ನ ಹೆಸರಿಗೆ ಬಂದು, ನಾನೀಗ ನನ್ನ ಮಗಳಿಗೆ ನೀಡಿದ್ದೇನೆ ಎಂದು ಹೇಳಿದರು.


ಇದೇ ವೇಳೆ ಕನ್ನಡ ಮತ್ತು ತೆಲುಗು ಖ್ಯಾತ ನಟಿ ರೂಪಿಕ ಮಾತನಾಡಿ, ಹುಟ್ಟುಹಬ್ಬ ಎಂದರೆ ಕೇಕ್ ಕಟ್ ಮಾಡಿ ಆಚರಿಸುವುದನ್ನು ಎಲ್ಲೆಡೆ ಕಾಣುತ್ತೇವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಯನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಗೆ ತಲುಪಿಸುತ್ತಿರುವ ವಿನೂತನವಾದ ಕಾರ್ಯಕ್ರಮವನ್ನು ಆಯೋಜಿಸಿರುವುದು ನನಗೆ ತುಂಬಾ ಖುಷಿ ತಂದಿದೆ. 'ತಾಯಿಯ ಗರ್ಭದಿಂದ ಭೂ ಗರ್ಭದವರೆಗೆ' ಶೀರ್ಷಿಕೆಗೆ ತಕ್ಕಂತೆ ಇಂದು ಎಲ್ಲಾ ಗರ್ಭಿಣಿಯರಿಗೆ ಉಡಿ ತುಂಬಿದ್ದು, ಮಕ್ಕಳಿಗೆ ಅನ್ನಪ್ರಾಶನ ಮಾಡಿದ್ದು ಕಾರ್ಯಕ್ರಮಕ್ಕೆ ಮತ್ತಷ್ಟು ಮೆರಗು ತಂದಿದೆ ಎಂದು ತಿಳಿಸಿದರು.

ಸಂಸದ ಪ್ರತಾಪ್ ಸಿಂಹ ಮಾತನಾಡಿ, ಶಾಸಕ ಎಸ್.ಎ.ರಾಮದಾಸ್ ಅವರು ಉತ್ತಮ ಸೇವಾ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸವಲತ್ತುಗಳನ್ನು ಅರ್ಹರಿಗೆ ತಲುಪಿಸುವ ಕೆಲಸದಲ್ಲಿ ನಿರತರಾಗಿರುವುದು ಶ್ಲಾಘನೀಯ. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ದೂರದೃಷ್ಟಿ ಎಂಥದ್ದು ಎಂದು ಎಲ್ಲರಿಗೂ ತಿಳಿದಿದೆ. ನಾವು ಬದುಕಿದ್ರೆ ಇವರ ಥರಾ ಬದುಕಬೇಕು ಅನ್ನಿಸುತ್ತದೆ. ನನಗೆ ಕರ್ನಾಟಕದಲ್ಲಿ ಅತ್ಯಂತ ಪ್ರಿಯವಾದ ರಾಜಕಾರಣಿ ಅಂದರೆ ಅದು ಎಸ್.ಎಂ.ಕೃಷ್ಣ ಅವರೇ ಆಗಿದ್ದಾರೆ. ಅವರ ಕಾಲಾವಧಿಯಲ್ಲಿ ಒಳ್ಳೊಳ್ಳೆ ಕಾರ್ಯಕ್ರಮಗಳನ್ನು ಜಾರಿಗೆ ತಂದರು ಎಂದು ತಿಳಿಸಿದರು. ಮೈಸೂರು–ಬೆಂಗಳೂರು ನಡುವೆ ಎಸ್.ಎಂ.ಕೃಷ್ಣ ಅವರು ನಾಲ್ಕು ಪಥದ ರಸ್ತೆಯನ್ನು ಕೊಡುಗೆಯಾಗಿ ನೀಡಿದ್ದರು. ಮೈಸೂರು ರಿಂಗ್ ರಸ್ತೆ, ಮೈಸೂರಿಗೆ ಇನ್ಫೋಸಿಸ್ ತಂದರು. ರಾಜ್ಯ ಹಾಗೂ ದೇಶದ ದುರಂತ ಎಂದರೆ, ವಾಜಪೇಯಿ ಹಾಗೂ ಕೃಷ್ಣ ಅವರ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಲಿಲ್ಲ. 2004ರಲ್ಲಿ ಅಂದೇ ಅಧಿಕಾರಕ್ಕೆ ಬಂದಿದ್ದರೆ ಇಂದು ದೇಶ ಹಾಗೂ ರಾಜ್ಯ ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿ ಅಗಾಧ ಸಾಧನೆ ಮಾಡಬಹುದಿತ್ತು. ದೇಶದ ಪ್ರಧಾನಿ ಅವರ ಯೋಜನೆಯನ್ನು, ರಾಜ್ಯ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡುತ್ತಿರುವ ರಾಮದಾಸ್ ಅವರ ಕಾರ್ಯ ಪ್ರಶಂಸನೀಯ ಎಂದು ಹೇಳಿದರು.

ಮೆರವಣಿಗೆ: ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬೆಂಗಳೂರಿಂದ ಆಗಮಿಸಿದ ಮಾಜಿ ಸಿಎಂ ಎಸ್.ಎಂ.ಕೃಷ್ಣ ಅವರನ್ನು ಚಾಮುಂಡಿಪುರಂ ವೃತ್ತದಿಂದ ವಿದ್ಯಾರಣ್ಯಪುರಂನಲ್ಲಿನ ರಾಮಲಿಂಗೇಶ್ವರ ಉದ್ಯಾನದವರೆಗೆ ತೆರೆದ ಜೀಪ್‌ನಲ್ಲಿ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು. ಮೆರವಣಿಗೆಯಲ್ಲಿ ತಮಟೆ, ಡೋಲು, ನಗಾರಿಯೊಟ್ಟಿಗೆ ಕಳಸ ಹೊತ್ತ ಮಹಿಳೆಯರು ಪೂರ್ಣಕುಂಭ ಸ್ವಾಗತ ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಮೇಯರ್ ಶಿವಕುಮಾರ್, ಉಪಮೇಯರ್ ಡಾ.ರೂಪ, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಪಾಲಿಕೆ ಸದಸ್ಯರಾದ ಮಾ.ವಿ.ರಾಮಪ್ರಸಾದ್, ಬಿ.ವಿ.ಮಂಜುನಾಥ್, ವಡಿವೇಲು, ಪ್ರಧಾನ ಕಾರ್ಯದರ್ಶಿಗಳಾದ ನಾಗೇಂದ್ರ ಕುಮಾರ್, ಓಂ ಶ್ರೀನಿವಾಸ್, ಮಾಜಿ ಕಾರ್ಯಾಧ್ಯಕ್ಷ ಶಿವಲಿಂಗಯ್ಯ ಇನ್ನಿತರರು ಉಪಸ್ಥಿತರಿದ್ದರು.

ಮೋದಿ ಉತ್ಸವ ಕಾರ್ಯಕ್ರಮಕ್ಕೆ ಎಸ್.ಎಂ.ಕೃಷ್ಣ ಚಾಲನೆ ನೀಡಿದ್ದು ಅರ್ಥಪೂರ್ಣ

ಶಾಸಕ ರಾಮದಾಸರ ಸಂತಸ



ಮೈಸೂರು, ಸೆ.17(ಎಂಟಿವೈ)– ದೇಶವನ್ನು ಅಭಿವೃದ್ಧಿಯತ್ತ ಮುನ್ನಡೆಸುತ್ತಿರುವ ಧೀಮಂತ ನಾಯಕ ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಕಾರ್ಯಕ್ರಮವನ್ನು ನಾಡುಕಂಡ ಅಪರೂಪದ ರಾಜಕಾರಣಿ ಎಸ್.ಎಂ.ಕೃಷ್ಣ ಉದ್ಘಾಟಿಸಿರುವುದು ಸಂತೋಷವನ್ನುಂಟು ಮಾಡಿದೆ ಎಂದು ಶಾಸಕ ಎಸ್.ಎ. ರಾಮದಾಸ್ ತಿಳಿಸಿದ್ದಾರೆ.

ಮೋದಿ ಜನ್ಮದಿನದ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಯ ಸೌಲಭ್ಯ ಅರ್ಹ ನಾಗರಿಕರಿಗೆ ದೊರೆಯಬೇಕು. 9 ದಿನಗಳ ಕಾಲ ವಿವಿಧ ಸೇವಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇಂದು ಪೋಷಣ್ ಅಭಿಯಾನದಡಿ ಅನ್ನ ಪ್ರಾಶನ, ಸೀಮಂತ, ಸಮುದಾಯ ಆರೋಗ್ಯ ಕಾರ್ಯಕ್ರಮ ನಡೆಸಲಾಗಿದೆ. ಜನರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಾರ್ಯಕ್ರಮಗಳ ಮಾಹಿತಿಯನ್ನು ನೀಡುವುದರೊಂದಿಗೆ ಅವರಿಗೆ ಯೋಜನೆಗಳನ್ನು ತಲುಪಿಸುವುದು ನಮ್ಮ ಗುರಿಯಾಗಿದೆ ಎಂದರು.

ಕಳೆದೆರಡು ವರ್ಷಗಳಿಂದ ಮೋದಿ ಯುಗ ಉತ್ಸವ ಆಚರಿಸುತ್ತಿದ್ದೇವೆ. ಈ ರಾಜ್ಯ ಕಂಡಂತಹ ಅಪರೂಪದ ರಾಜಕಾರಣಿಯನ್ನು ನೋಡಬೇಕೆಂಬ ಹಂಬಲವನ್ನು ಜನರು ವ್ಯಕ್ತಪಡಿಸಿದ್ದರಿಂದ ಎಸ್.ಎಂ.ಕೃಷ್ಣ ಅವರನ್ನು ತೆರೆದ ಜೀಪಿನಲ್ಲಿ ಕರೆತಂದಿದ್ದೇವೆ. 'ಅಮೃತ್ ಕಾಲ್ ಸೇ ಶತಮಾನ್ ತಕ್' ಹೆಸರಲ್ಲಿ ಆಯೋಜಿಸಿರುವ ಕಾರ್ಯಕ್ರಮದ ಮೂಲಕ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಆಹ್ವಾನಿಸಿ, ಅರ್ಹರಿಗೆ ಸವಲತ್ತು ಕಲ್ಪಿಸಲಾಗುವುದು ಎಂದು ತಿಳಿಸಿದರು.

ವಿಶ್ವದಲ್ಲಿ ಭಾರತ ಐಟಿ ಕ್ಷೇತ್ರದಲ್ಲಿ ತನ್ನದೇ ಆದ ದಾಖಲೆ ಮಾಡಿದ್ದರೆ ಅದಕ್ಕೆ ಎಸ್.ಎಂ.ಕೃಷ್ಣರು ಹಾಕಿಕೊಟ್ಟ ಮಾರ್ಗವೇ ಕಾರಣ. ಅವರು ಕೊಡುಗೆ ನೀಡಿದ 'ಬಯೋ ಟೆಕ್ನಾಲಜಿ' ವಿಶ್ವಕ್ಕೆ ಮಾದರಿಯಾಗಿದೆ. ಕೈಗಾರಿಕಾ ನೀತಿ ರೂಪಿಸಿ, ಬೆಂಗಳೂರನ್ನು ಬ್ರಾಂಡ್ ಮಾಡಿದರು. ಡಾ. ನಂಜುಂಡಪ್ಪ ಸಮಿತಿ ರಚಿಸಿ ಹೈದರಾಬಾದ್–ಕರ್ನಾಟಕ ಅಭಿವೃದ್ಧಿಗೆ ಎಸ್.ಎಂ.ಕೃಷ್ಣರು ಮುನ್ನುಡಿ ಬರೆದರು. ಅಲ್ಲದೆ ಮಹಿಳಾ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದರು ಎಂದರು.

ವಸ್ತು ಪ್ರದರ್ಶನ: ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸೌಲಭ್ಯಗಳ ಕುರಿತ ಕಿರು ವಸ್ತು ಪ್ರದರ್ಶನವನ್ನು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಉದ್ಘಾಟಿಸಿದರು. ಇಪ್ಪತ್ತಕ್ಕೂ ಹೆಚ್ಚಿನ ಮಳಿಗೆಗಳಲ್ಲಿ ವಿವಿಧ ಇಲಾಖೆಗಳು ತಮ್ಮ ಯೋಜನೆಗಳ ಕುರಿತು ಮಾಹಿತಿ ನೀಡಿದವು.

ರಕ್ತದಾನ ಶಿಬಿರಕ್ಕೆ ಚಾಲನೆ: ತೇರಾಪಂತ್ ಬಳಗದಿಂದ ಬೃಹತ್ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ನೂರಕ್ಕೂ ಹೆಚ್ಚು ಮಂದಿ ರಕ್ತದಾನ ಮಾಡಿದರು.

50 ಸಾವಿರಕ್ಕೂ ಹೆಚ್ಚು ಮಂದಿಗೆ ಸವಲತ್ತು ವಿತರಣೆ ಗುರಿ: ಮೋದಿ ಯುಗ ಉತ್ಸವ ಕಾರ್ಯಕ್ರಮದಲ್ಲಿ ಬೀದಿಬದಿ ವ್ಯಾಪಾರಿಗಳಿಗೆ ಐಡಿ ಕಾರ್ಡ್, ವೆಂಡಿಂಗ್ ಕಾರ್ಡ್, ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆ, ಸ್ವಸಹಾಯ ಸಂಘಗಳಿಗಾಗಿ ನಡೆದ ತರಬೇತಿ ಶಿಬಿರ, ಸ್ವ ಉದ್ಯೋಗ ಕಾರ್ಯಕ್ರಮದಡಿ ವೈಯುಕ್ತಿಕ ಉದ್ದಿಮೆಗೆ ಅನುದಾನ ಬಿಡುಗಡೆ, ಎಸ್‌ಇಪಿ ಅಡಿಯಲ್ಲಿ ಗುಂಪು ಉದ್ದಿಮೆಗಾಗಿ ಮಹಿಳಾ ಸ್ವಸಹಾಯ ಸಂಸ್ಥೆಗಳಿಗೆ ಅನುದಾನ, ದೀನ್ ದಯಾಳ್ ಅಂತ್ಯೋದಯ– ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಸಾಮಾಜಿಕ ಮತ್ತು ಸಾಂಸ್ಥಿಕ ಉಪ ಘಟಕದಡಿ ಸ್ವಸಹಾಯ ಸಂಘಗಳಿಗೆ ನೀಡುವ ಸುತ್ತುನಿಧಿ ಬಿಡುಗಡೆ, ಪ್ರಧಾನಮಂತ್ರಿ ಸ್ವಾನಿಧಿ ಮಂಜೂರಾತಿ ಪತ್ರ, ಡಿಜಿಟಲ್ ವಹಿವಾಟು ಪ್ರಶಂಸನಾ ಪತ್ರ, ಬೀದಿ ಬದಿ ವ್ಯಾಪಾರಿಗಳಿಗೆ ಆತ್ಮ ನಿರ್ಭರ್ ನಿಧಿ , ಡೇ ನಲ್ಮ್ ಯೋಜನೆಯ ಫಲಾನುಭವಿಗಳಿಗೆ ಮಂಜೂರಾತಿ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಸಂಪೂರ್ಣ ಮೋದಿ ಯುಗ ಉತ್ಸವದಲ್ಲಿ 50 ಸಾವಿರಕ್ಕೂ ಹೆಚ್ಚು ಮಂದಿಗೆ ವಿವಿಧ ಸೌಲಭ್ಯ ತಲುಪಿಸುವ ಗುರಿ ಹೊಂದಲಾಗಿದೆ ಎಂದರು.

ರಾಮದಾಸ್ ಆಡಳಿತ ಯಂತ್ರ ಜಾಗೃತಗೊಳಿಸುತ್ತಿದ್ದರು: ಎಸ್.ಎಂ.ಕೃಷ್ಣ

ಒಂದು ಕಾಲದಲ್ಲಿ ನಾನು ಹಾಗೂ ಎಸ್.ಎ.ರಾಮದಾಸ್ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ನಿಂತು ಪರಸ್ಪರ ಬಾಣ ಬಿಡುತ್ತಿದ್ದೆವು.ಯಾವುದೇ ವಿಚಾರದ ಆಳ, ಅಗಲವನ್ನು ಚೆನ್ನಾಗಿ ಬಲ್ಲವರಾಗಿದ್ದ ರಾಮದಾಸ್ ಸದನದಲ್ಲಿ ಮಾತನಾಡುತ್ತಾರೆ ಎಂದರೆ ನಾನು ಹಾಗೂ ಅಧಿಕಾರಿ ವರ್ಗ ಚುರುಕಾಗುತ್ತಿದ್ದೆವು. ಅವರ ಬತ್ತಳಿಕೆಯಲ್ಲಿ ಯಾವ ಹೊಸ ಬಾಣ ಬರುತ್ತದೋ ಎಂಬ ಆತಂಕ ಅಧಿಕಾರಿ ವರ್ಗದಲ್ಲಿರುತ್ತಿತ್ತು. ಅವರು ಆಡಳಿತ ಪಕ್ಷವನ್ನು ಜಾಗೃತಗೊಳಿಸುತ್ತಿದ್ದರು. ಆಗ ಯುವಕರಾಗಿದ್ದ ರಾಮದಾಸ್ ಅವರು ಸರ್ಕಾರವನ್ನು ಪ್ರಶ್ನಿಸುವ ರೀತಿ ಎಲ್ಲರನ್ನೂ ಆಕರ್ಷಿಸುತ್ತಿತ್ತು. ಹಳೇ ಪರಿಚಯವಾದ ಹಿನ್ನೆಲೆಯಲ್ಲಿ ನನ್ನ ಮೇಲಿನ ವಿಶೇಷವಾದ ಅಭಿಮಾನದಿಂದ ಮೋದಿ ಯುಗ ಉತ್ಸವ ಉದ್ಘಾಟನೆಗೆ ಆಹ್ವಾನಿಸಿದ್ದಾರೆ. ಉತ್ತಮ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ ಎಂದು ಪ್ರಶಂಸಿಸಿದರು.

ಸಂಸದ ಪ್ರತಾಪ ಸಿಂಹ ಕ್ರಿಯಾಶೀಲ ಸಂಸದ. ಈ ಹಿಂದೆ ಅವರ ಬರವಣಿಗೆಗೆ ಮಾರು ಹೋಗಿದ್ದೆ. ಇಂದು ಅವರ ಮಾತಿಗೆ ಮಾರುಹೋದೆ ಎಂದು ಅಭಿಪ್ರಾಯಪಟ್ಟರು.



ಮೈಸೂರು ಜಿಲ್ಲಾ ಪತ್ರಿಕಾ ವಿತರಕರ ಸಂಘದ ವತಿಯಿಂದ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ದಂಪತಿಯನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಮೈಸೂರು ನಗರ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಬಿ.ಸುರೇಶ್, ಉಪಾಧ್ಯಕ್ಷ ಜೆ.ನಾಗೇಶ್ ಮೂರ್ತಿ, ಕಾರ್ಯದರ್ಶಿ ಎನ್.ಕೆ.ಸುಂದರ್, ಖಜಾಂಚಿ ಜೆ.ಲೋಕೇಶ್, ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್, ಸಿ.ಕೆ.ಮಹೇಂದ್ರ, ಎಂ.ಆರ್.ಸತ್ಯನಾರಾಯಣ, ಧರ್ಮಾಪುರ ನಾರಾಯಣ್, ಸಿ.ಎಂ.ಕಿರಣ್‌ಕುಮಾರ್, ಮೂಗೂರು ನಂಜುಂಡಸ್ವಾಮಿ ಇನ್ನಿತರರನ್ನು ಕಾಣಬಹುದು.

ಗುಂಡಿ ಬಿದ್ದ ರಸ್ತೆಗಳಿಗೆ 'ಬಿಜೆಪಿ ಜನಸ್ಪಂದನ' ರಸ್ತೆ ನಾಮಕರಣ!



ಮೈಸೂರು, ಸೆ.17(ಆರ್‌ಕೆಬಿ)– ಮೋದಿ ಜನ್ಮದಿನದ ಅಂಗವಾಗಿ ನಗರದ ಗುಂಡಿ ಬಿದ್ದಿರುವ ರಸ್ತೆಗಳಿಗೆ, 'ಬಿಜೆಪಿ ಜನಸ್ಪಂದನ' ರಸ್ತೆ ಎಂದು ನಾಮಕರಣ ಮಾಡುವ ಮೂಲಕ, ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ನಾರಾಯಣ ಶಾಸ್ತ್ರಿ ರಸ್ತೆಯ ಸಿದ್ದಪ್ಪ ವೃತ್ತದ ಬಳಿ ವಿನೂತನವಾಗಿ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ರಸ್ತೆಗಳು ಗುಂಡಿ ಬಿದ್ದು ವರ್ಷಗಳೇ ಕಳೆದಿವೆ. ಗುಂಡಿಗಳ ನಗರವಾಗಿ ಮಾರ್ಪಟ್ಟಿದ್ದು, ಆತಂಕಕಾರಿ ವಿಚಾರವಾಗಿದೆ. ಹೀಗಿದ್ದರೂ ರಸ್ತೆಗಳ ದುರಸ್ತಿಗೆ ನಗರ ಪಾಲಿಕೆ ಮುಂದಾಗಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ,

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ಹಿಂದೆ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಮೈಸೂರು ನಗರದ ರಸ್ತೆಗಳನ್ನು ಸಿಂಗಾಪುರದ ರೀತಿ ರಸ್ತೆಗಳನ್ನಾಗಿ ಮಾಡುವೆ ಎಂದು ಆಶ್ವಾಸನೆ ನೀಡಿದ್ದರು. ಆದರೆ ಇಂದು ಮೈಸೂರನ್ನು ಸಿಂಗಾಪುರವನ್ನಾಗಿ ಮಾಡುವುದಿರಲಿ, ಮಂಗಾಪುರವಾಗಿ ಮಾಡದೇ ಇದ್ದರೆ ಸಾಕು ಎಂದು ಕಿಡಿಕಾರಿದರು.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮೈಸೂರು ನಗರದಲ್ಲಿನ ರಸ್ತೆಗಳಿಗೆ ಹೆಚ್ಚು ಅನುದಾನ ನೀಡಿ, ಮೈಸೂರು ನಗರವನ್ನು ಸುಂದರಗೊಳಿಸಿದ್ದರು. ಆದರೆ ಇಂದು ಬಿಜೆಪಿ ನೇತೃತ್ವದ ಸರಕಾರ ಮೂರೂವರೆ ವರ್ಷಗಳ ಆಡಳಿತದಲ್ಲಿ ಮೈಸೂರು ನಗರದ ರಸ್ತೆಗಳು ಸಂಪೂರ್ಣ ಹದಗೆಟ್ಟಿವೆ. ಹಲವಾರು ಅಪಘಾತಗಳು ಸಂಭವಿಸಿವೆ ಬಿಜೆಪಿಗೆ ಮತ ನೀಡಿದ ಮತದಾರ ಈಗ ಪರಿತಪಿಸುವಂತಾಗಿದೆ ಎಂದು ದೂರಿದರು.

ದಸರಾ ಮಹೋತ್ಸವದ ಸಂದರ್ಭದಲ್ಲಿ ರಸ್ತೆಗಳು ಹದಗೆಟ್ಟಿರುವುದು ಹಾಗೂ ಅದನ್ನು ಸರಿಪಡಿಸದೇ ಇರುವುದು ತೀವ್ರ ಖಂಡನೀಯ. ದೇಶ–ವಿದೇಶದಿಂದ ಪ್ರವಾಸಿಗರು ಮೈಸೂರಿಗೆ ಬರುತ್ತಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಮೈಸೂರಿನ ಘನತೆಗೆ ಕುಂದು ಉಂಟಾಗುವ ಸಂದರ್ಭ ಬಂದೊದಗಿದೆ. ಅಲ್ಲದೇ ರಾಷ್ಟ್ರಪತಿಗಳು ಕೂಡ ಈ ಬಾರಿಯ ದಸರಾ ಕಾರ್ಯಕ್ರಮಕ್ಕೆ ಆಗಮಿಸುತ್ತಿದ್ದಾರೆ, ಮೈಸೂರು ನಗರದಲ್ಲಿ ಉತ್ತಮ ರಸ್ತೆಗಳನ್ನು ನಿರ್ಮಿಸಿ ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ರಾಜ್ಯ ಅತೀ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಜಿಲ್ಲಾಧ್ಯಕ್ಷರಾದ ಟಿ.ನಾಗಭೂಷಣ್, ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷರಾದ ಎನ್.ಆರ್.ನಾಗೇಶ್, ಜಿಲ್ಲಾ ಉಪ್ಪಾರರ ಸಂಘದ ಅಧ್ಯಕ್ಷರಾದ ಯೋಗೇಶ್ ಉಪ್ಪಾರ್, ಮುಖಂಡರಾದ ಮಹೇಂದ್ರ ಕಾಗಿನೆಲೆ ಮತ್ತಿತರರು ಪಾಲ್ಗೊಂಡಿದ್ದರು.

ಪಿಎಸ್‌ಐ ಹಗರಣ ಸಂಬಂಧ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆಡಿಯೋ ದಾಖಲೆ ಬಿಡುಗಡೆ



ಮೈಸೂರು, ಸೆ.17(ಆರ್‌ಕೆಬಿ)– ಪಿಎಸ್‌ಐ ಹಗರಣದಲ್ಲಿ ಮೈಸೂರಿನ ಎನ್.ಆರ್. ಸಂಚಾರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಪಿಎಸ್‌ಐ ಒಬ್ಬರು ಭಾಗಿಯಾಗಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಇಂದಿಲ್ಲಿ ದಾಖಲೆ ಬಿಡುಗಡೆ ಮಾಡಿದರು.

ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಧ್ಯವರ್ತಿ ಪಿಎಸ್‌ಐ ಮತ್ತು ಪಿಎಸ್‌ಐ ಆಕಾಂಕ್ಷಿ ನಡುವೆ ನಡೆದಿದೆ ಎನ್ನಲಾದ ಮೊಬೈಲ್ ಸಂಭಾಷಣೆಯ ಆಡಿಯೋವನ್ನು ಲಕ್ಷ್ಮಣ್ ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಿದರು.

ಪಿಎಸ್‌ಐ ಹುದ್ದೆಗೆ ಸಂಬಂಧಿಸಿದಂತೆ ನಿಗದಿಯಾಗಿರುವ ಲಂಚದ ಮೊತ್ತದ ಬಗ್ಗೆ ಚರ್ಚೆ ನಡೆಸಿರುವ ಆಘಾತಕಾರಿ ಅಂಶ ಈ ಆಡಿಯೋ ಮೂಲಕ ಬೆಳಕಿಗೆ ಬಂದಿದೆ ಎಂದು ಲಕ್ಷ್ಮಣ್ ತಿಳಿಸಿದರು. ಇದರೊಂದಿಗೆ ಪಿಎಸ್‌ಐ ಆಕಾಂಕ್ಷಿ, ವ್ಯಕ್ತಿಯೊಬ್ಬರಿಗೆ ಹತ್ತು ಬಾರಿ ಆರ್‌ಟಿಜಿಎಸ್ ಮೂಲಕ ಲಂಚದ ಹಣ ಸಂದಾಯ ಮಾಡಿರುವ ದಾಖಲೆಯ ಪ್ರತಿಯನ್ನು ಸಹ ಲಕ್ಷ್ಮಣ್ ಮಾಧ್ಯಮಗಳ ಮುಂದೆ ಪ್ರದರ್ಶಿಸಿದರು.

ಬಿಜೆಪಿ ಸರ್ಕಾರ ಭ್ರಷ್ಟಾಚಾರದ ಪರಮಾವಧಿ ತಲುಪಿದೆ. ಕಳೆದ ಮೂರು ವರ್ಷಗಳಿಂದ ಹೊಸದಾಗಿ ನೇಮಕಗೊಂಡ ಹುದ್ದೆಗಳಲ್ಲಿ ಯಾವುದೇ ಪಾರದರ್ಶಕತೆ ನಡೆದಿಲ್ಲ, ಆಯ್ಕೆಯಾಗಿರುವ ಎಲ್ಲರೂ ಕೋಟ್ಯಾಂತರ ರೂ. ಲಂಚವನ್ನು ನೀಡಿಯೆ ಬಂದಿದ್ದಾರೆ ಎಂದು ಬಿಜೆಪಿ ಆಡಳಿತದ ವಿರುದ್ಧ ಕಿಡಿಕಾರಿದರು.

ಪಿಎಸ್‌ಐ ಹಗರಣದಲ್ಲಿ ಬಿಜೆಪಿ ಸರ್ಕಾರದ ಎಂಟು ಸಚಿವರು ಭಾಗಿಯಾಗಿದ್ದು, ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನಗಳು ನಡೆದಿವೆ. ಸಚಿವ ಅಶ್ವತ್ಥ ನಾರಾಯಣ ಕೆಲವು ಅಭ್ಯರ್ಥಿಗಳಿಂದ ತಲಾ 80 ಲಕ್ಷ ರೂ. ಲಂಚ ಪಡೆದಿರುವ ಬಗ್ಗೆ ಪತ್ರಿಕೆಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾದರೂ ತನಿಖೆ ನಡೆಸದ ಸರ್ಕಾರದ ವಿರುದ್ಧ ಲಕ್ಷ್ಮಣ್ ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ ಈ ಆರೋಪಗಳ ಬಗ್ಗೆ ರಾಜ್ಯದ ಜನರಿಗೆ ಸತ್ಯ ತಿಳಿಸುವ ಕೆಲಸ ಮಾಡುವಂತೆ ಒತ್ತಾಯಿಸಿದರು. ಒಕ್ಕಲಿಗರ ಸಮುದಾಯದ ನಾಯಕ ಡಿ.ಕೆ.ಶಿವಕುಮಾರ್ ಅವರ ಏಳಿಗೆಯನ್ನು ಸಹಿಸದ ಬಿಜೆಪಿಯವರು ಅವರಿಗೆ ಪದೇ ಪದೆ ಕಿರುಕುಳ ನೀಡುತ್ತಿದ್ದು, ಇದನ್ನು ಇನ್ನೂ ಒಕ್ಕಲಿಗ ಸಮುದಾಯದ ಮುಖಂಡರು ಅರ್ಥ ಮಾಡಿಕೊಂಡಿಲ್ಲದಿರುವ ಬಗ್ಗೆ ಲಕ್ಷ್ಮಣ್ ಬೇಸರ ವ್ಯಕ್ತಪಡಿಸಿದರು. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪರನ್ನು ಮುಂದೆ ಬಿಟ್ಟು, ಹಿಂದಿನಿಂದ ಅವರನ್ನು ಕಟ್ಟಿ ಹಾಕುವ ಕೆಲಸ ಮಾಡುವ ಮೂಲಕ ಬಿಜೆಪಿ ವೀರಶೈವ ಲಿಂಗಾಯಿತರ ಬಗ್ಗೆ ಹೇಗೆ ನಡೆದುಕೊಳ್ಳುತ್ತಿದೆ ಎಂಬುದನ್ನು ಲಿಂಗಾಯಿತರು ಅರ್ಥ ಮಾಡಿಕೊಳ್ಳದಿರುವುದು ವಿಪರ್ಯಾಸ ಎಂದರು.

ಪ್ರಧಾನಿ ಮೋದಿ ಜನ್ಮದಿನದ ಹಿನ್ನೆಲೆಯಲ್ಲಿ ಅ.2ರ ಗಾಂಧಿ ಜಯಂತಿವರೆಗೆ ಆರೋಗ್ಯ ಕರ್ನಾಟಕ ಅಭಿಯಾನ

● ಆರೋಗ್ಯ ಸಚಿವ ಡಾ. ಸುಧಾಕರ್ ಚಾಲನೆ ● ಈ ಅವಧಿಯಲ್ಲಿ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತ ತಪಾಸಣೆ



ಬೆಂಗಳೂರು, ಸೆ.17(ಕೆಎಂಶಿ)– ಪ್ರಧಾನಿ ನರೇಂದ್ರ ಮೋದಿಯವರ ಜನ್ಮದಿನದ ಅಂಗವಾಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ವತಿಯಿಂದ ಗಾಂಧಿ ಜಯಂತಿಯವರೆಗೆ ನಡೆಯಲಿರುವ ಆರೋಗ್ಯ ಕರ್ನಾಟಕ ಅಭಿಯಾನಕ್ಕೆ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಚಾಲನೆ ನೀಡಿದರು.

ಬಿಎಂಸಿಆರ್‌ಐನಲ್ಲಿ ನಡೆದ ಕಾರ್ಯಕ್ರಮದಲ್ಲಿ ರಕ್ತದಾನ ಅಮೃತ ಮಹೋತ್ಸವ, ಪ್ರಧಾನಮಂತ್ರಿ ಟಿಬಿ ಮುಕ್ತ ಭಾರತ ಅಭಿಯಾನದ ಜೊತೆಗೆ, ಆರೋಗ್ಯ ಕರ್ನಾಟಕ ಅಭಿಯಾನಕ್ಕೆ ಸಚಿವರು ಚಾಲನೆ ನೀಡಿದರು.

ಪ್ರಧಾನಿ ನರೇಂದ್ರ ಮೋದಿಯವರ ಜನ್ಮದಿನ, ಮಹಾತ್ಮ ಗಾಂಧೀಜಿ ಜಯಂತಿ, ದೀನ್ ದಯಾಳ್ ಉಪಾಧ್ಯಾಯರ ಜಯಂತಿಯನ್ನು ಪರಿಗಣಿಸಿ, ಸೆಪ್ಟೆಂಬರ್ 17 ರಿಂದ ಅಕ್ಟೋಬರ್ 2ರವರೆಗೆ 15 ದಿನಗಳ ಕಾಲ ಅಭಿಯಾನ ಮಾಡಲಾಗುತ್ತಿದೆ.

ಅರಿವಿನ ಕೊರತೆಯಿಂದಾಗಿ ಜನರಿಗೆ ರೋಗ ಇರುವುದೇ ಗೊತ್ತಾಗುವುದಿಲ್ಲ. ಮಧುಮೇಹ ಅತಿಯಾದ ನಂತರವೇ ಅವರಿಗೆ ಆ ರೋಗ ಇದೆ ಎಂದು ತಿಳಿಯುತ್ತದೆ. ಇದರ ಬದಲು ನಿಯಮಿತವಾಗಿ ತಪಾಸಣೆ ಮಾಡಿಸಿದರೆ ಸಮಸ್ಯೆ ಉಂಟಾಗುವುದಿಲ್ಲ. ಈ ಉದ್ದೇಶವನ್ನು ಅಭಿಯಾನ ಹೊಂದಿದೆ ಎಂದರು.

ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಎಲ್ಲ ಬಗೆಯ ತಪಾಸಣೆ ಉಚಿತವಾಗಿದೆ. ಪ್ರತಿ ವರ್ಷವೂ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕೆಂಬ ಭಾವನೆ ಜನರಲ್ಲಿ ಬರಬೇಕು.

ಮಧುಮೇಹ, ರಕ್ತದೊತ್ತಡ, ಕ್ಯಾನ್ಸರ್ ಸೇರಿದಂತೆ ಅಸಾಂಕ್ರಾಮಿಕ ಕಾಯಿಲೆಗಳು ಎಷ್ಟು ಜನರಿಗೆ ಇದೆ ಎಂಬುದನ್ನು ಅಭಿಯಾನದಲ್ಲಿ ಪತ್ತೆ ಮಾಡಬೇಕಿದೆ. ಈ ಮೂಲಕ ಜನರ ಜೀವನ ವಿಧಾನದಲ್ಲಿ ಬದಲಾವಣೆ ತಂದು ಅವರ ಆರೋಗ್ಯ ವೃದ್ಧಿಗೆ ಶ್ರಮಿಸಬೇಕಿದೆ ಎಂದರು.

ರೋಗಿಗಳು ಬರುತ್ತಾರೆ, ಅವರಿಗೆ ಚಿಕಿತ್ಸೆ ನೀಡಬೇಕು ಎಂಬುದು ನಮ್ಮ ಆರೋಗ್ಯ ಇಲಾಖೆಯ ಧ್ಯೇಯವಲ್ಲ. ಜನರು ರೋಗಿಗಳಾಗಿ ಆಸ್ಪತ್ರೆಗೆ ಬರುವಂತಹ ಸ್ಥಿತಿಯೇ ಬರಬಾರದು ಎಂಬುದು ನಮ್ಮ ಧ್ಯೇಯ. ರೋಗ ಬರುವುದನ್ನೇ ತಡೆಗಟ್ಟುವುದೇ ಇಲಾಖೆಯ ಗುರಿ. ಇದಕ್ಕಾಗಿ ಆಶಾ ಕಾರ್ಯಕರ್ತೆಯರು, ವೈದ್ಯರು ಈ ಅಭಿಯಾನದಲ್ಲಿ ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು. 15–20 ಲಕ್ಷ ಮಕ್ಕಳಿಗೆ ಕಣ್ಣಿನ ಪರೀಕ್ಷೆ ಮಾಡಿ, ಅಗತ್ಯವಿದ್ದರೆ ಕನ್ನಡಕ ನೀಡಬೇಕು. ಅನೀಮಿಯಾದಿಂದ ಬಳಲುವವರಿಗೆ ಸೂಕ್ತ ಚಿಕಿತ್ಸೆ ನೀಡಬೇಕು ಎಂದರು.

ಅನ್ನದಾನ ಮಹಾದಾನವಾದರೆ, ರಕ್ತದಾನವು ಶ್ರೇಷ್ಠದಾನವಾಗಿದೆ. ಅದೇ ರೀತಿ ಅಂಗಾಂಗಗಳ ದಾನ ಸರ್ವಶ್ರೇಷ್ಠ ದಾನವಾಗಿದೆ. ರಕ್ತದಾನ ಮಾಡುವುದರಿಂದ ದೇಹ ದುರ್ಬಲಗೊಳ್ಳುತ್ತದೆ ಎಂಬ ತಪ್ಪು ಭಾವನೆ ಇತ್ತು. ಆದರೆ ರಕ್ತ ನೀಡುವುದರಿಂದ ಅನೇಕ ರೋಗಗಳಿಂದ ದೂರವಿರಲು ಸಾಧ್ಯವಿದೆ.

ರಕ್ತದೊತ್ತಡ, ಬೊಜ್ಜು, ಹೃದಯ ಸಂಬಂಧಿ ರೋಗಗಳ ಸಾಧ್ಯತೆ ರಕ್ತದಾನದಿಂದಲೇ ಕಡಿಮೆಯಾಗುತ್ತದೆ. ವರ್ಷಕ್ಕೆ ದೇಶದಲ್ಲಿ 1.28 ಲಕ್ಷ ಯುನಿಟ್ ಹಾಗೂ ರಾಜ್ಯದಲ್ಲಿ 6.80 ಲಕ್ಷ ಯುನಿಟ್ ರಕ್ತ ಬೇಕಿದೆ. ಪ್ರತಿಯೊಬ್ಬರೂ ವರ್ಷದಲ್ಲಿ ಒಂದು ಬಾರಿ ರಕ್ತದಾನ ಮಾಡಿದರೆ ರಕ್ತದ ಕೊರತೆಯೇ ಇರುವುದಿಲ್ಲ.

ಭಾರತ ಯುವಜನರ ದೇಶವಾಗಿದ್ದು, ಈ ರೀತಿಯ ಪರೋಪಕಾರದ ಕೆಲಸದಲ್ಲಿ ತೊಡಗಬೇಕು. ವರ್ಷಕ್ಕೆ ಒಬ್ಬ ಪುರುಷ 3 ಬಾರಿ ಹಾಗೂ ಮಹಿಳೆ 4 ಬಾರಿ ರಕ್ತದಾನ ಮಾಡಬಹುದು. ಆದರೆ ಒಬ್ಬರು ವರ್ಷಕ್ಕೆ ಒಮ್ಮೆ ರಕ್ತದಾನ ಮಾಡಿದರೂ ಕೊರತೆ ನೀಗಿಸಬಹುದು ಎಂದರು.

ಇದೇ ವೇಳೆ ಕ್ಷಯ ಮುಕ್ತ ಭಾರತ ಅಭಿಯಾನವೂ ನಡೆಯುತ್ತಿದ್ದು, 2025ಕ್ಕೆ ರಾಜ್ಯವನ್ನು ಕ್ಷಯ ಮುಕ್ತ ಮಾಡುವ ಗುರಿ ಇದೆ. ರಾಜ್ಯದಲ್ಲಿ 36 ಸಾವಿರ ಜನರು ಕ್ಷಯದಿಂದ ಬಳಲುತ್ತಿದ್ದು, 30 ಸಾವಿರ ಜನರು ಹೆಸರು ನೋಂದಾಯಿಸಿಕೊಂಡಿದ್ದಾರೆ.

ಇವರ ನೆರವಿಗಾಗಿ ಕಾರ್ಯಕ್ರಮವೊಂದನ್ನು ಜಾರಿ ಮಾಡಿದ್ದು, ಇದರಡಿ 6 ತಿಂಗಳಿಗಾಗಿ 6 ಸಾವಿರ ರೂ. ನೀಡಿ, ರೋಗಿಗಳಿಗೆ ಪೌಷ್ಟಿಕ ಆಹಾರ ನೀಡಬಹುದು ಎಂದು ತಿಳಿಸಿದರು.

ರಾಜ್ಯದಲ್ಲಿ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನು ನಿರ್ಮಿಸಿದ್ದು, ಇವುಗಳಲ್ಲಿ ಸುಮಾರು 5 ಸಾವಿರ ಸಮುದಾಯ ಆರೋಗ್ಯ ಅಧಿಕಾರಿಗಳಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲೇ ಈ ಕೇಂದ್ರಗಳಿದ್ದು, ಜನರು ಅಲ್ಲಿಗೆ ಹೋಗಿ ಆರೋಗ್ಯ ತಪಾಸಣೆಯ ಲಾಭ ಪಡೆಯಬೇಕು. ಕೋವಿಡ್ ಮೂರನೇ ಡೋಸ್ ಕೂಡ ಅಭಿಯಾನದಲ್ಲಿ ನೀಡಲಾಗುವುದು ಎಂದರು.


ಈ 15 ದಿನಗಳಲ್ಲಿ 1 ಕೋಟಿ ಆಯುಷ್ಮಾನ್ ಕಾರ್ಡ್ ವಿತರಿಸುವುದು ಹಾಗೂ 100 ದಿನಗಳಲ್ಲಿ 5 ಕೋಟಿ ಕಾರ್ಡ್ ನೀಡುವ ಗುರಿ ಹೊಂದಲಾಗಿದೆ ಎಂದು ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಈ ಅಭಿಯಾನದಲ್ಲಿ 10 ಸಾವಿರ ಆರೋಗ್ಯ ಸಿಬ್ಬಂದಿ ಹಾಗೂ 40 ಸಾವಿರ ಆಶಾ ಕಾರ್ಯಕರ್ತೆಯರು ಭಾಗವಹಿಸಲಿದ್ದಾರೆ ಎಂದು ಸಚಿವರು ತಿಳಿಸಿದರು. ಕನ್ನಡ ನಟಿ ಅಮೃತ ಅಯ್ಯಂಗಾರ್, ಆರೋಗ್ಯ ಇಲಾಖೆಯ ಮಹಿಳಾ ಆರೋಗ್ಯ ರಾಯಭಾರಿಯಾಗಿ ಆಯ್ಕೆಯಾಗಿದ್ದಾರೆ. ಕಾರ್ಯಕ್ರಮದಲ್ಲಿ ಅವರು ನೇತ್ರದಾನಕ್ಕೆ ಹೆಸರು ನೋಂದಾಯಿಸಿದರು.

ಮೈಸೂರು ಮಿತ್ರ

ಮೈಸೂರು ದಸರಾ ಮಹೋತ್ಸವ-2022

ಮರದ ಅಂಬಾರಿ ಹೊತ್ತು ದಸರಾ ಗಜಪಡೆ ತಾಲೀಮು...



ನಾಡಿನ ಸಂಸ್ಕೃತಿ, ವೀರಯೋಧರ ಸಾಹಸ, ಸಾಧಕ ಮಹಿಳೆಯರ ಸ್ಮರಣೆಗೆ ಸಾಕ್ಷಿಯಾದ 'ಯುವ ಸಂಭ್ರಮ'



ಗೋಣಿಕೊಪ್ಪಲು ಕಾವೇರಿ ಕಾಲೇಜು ವಿದ್ಯಾರ್ಥಿಗಳಿಂದ ಕೊಡವ ಸಾಂಪ್ರದಾಯಿಕ ನೃತ್ಯ

ಮಳೆ ನಿಂತ ಮೇಲೆ ಕಳೆಗಟ್ಟಿದ ಯುವ ಚೇತನ

ತುಂಬಿದ ಬಯಲು ರಂಗಮಂದಿರ...

'ಯುವ ಸಂಭ್ರಮ' ನೋಡಲು ಕಿಕ್ಕಿರಿದು ತುಂಬಿದ ಯುವ ಸಮೂಹದಿಂದ ಮಾನಸ ಗಂಗೋತ್ರಿ ಬಯಲು ರಂಗಮಂದಿರ ಶನಿವಾರ ತುಂಬಿ ತುಳುಕುತ್ತಿತ್ತು. ವಾರಾಂತ್ಯ ರಜಾ ದಿನವಾದ ಹಿನ್ನೆಲೆಯಲ್ಲಿ ಮೈಸೂರು ಸೇರಿದಂತೆ ರಾಜ್ಯದ ನಾನಾ ಕಡೆಗಳಿಂದ ಧಾವಿಸಿದ ಕಲಾಭಿಮಾನಿಗಳು, ಯುವ ವಿದ್ಯಾರ್ಥಿಗಳು ನೃತ್ಯ ವೈಭವವನ್ನು ಕಣ್ತುಂಬಿಕೊಂಡರಲ್ಲದೆ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು.



ಚಾಮರಾಜನಗರದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು 'ಜೈ ಭೀಮ್' ನೃತ್ಯ ಪ್ರದರ್ಶಿಸಿದರು.

ಮೈಸೂರು, ಸೆ.17(ಎಂಕೆ)- ಕೊಡವ ನಾಡಿನ ಸಂಸ್ಕೃತಿ ಅನಾವರಣ, ತಾಯಿ ಭಾರತಾಂಬೆಯ ಸ್ಮರಣೆಯೊಂದಿಗೆ ಜೈ ಭೀಮ್ ಘೋಷಣೆ ಮುಗಿಲು ಮುಟ್ಟಿತು...!

ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ 'ಯುವ ಸಂಭ್ರಮ'ದ 2ನೇ ದಿನ ಭಾವನಾತ್ಮಕ ಕ್ಷಣಗಳಿಗೆ ಸಾಕ್ಷಿಯಾಯಿತು. ಹೆಣ್ಣು ಪುರುಷರಷ್ಟೇ ಸಮಾನಳು. ಮಂಗಳಮುಖಿಯರಿಗೂ ಬದುಕುವ, ಸಾಧಿಸುವ, ಎಲ್ಲಾ ಕ್ಷೇತ್ರದಲ್ಲೂ ಅವಕಾಶ ಪಡೆಯುವ ಹಕ್ಕಿದೆ ಎಂಬ ಮಹತ್ವದ ವಿಚಾರಗಳನ್ನು ನೃತ್ಯ ವೈಭವದ ಮೂಲಕ ಪ್ರಸ್ತುತಪಡಿಸಲಾಯಿತು.

ವೇದಿಕೆಯಲ್ಲಿ ಮೊದಲ ನೃತ್ಯ ಪ್ರದರ್ಶನ ನೀಡಿದ ಚಾಮರಾಜನಗರ ಮರಿಯಾಲದ ಜೆಎಸ್‌ಎಸ್ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಯ ವಿದ್ಯಾರ್ಥಿಗಳ ತಂಡ 'ದೇಶದ ವೀರಯೋಧರ ಶೌರ್ಯ, ತ್ಯಾಗ-ಬಲಿದಾನ, ಕನ್ನಡ ನೆಲ-ಜಲ ಭಾಷೆಯ ಮಹತ್ವ ತಿಳಿಸಿದರೆ, ಮೈಸೂರಿನ ಕೃಷ್ಣಮೂರ್ತಿಪುರಂನ ಎಂಎಂಕೆ ಮತ್ತು ಎಸ್‌ಡಿಎಂ ಬಾಲಕಿಯರ ಪದವಿ ಪೂರ್ವ ಕಾಲೇಜು ತಂಡ ಜನ್ಮಕೊಟ್ಟ ತಾಯಿ, ಅನ್ನಕೊಟ್ಟ ಭೂ ತಾಯಿಯನ್ನು ಗೌರವಿಸಬೇಕೆನ್ನುವುದರ ಜೊತೆಗೆ ಸಾಧಕ ಮಹಿಳೆಯರನ್ನು ಸ್ಮರಿಸಿದರು.

ಬಳಿಕ ವೇದಿಕೆಗೆ ಆಗಮಿಸಿದ ಗೋಣಿಕೊಪ್ಪಲು ಕಾವೇರಿ ಕಾಲೇಜು ತಂಡ ವಿದ್ಯಾರ್ಥಿಗಳು ಕೊಡವ ನಾಡಿನ ಸಾಂಪ್ರದಾಯಿಕ ನೃತ್ಯ ಪ್ರದರ್ಶನ ನೀಡುವ ಮೂಲಕ ಕೊಡವರ ಸಂಸ್ಕೃತಿಯನ್ನು ಅನಾವರಣಗೊಳಿಸಿದರು. ಕೆಂಪು ಮತ್ತು ಹಳದಿ ಬಣ್ಣ ಸೀರೆಯುಟ್ಟ ವಿದ್ಯಾರ್ಥಿನಿಯರು, ಕಪ್ಪು ಬಣ್ಣದ ವಸ್ತ್ರ ಧರಿಸಿ ಹೆಜ್ಜೆಹಾಕಿದ ವಿದ್ಯಾರ್ಥಿಗಳು ಕೊಡವ ಕಂಪನ್ನು ಎಲ್ಲೆಡೆ ಪಸರಿಸಿದರು.

ಜೈ ಭೀಮ್: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ ಚಿತ್ರಣವನ್ನು ತೆರೆದಿಟ್ಟ ಚಾಮರಾಜನಗರದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಜೈ ಭೀಮ್ ಘೋಷಣೆ ಮೊಳಗಿಸಿದರು. ಅಸಮಾನತೆಯ ವಿರುದ್ಧ ಶ್ರಮಿಸಿ, ಸಮಾನತೆಯ ಹರಿಕಾರರಾದ ಅಂಬೇಡ್ಕರ್ ಅವರ ಕೊಡುಗೆಯನ್ನು ಅತ್ಯಾಕರ್ಷಕ ನೃತ್ಯ ಸಂಯೋಜನೆಯ ಮೂಲಕ ನೋಡುಗರ ಎದೆಗೆ ನಾಟುವಂತೆ ಪ್ರಸ್ತುತಪಡಿಸಿದರು. ಹಾಗೆಯೇ ಅಪ್ಪಟ ದೇಶಾಭಿಮಾನಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಸ್ವಾತಂತ್ರ್ಯ ಹೋರಾಟದ ಕುರಿತು ಹೆಚ್.ಡಿ.ಕೋಟೆ ತಾಲೂಕು ಆಲನಹಳ್ಳಿಯ ಚೇತನ ಸಂಯುಕ್ತ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ತಿಳಿಸಿಕೊಟ್ಟರೆ, ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ತಂಡ ಡೋಲು, ಕಂಸಾಳೆ, ನಗಾರಿ ಬಾರಿಸುವ ಮೂಲಕ ಜಾನಪದ ಸೊಗಡನ್ನು ಹಬ್ಬಿಸಿದರು.

ನೇಚರ್ ನಮ್ ಫ್ಯೂಚರ್: ನೆಲ, ಜಲ ನಿರ್ಮಲವಾಗಿದ್ದರಷ್ಟೇ ನಮ್ಮ ಬದುಕು-ಭವಿಷ್ಯವೆಂದ ಕೊಡಗು ಜಿಲ್ಲೆ ಪೊನ್ನಂಪೇಟೆಯ ಅರಣ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಹುಣಸೂರು ತಾಲೂಕಿನ ಬಿಳಿಕೆರೆಯ ವಿದ್ಯಾವಾರಿಧಿ ಸಂಯುಕ್ತ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು 'ನೇಚರ್ ನಮ್ ಫ್ಯೂಚರ್' ಎಂಬುದನ್ನು ಕಣ್ಣಿಗೆ ಕಟ್ಟುವಂತೆ ಮನಮೋಹಕ ನೃತ್ಯದ ಮೂಲಕ ತಿಳಿಸಿಕೊಟ್ಟರು. ಹಾಗೆಯೇ ಹುಣಸೂರಿನ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಮೈಸೂರು ಸಂಸ್ಥಾನದ ಮಹಾರಾಜರು ನೀಡಿದ ಕೊಡುಗೆಗಳನ್ನು ಹಾಡು-ನೃತ್ಯದ ಮೂಲಕವೇ ವರ್ಣಿಸಿದರು.

ಹೆಣ್ಣು ಮಕ್ಕಳ ರಕ್ಷಣೆಗೆ ಮನವಿ: ಅಸಮಾನತೆ, ಮೂಢ ನಂಬಿಕೆಗಳಿಂದ ಮೂಲೆಗುಂಪಾಗಿರುವ ಹೆಣ್ಣಿಗೆ ಸಮಾಜದಲ್ಲಿ ಸಮಾನತೆ ನೀಡಿ. ನಾವು ಸಾಧಿಸುತ್ತೇವೆ ಎಂಬುದನ್ನು ಅಚ್ಚುಕಟ್ಟಾಗಿ ಪ್ರಸ್ತುತಪಡಿಸುವ ಮೂಲಕ ಚಾಮರಾಜನಗರದ ಬ್ರೈಟ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಸಮಾನತೆ ಸಾರಿದರೆ, ರಸ್ತೆಗಳಲ್ಲಿ, ಸಿಗ್ನಲ್‌ಗಳಲ್ಲಿ 10 ರೂ. ಪೆನ್ನು ಮಾರಾಟ ಮಾಡುತ್ತಾ ಭಿಕ್ಷೆ ಬೇಡುವ ಅನಾಥ ಹೆಣ್ಣು ಮಕ್ಕಳನ್ನು ರಕ್ಷಣೆ ಮಾಡುವಂತೆ ಹೆಚ್.ಡಿ.ಕೋಟೆಯ ಶ್ರೀ ವಿಶ್ವಭಾರತಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಭಾವನಾತ್ಮಕ ದೃಶ್ಯ ಸಂಯೋಜನೆ ಹಾಗೂ ಅದ್ಭುತ ನೃತ್ಯಾಭಿನಯದ ಮೂಲಕ ಮನವಿ ಮಾಡಿದರು.

ನಮ್ಮನ್ನು ನಿಮ್ಮಂತೆಯೇ ನೋಡಿ: ಲಿಂಗತ್ವ ಅಲ್ಪಸಂಖ್ಯಾತರಾದ ಮಂಗಳಮುಖಿಯರ ಸಂಕಷ್ಟದ ಪರಿಸ್ಥಿತಿಯನ್ನು ಎಳೆ ಎಳೆಯಾಗಿ ತಿಳಿಸಿಕೊಟ್ಟ ಮಂಡ್ಯ ಅರ್ಕೇಶ್ವರನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿಯರು, ಬದುಕು ಶಿಕ್ಷೆಯಲ್ಲ. ನಮ್ಮನ್ನು ನಿಮ್ಮಂತೆಯೇ ಬದುಕಲು ಬಿಡಿ ಎಂಬ ಮಂಗಳಮುಖಿಯರ ಮನವಿಯನ್ನು ಮನಮುಟ್ಟುವ ರೀತಿಯಲ್ಲಿ ತಿಳಿಸಿಕೊಡುವ ಮೂಲಕ ಶಿಳ್ಳೆ-ಚಪ್ಪಾಳೆಗಳ ಸುರಿಮಳೆ ಗಿಟ್ಟಿಸಿದರು. ಹಾಗೆಯೇ ಮೈಸೂರಿನ ಮರಿಮಲ್ಲಪ್ಪ, ತರಳಬಾಳು, ಸೆಂಟ್ ಜೋಸೆಫ್, ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು, ಶ್ರೀ ಛಾಯಾದೇವಿ ಬಿ.ಎಡ್ ಕಾಲೇಜು, ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು, ಕೆ.ಆರ್.ನಗರದ ಟಿ.ಮರಿಮಲ್ಲಪ್ಪ ಸ್ಮಾರಕ ಸಂಯುಕ್ತ ಪದವಿ ಪೂರ್ವ ಕಾಲೇಜು. ಹೆಚ್.ಡಿ.ಕೋಟೆ ಸೆಂಟ್ ಮೇರಿಸ್ ಕಾಂಪೋಸಿಟ್ ಜೂನಿಯರ್ ಕಾಲೇಜು. ಇಲವಾಲದ ಕಲಾಭಾರತಿ ಸಂಯುಕ್ತ ಪದವಿ ಪೂರ್ವ ಕಾಲೇಜು. ನಂಜನಗೂಡು ದೊಡ್ಡಕವಲಂದೆ ಸರ್ಕಾರಿ ಪದವಿಪೂರ್ವ ಕಾಲೇಜು. ವಿರಾಜಪೇಟೆ ಕಾವೇರಿ ಪದವಿ ಪೂರ್ವ ಕಾಲೇಜು. ಪಾಂಡವಪುರ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ನೃತ್ಯ ಕೌಶಲ್ಯತೆ ಮೂಲಕ ರಾಷ್ಟ್ರೀಯ ಭಾವೈಕ್ಯತೆ, ಪರಿಸರ ಕಾಳಜಿ, ಜಾನಪದ, ಕನ್ನಡ ಕಲೆ-ಸಂಸ್ಕೃತಿ ಕುರಿತು ಬೆಳಕು ಚೆಲ್ಲಿದರು.

ಯುವಜನತೆಗೆ ಬದುಕಿನಲ್ಲಿ ಆಯ್ಕೆ ವಿಚಾರವಾಗಿ ಅತ್ಯಂತ ಸ್ವಾರಸ್ಯ-ಅರ್ಥಗರ್ಭಿತ ಕಥೆ ಹೇಳಿದ ನಟ ರಮೇಶ್ ಅರವಿಂದ್

ಮೈಸೂರು, ಸೆ.17(ಎಂಕೆ)- ಪ್ರತಿಯೊಬ್ಬರ ಜೀವನದಲ್ಲಿ ತೆಗೆದುಕೊಳ್ಳುವ ನಿರ್ಧಾರ, ಮಾಡಿಕೊಳ್ಳುವ ಆಯ್ಕೆ ಅರ್ಥಪೂರ್ಣವಾಗಿರಬೇಕು. ಬಹಳ ಇಷ್ಟವಾಗುವ ಕೆಲಸಗಳನ್ನೇ ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಸಾಧ್ಯವಾಗದಿದ್ದರೆ, ಮಾಡುತ್ತಿರುವ ಕೆಲಸವನ್ನೇ ಮನಃಪೂರ್ವಕವಾಗಿ ಮಾಡಿ. ಎಂದಿಗೂ ಕೊರಗಬೇಡಿ ಎಂದು ಕಿವಿಮಾತು ಹೇಳಿದ ಖ್ಯಾತ ಚಲನಚಿತ್ರ ನಟ ರಮೇಶ್ ಅರವಿಂದ್, ಕಥೆ ಹೇಳುವ ಮೂಲಕ ಬದುಕಿನಲ್ಲಿ ಆಯ್ಕೆ ವಿಚಾರ ಕುರಿತು ತಿಳಿಸಿಕೊಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ನಡೆಯುತ್ತಿರುವ 'ಯುವ ಸಂಭ್ರಮ'ಕ್ಕೆ ಶನಿವಾರ ತಾರಾ ಮೆರಗು ನೀಡಿದ ಅವರು, ನನಗೆ ಬಾಲ್ಯದಲ್ಲಿ ಇಬ್ಬರು ಗರ್ಲ್ ಫ್ರೆಂಡ್ಸ್(ಪ್ರಿಯಾ-ಶ್ರೇಯಾ ಕಥೆ)ಇದ್ದರು. ಒಬ್ಬಳು ಪ್ರಿಯಾ, ಮತ್ತೊಬ್ಬಳು ಶ್ರೇಯಾ. 'ಪ್ರಿಯಾ' ತುಂಬಾ ಸುಂದರವಾದ ಹುಡುಗಿ. ಶ್ರೇಯಾ ಗಂಭೀರ ಹಾಗೂ ಜವಾಬ್ದಾರಿಯಿಂದ ಇದ್ದಂತಹ ಹುಡುಗಿ. ಶ್ರೇಯಾಳನ್ನು ಮನೆಗೆ ಕರೆದುಕೊಂಡು ಹೋಗಿ ಮನೆ ಮಂದಿಗೆಲ್ಲಾ ಪರಿಚಯ ಮಾಡಿಕೊಡಬಹುದು. ಆದರೆ ಪ್ರಿಯಾಳನ್ನು ಕರೆದುಕೊಂಡು ಹೋಗುವುದೇ ಡೆಂಜರ್ ಏಕೆಂದರೆ, ಅವಳನ್ನು ನಾನು ಮನೆಗೆ ಕರೆದುಕೊಂಡು ಹೋದರೆ, ನಮ್ಮನ್ನೇ ಮನೆಯಿಂದ ಹೊರಕ್ಕೆ ಹಾಕಿದರೂ ಹಾಕಬಹುದು! ಒಮ್ಮೆ ಇದೇ ರೀತಿಯ ಕಾಂಪಿಟೇಷನ್‌ನಲ್ಲಿ ನನಗೆ 6 ಸಾವಿರ ರೂ. ಬಹುಮಾನ ಬಂದಿತ್ತು. ಅಷ್ಟನ್ನೂ ಒಂದೇ ಜೇಬಿನಲ್ಲಿ ಇಟ್ಟುಕೊಂಡಿರುವುದು ಪ್ರಿಯಾ ಕಣ್ಣಿಗೆ ಬಿದ್ದರೆ ಅಷ್ಟನ್ನೂ ಖರ್ಚು ಮಾಡಿಸುತ್ತಾಳೆ ಎಂಬ ಭಯದಿಂದ ಎರಡೂ ಜೇಬ್‌ಗಳಿಗೂ ತಲಾ 3 ಸಾವಿರ ಹಾಕಿಕೊಂಡೆ.





ಮೊದಲು ಪ್ರಿಯಾ ಬಂದಳು. ಜೇಬಿನಲ್ಲಿ ಎಷ್ಟಿದೆ? ಎಂದು ಕೇಳಿದಳು. ನಾನು 3 ಸಾವಿರ ರೂ. ಇದೆ ಎಂದೆ. ತಕ್ಷಣವೇ ಅವಳು ನನ್ನನ್ನು ಶೂ ಮಾಲ್‌ಗೆ ಕರೆದುಕೊಂಡು ಹೋಗಿ 2 ಸಾವಿರ ರೂ.ಗೆ ಒಂದು ಜೊತೆ ಶೂ ಕೊಡಿಸಿದಳು. ಉಳಿದ 1 ಸಾವಿರ ರೂ.ನಲ್ಲಿ ಸ್ಟಾರ್ ಹೋಟೆಲ್‌ನಲ್ಲಿ ಊಟ ಮಾಡಿ ಖರ್ಚು ಮಾಡಿದೆವು. ನಂತರ ಶ್ರೇಯಾ ಬಂದಳು, ಏನೋ ಹೊಸ ಶೂ ತೆಗೆದುಕೊಂಡಿದ್ದೀಯಾ... ಎಷ್ಟು? ನಾನು 2 ಸಾವಿರ ಎಂದೆಳುತ್ತಿದ್ದಂತೆ ತಲೆ ಇದೆಯಾ ನಿನಗೆ, ಮಳೆಗಾಲದಲ್ಲಿ ಶೂ ತೆಗೆದುಕೊಂಡಿದ್ದಿಯಲ್ಲಾ. ಅದರಲ್ಲೂ ಬಿಳಿಯ ಬಣ್ಣದ್ದು ಎಂದು ಬೈದಳು. ಇನ್ನೆಷ್ಟು ಬಾಕಿ ಇದೆ. ನಾನು 3 ಸಾವಿರ ಇದೆ ಎಂದೆ. ತಕ್ಷಣವೇ ಇಲ್ಲಿ ನೋಡು ಒಂದು ಲೀಡರ್ ಶಿಪ್ ಕೋರ್ಸ್ ಇದೆ ಸೇರಿಕೋ. ನಿನಗೆ ಇಷ್ಟ ಎಂದು ಹೇಳುತ್ತಿದ್ದೆಯಲ್ಲಾ. ಉಳಿದ ಹಣವನ್ನು ಬ್ಯಾಂಕ್‌ನಲ್ಲಿಡು ಮುಂದೆ ಒಳ್ಳೆಯದಾಗುತ್ತೆ ಎಂದಳು.

ಹೀಗೆ ಪ್ರಿಯಾ ಒಂದು ರೀತಿಯಾದರೆ, ಶ್ರೇಯಾ ಮತ್ತೊಂದು ರೀತಿ. ಇಬ್ಬರನ್ನು ಕಂಡರೆ ನನಗಿಷ್ಟ. ಕಡೆಗೆ ಇಬ್ಬರು ಹುಡುಗಿಯರು ನನ್ನನ್ನು ಮದುವೆಯಾಗು ಎಂದು ಪಟ್ಟು ಹಿಡಿದರು. ನಂತರ ನಿರ್ಧರಿಸಿ, 1991ರ ಜು.7 ಮದುವೆಯಾದೆ. ಯಾರನ್ನಾ...! ಅರ್ಚನಾಳನ್ನಾ! ನನಗೆ ಮದುವೆಯಾಗಿ 30 ವರ್ಷವಾಗಿದೆ. ಈಗಲೂ 'ಪ್ರಿಯಾ-ಶ್ರೇಯಾ ಜೊತೆಗೆ ಕಾಂಟ್ಯಾಕ್ಟ್‌ನಲ್ಲಿದ್ದೇನೆ... ಅದಕ್ಕಿಂತ ಮುಖ್ಯವಾದ ವಿಷಯವೆಂದರೇ 'ಪ್ರಿಯಾ ಮತ್ತು ಶ್ರೇಯಾ' ಇಂದಿಗೂ ನನ್ನ ಗರ್ಲ್ ಫ್ರೆಂಡ್ಸ್ ಮಾತ್ರವಲ್ಲ... ಎಲ್ಲರ ಗರ್ಲ್ ಫ್ರೆಂಡ್ಸ್..!

ನಿಜವಾಗಿ ಹೇಳಬೇಕಾದರೆ 'ಪ್ರಿಯಾ-ಶ್ರೇಯಾ' ಎಂಬುದು ಉಪನಿಷತ್ತಿನಲ್ಲಿ ಸಿಕ್ಕಿದ್ದು. ಉಪನಿಷತ್ತಿನಲ್ಲಿ ಒಂದು 'ಪ್ರಿಯಾ' ವಾದದ್ದು. ಇನ್ನೊಂದು ನಿಮಗೆ 'ಶ್ರೇಯ'ಸ್ಸನ್ನು ತರುವುದು. ನಿಮಗೆ ತಕ್ಷಣಕ್ಕೆ ಖುಷಿ ನೀಡುವಂತದ್ದು, ಸದ್ಯಕ್ಕೆ ಸಿಗುವ ಲಾಭ 'ಪ್ರಿಯಾ' ಆಗುತ್ತೆ. ಅದೇ ಅರ್ಥಪೂರ್ಣ ಹಾಗೂ ಜೀವನಪೂರ್ತಿ ಸಹಾಯ ಮಾಡುವ ವಿಚಾರಗಳು 'ಶ್ರೇಯಾ' ಆಗುತ್ತೆ. ಆಗಾಗಿ ಈ 'ಪ್ರಿಯಾ ಮತ್ತು ಶ್ರೇಯಾ' ಎಂಬುದು ನಮ್ಮೆಲ್ಲರ ಜೀವನದಲ್ಲಿ ಪ್ರತಿ ಹಂತದಲ್ಲಿಯೂ ಕಾಣಿಸಿಕೊಳ್ಳುತ್ತಾರೆ. ಇದು ಯಾವುದೇ ಹುಡುಗಿಯ ಹೆಸರಲ್ಲ. ವಿಚಾರವಷ್ಟೇ ಎಂದು ಕಥೆ ಹೇಳುವ ಮೂಲಕ ಯುವಕ-ಯುವತಿಯರು ತಮ್ಮ ಬದುಕಿನ ಯಶಸ್ಸಿಗೆ ಮಾಡಿಕೊಳ್ಳಬೇಕಾದ ಆಯ್ಕೆಗಳ ಕುರಿತು ಅರಿವು ಮೂಡಿಸಿದರು. ಬಳಿಕ ತಮ್ಮ ಮುಂದಿನ 'ಶಿವಾಜಿ ಸುರತ್ಕಲ್-2' ಸಿನಿಮಾ ಕುರಿತು ಮಾತನಾಡಿದ ನಟ ರಮೇಶ್, ನಾನು ಈ ಕ್ಷೇತ್ರದಲ್ಲಿ ಸಾಧಿಸಲು 30 ವರ್ಷ ತೆಗೆದುಕೊಂಡಿದ್ದೇನೆ ಆದರೆ ಇಂದಿನ ಯುವಕರಿಗೆ ಅಷ್ಟು ವರ್ಷಗಳು ಬೇಕಾಗಿಲ್ಲ. 10 ವರ್ಷಗಳಲ್ಲಿಯೇ ಸಾಧಿಸುವವರು, ಸಾಧಿಸಿದವರು ಇದ್ದಾರೆ. ನಾನು ಕೂಡ ಇದೇ ರೀತಿಯ ಒಂದು ಅಂತರ ಕಾಲೇಜು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ನನ್ನ ಅಭಿನಯವನ್ನು ಗುರುತಿಸಿದ ತೀರ್ಪುಗಾರರು, ನನ್ನನ್ನು ರೇಡಿಯೋಗೆ ಕರೆದುಕೊಂಡು ಹೋದರು. ಅಲ್ಲಿಂದ ಸಿನಿಮಾ ಜರ್ನಿ ಶುರುವಾಯಿತು ಎಂದು ತಮ್ಮ ಹಳೇಯ ದಿನಗಳನ್ನು ಸ್ಮರಿಸಿದರು. ಇದೇ ವೇಳೆ 'ಶಿವಾಜಿ ಸುರತ್ಕಲ್-2' ಸಿನಿಮಾದ ಟೀಸರ್ ಪ್ರದರ್ಶಿಸಲಾಯಿತು.

ಮೈಸೂರು ಮಿತ್ರ

ಅ.2, ಬದನವಾಳಿನಲ್ಲಿ ರಾಹುಲ್ ಗಾಂಧಿ ನೇತೃತ್ವದಲ್ಲಿ ಗಾಂಧಿ ಜಯಂತಿ

ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ಸಿದ್ದರಾಮಯ್ಯ ಭೇಟಿ, ಪರಿಶೀಲನೆ

ನಂಜನಗೂಡು, ಸೆ.17– ಭಾರತ್ ಜೋಡೋ ಪಾದಯಾತ್ರೆ ವೇಳೆ ರಾಹುಲ್ ಗಾಂಧಿಯವರು ಬದನವಾಳು ಗ್ರಾಮಕ್ಕೆ ಭೇಟಿ ನೀಡಲಿದ್ದು, ಅವರೊಂದಿಗೆ ಗಾಂಧಿ ಜಯಂತಿ ಆಚರಿಸಲಾಗುವುದು ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

ರಾಹುಲ್ ಗಾಂಧಿ ಅವರು ತಾಲೂಕಿನ ಬದನವಾಳು ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ಭೇಟಿ ನೀಡುವ ಹಿನ್ನೆಲೆಯಲ್ಲಿ ಶನಿವಾರ ಸ್ಥಳ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಹುಲ್ ಗಾಂಧಿ ಕೈಗೊಂಡಿರುವ ಭಾರತ್ ಜೋಡೋ ಯಾತ್ರೆ ಸೆ.30ರಂದು ಗುಂಡ್ಲುಪೇಟೆ ಮೂಲಕ ರಾಜ್ಯ ಪ್ರವೇಶಿಸಲಿದೆ. ಅ.2ರಂದು ಬದನವಾಳು ಖಾದಿ ಗ್ರಾಮೋದ್ಯೋಗ ಕೇಂದ್ರಕ್ಕೆ ರಾಹುಲ್ ಗಾಂಧಿ ಭೇಟಿ ನೀಡಿ ಇಲ್ಲಿನ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಗಾಂಧಿ ಜಯಂತಿ ಆಚರಿಸಲಿದ್ದಾರೆ. ಅಂದು ಬೆಳಗ್ಗೆ 7.30ರಿಂದ ಮಧ್ಯಾಹ್ನ 2.30ರವರೆಗೆ ಭಜನೆ, ದೇಶಭಕ್ತಿ ಗೀತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮಕ್ಕೆ ಸುಮಾರು 400 ರಿಂದ 500 ಮಂದಿ ಗಣ್ಯರಿಗೆ ಮಾತ್ರ ಪ್ರವೇಶಾವಕಾಶ ಇದೆ. ಈ ವೇಳೆ ಎಐಸಿಸಿ ಕಾರ್ಯದರ್ಶಿ ವೇಣುಗೋಪಾಲ್, ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ, ರಾಜ್ಯದ ಎಲ್ಲಾ ನಾಯಕರು ಮತ್ತು



ಸ್ಥಳೀಯ ನಾಯಕರು ಉಪಸ್ಥಿತರಿರುವರು.

ಈ ಪಾದಯಾತ್ರೆಯಿಂದ ದೇಶಕ್ಕೆ ಒಳ್ಳೆಯದಾಗುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೋಮು ದ್ವೇಷಬೀಜ ಬಿತ್ತುವ ಮೂಲಕ ಜನರ ಮಧ್ಯೆ ಗೊಂದಲ ಮೂಡಿಸಿ ಜನರ ಮನಸ್ಸನ್ನು ಒಡೆಯುವ ಕೆಲಸ ಮಾಡುತ್ತಿವೆ. ಬಡವರು ದಲಿತರು ಅಲ್ಪಸಂಖ್ಯಾತರು ಆತಂಕದಲ್ಲಿ ಬದುಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ಬೆಲೆ ಏರಿಕೆ, ಭ್ರಷ್ಟಾಚಾರ ತಾಂಡವವಾಡುತ್ತಿದೆ ನಿರುದ್ಯೋಗ ಸಮಸ್ಯೆ ಎಲ್ಲೆ ಮೀರುತ್ತಿದೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ದೇಶದ ಐಕ್ಯತೆಯನ್ನು ಕಾಪಾಡಲು ಕಾಂಗ್ರೆಸ್ ಪಕ್ಷ ಭಾರತ್ ಜೋಡೋ ಪಾದಯಾತ್ರೆಯನ್ನು ನಡೆಸುತ್ತಿದೆ. ಎಲ್ಲರೂ ಪಕ್ಷಭೇದ ಮರೆತು ಭಾಗವಹಿಸಬೇಕು ಎಂದು ಅವರು ಮನವಿ ಮಾಡಿದರು.

ಹತ್ತಿ ಅಭಾವದಿಂದ ನೂಲು ತೆಗೆಯಲು ಆಗುತ್ತಿಲ್ಲ ಮತ್ತು ಬಟ್ಟೆ ನೇಯಲು ಆಗುತ್ತಿಲ್ಲ. ಇಲ್ಲಿ ಕೆಲಸ ಮಾಡುವ ಮಹಿಳೆಯರು ಕೆಲಸವಿಲ್ಲದೆ ಕಂಗಾಲಾಗಿದ್ದು, ಅವರಿಗೆ ಕೂಲಿ ತುಂಬಾ ಕಡಿಮೆ ನೀಡುತ್ತಿರುವುದು ನನ್ನ ಗಮನಕ್ಕೆ ಬಂದಿಲ್ಲ. ಈ ಬಗ್ಗೆ ಸಂಬಂಧಪಟ್ಟ ಸಚಿವರೊಂದಿಗೆ ಮಾತನಾಡುತ್ತೇನೆ ಎಂದರು.

ಈ ವೇಳೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಮೈಸೂರು ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಚ್.ಸಿ.ಬಸವರಾಜು, ಜಿಪಂ ಮಾಜಿ ಅಧ್ಯಕ್ಷೆ ಲತಾ, ಕೆಬಿ.ಸ್ವಾಮಿ, ಬಿ.ಎಂ.ರಾಮು, ನಗರಸಭೆ ಬ್ಲಾಕ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಸಿ.ಎಂ.ಶಂಕರ್, ಕಾಂಗ್ರೆಸ್ ಹಿಂದುಳಿದ ವರ್ಗದ ಅಧ್ಯಕ್ಷ ಮಾರುತಿ, ಮೂಗಶೆಟ್ಟಿ ವಿಶ್ವಕರ್ಮ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ನಗರಸಭೆ ಸದಸ್ಯರಾದ ಗಂಗಾಧರ, ಇಂಧನ್ ಬಾಬು, ಮಹೇಶ್, ಪ್ರದೀಪ್, ಮುಖಂಡರಾದ ನಾಗರಾಜಯ್ಯ, ಮಹದೇವು, ನಾಗರಾಜು, ಶಿವಣ್ಣ ಗೋವಿಂದ ರಾಜು ದೊರೆಸ್ವಾಮಿ ನಾಯಕ ಇತರರಿದ್ದರು.

ಯಾವುದೇ ಭಿನ್ನಾಭಿಪ್ರಾಯವಿಲ್ಲ

ಭಾರತ್ ಜೋಡೋ ಪಾದಯಾತ್ರೆ ವಿಚಾರವಾಗಿ ರಾಜ್ಯ ಕಾಂಗ್ರೆಸ್ ನಾಯಕರ ಮಧ್ಯೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಕೆಪಿಸಿಸಿ ಅಧ್ಯಕ್ಷರೊಂದಿಗೆ ರಾಜ್ಯ ನಾಯಕರೆಲ್ಲರೂ ಒಟ್ಟಾಗಿ ಪಾಲ್ಗೊಂಡು ಪಾದಯಾತ್ರೆ ಯಶಸ್ವಿಗೊಳಿಸಲಾಗುವುದು. ಭಾರತ್ ಜೋಡೋ ಪಾದಯಾತ್ರೆ ಸಂಬಂಧ ಚರ್ಚಿಸಲು ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಧ್ರುವನಾರಾಯಣ್ ಜೊತೆ ನಾನು ಭಾಗಿಯಾಗಲಿದ್ದೇನೆ.

-ಸಿದ್ದರಾಮಯ್ಯ, ವಿಪಕ್ಷ ನಾಯಕ

ಬೋರ್‌ವೆಲ್‌ಗೆ ಅಳವಡಿಸಿದ್ದ ಕೇಬಲ್ ಕಳ್ಳತನ

ಹುಣಸೂರು, ಸೆ.17– ತಾಲೂಕಿನ ಗಾವಡಗೆರೆ ಹೋಬಳಿ ಬೆಳ್ತೂರು ಗ್ರಾಮದ ಸುತ್ತಮುತ್ತಲ ಜಮೀನುಗಳಲ್ಲಿ ರೈತರು ಬೋರ್‌ವೆಲ್‌ಗೆ ಅಳವಡಿಸಿದ್ದ ಕೇಬಲ್ ಅನ್ನು ಕಳ್ಳರು ರಾತ್ರೋರಾತ್ರಿ ಕದ್ದೊಯ್ದಿದ್ದಾರೆ. ಬೆಳ್ತೂರು ಗ್ರಾಮದ ಸರ್ವೆ ನಂ.1ರಲ್ಲಿ ಹೆಚ್.ಎಸ್.ಗಜೇಂದ್ರ ಅವರಿಗೆ ಸೇರಿದ ಜಮೀನಿನಲ್ಲಿ 2 ಬೋರ್‌ವೆಲ್‌ಗಳಿಗೆ ಅಳವಡಿಸಿದ್ದ 170 ಅಡಿ ಕೇಬಲ್ ಅನ್ನು ಕದ್ದೊಯ್ದಿದ್ದಾರೆ. ಅಲ್ಲದೇ ಪಕ್ಕದ ಬಸವರಾಜು ಎಂಬುವರಿಗೆ ಸೇರಿದ ಜಮೀನಿನಲ್ಲಿ ಪಂಪ್‌ಸೆಟ್‌ಗೆ ಅಳವಡಿಸಿದ್ದ 10 ಮೀಟರ್ ಕೇಬಲ್, ಶಿವಲಿಂಗಾಚಾರಿ ಅವರಿಗೆ ಸೇರಿದ ಬೆಳ್ತೂರು ಸರ್ವೆ ನಂ.126ರಲ್ಲಿ ಪಂಪ್‌ಸೆಟ್‌ಗೆ ಅಳವಡಿಸಿದ್ದ 10 ಮೀಟರ್ ಕೇಬಲ್, ರಾಜೇಶ್ ಅವರಿಗೆ ಸೇರಿದ ಸರ್ವೆ ನಂ.4 ರಲ್ಲಿ ಪಂಪ್‌ಸೆಟ್‌ಗೆ ಅಳವಡಿಸಿದ್ದ 30 ಮೀಟರ್ ಕೇಬಲ್, ಚಂದ್ರ ಅವರಿಗೆ ಸೇರಿದ ಸರ್ವೆ ನಂ.123ರಲ್ಲಿ ಪಂಪ್‌ಸೆಟ್‌ಗೆ ಅಳವಡಿಸಿದ್ದ 20 ಮೀಟರ್ ಕೇಬಲ್ ಅನ್ನು ಕದ್ದೊಯ್ದಿದ್ದಾರೆ. ಈ ಸಂಬಂಧ ರೈತರು ಹುಣಸೂರು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದು, ಸ್ಥಳಕ್ಕೆ ಎಸ್‌ಐ ಜಮೀರ್ ಅಹಮದ್, ಸಿಬ್ಬಂದಿ ವಿಜಯ್ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಪಿ.ಪಟ್ಟಣ ಪಿಎಸಿಎಸ್‌ಗೆ 14.33 ಲಕ್ಷ ಲಾಭ



ಪಿರಿಯಾಪಟ್ಟಣ, ಸೆ. 17– ಪಟ್ಟಣದ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ 14.33 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಕಾರ್ಯ ನಿರ್ವಹಣಾಧಿಕಾರಿ ಎಚ್.ಆರ್. ಪ್ರವೀಣ್ ತಿಳಿಸಿದರು. ಪಟ್ಟಣದ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ನಡೆದ 2021–22ನೇ ಸಾಲಿನ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಸಾಮಾನ್ಯವಾಗಿ ಪ್ರತಿಯೊಂದು ಸಹಕಾರ ಸಂಘಗಳು ಆರ್ಥಿಕ ಅಭಿವೃದ್ಧಿಯತ್ತ ಸಾಗಲು ಸಂಘದ ಷೇರುದಾರರು ಹಾಗೂ ರೈತರ ಸಹಕಾರ ಇದ್ದಲ್ಲಿ ಮಾತ್ರ ಸಂಘದ ಏಳಿಗೆ ಸಾಧ್ಯ ಎಂದ ಅವರು, ರೈತರು ತಾವು ಪಡೆದ ಸಾಲವನ್ನು ಸರಿಯಾದ ಸಮಯಕ್ಕೆ ಮರುಪಾವತಿ ಮಾಡಿದಾಗ ಮಾತ್ರ ನಿಮ್ಮ ಆರ್ಥಿಕ ಮುನ್ನಡೆ ಸಾಧಿಸುವ ಜೊತೆ ಜೊತೆಯಲ್ಲೇ ಸಂಘದ ಅಭಿವೃದ್ಧಿಗೂ ಸಹ ಕೈ ಜೋಡಿಸಬಹುದಾಗಿದೆ. ಇದಕ್ಕೆ ನಿಮ್ಮ ಸಹಕಾರ ಅತ್ಯಗತ್ಯ ಎಂದು ರೈತರಲ್ಲಿ ಮನವಿ ಮಾಡಿದರು.

ಎಂಸಿಡಿಸಿಸಿ ಬ್ಯಾಂಕ್‌ನ ಮೇಲ್ವಿಚಾರಕ ಎಚ್.ಕೆ.ಜಗದೀಶ್, ಸಂಘಕ್ಕೆ ಸರ್ಕಾರದಿಂದ ದೊರೆಯುವ ಸೌಲಭ್ಯ ಹಾಗೂ ರೈತರ ಜವಾಬ್ದಾರಿ ಬಗ್ಗೆ ಸವಿವರವಾಗಿ ವಿವರಿಸಿದರು

ಈ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಸಂಘದ ಸದಸ್ಯರ ಮಕ್ಕಳನ್ನು ಸನ್ಮಾನಿಸಲಾಯಿತು. ಸಂಘದ ಸದಸ್ಯರಿಗೆ ಶೇ.5ರ ಡಿವಿಡೆಂಡ್ ನೀಡಲು ತೀರ್ಮಾನಿಸಲಾಯಿತು.

ಈ ವೇಳೆ ಸಂಘದ ಅಧ್ಯಕ್ಷ ನಟರಾಜ್, ಉಪಾಧ್ಯಕ್ಷ ಸಣ್ಣಪ್ಪ, ನಿರ್ದೇಶಕರಾದ ಬಿ.ಎಸ್.ಸತೀಶ್ ಕುಮಾರ್, ಪ್ರಭು ಕುಮಾರ್, ಪಿ.ಕೆ.ಕುಮಾರ್, ಟಿ.ಆರ್. ವೆಂಕಟೇಶ್, ಎಚ್.ಡಿ.ರಮೇಶ್, ಎಸ್.ಜೆ. ಶಿವಣ್ಣ, ಸೈಯದ್ ಸಿರಾಜ್, ಕರಿನಾಯಕ, ಶ್ರೀಮತಿ ಪಾರ್ವತಿ, ಗೀತಾ, ಸಂಸ್ಥೆಯ ಸಿಬ್ಬಂದಿಗಳಾದ ಕೆ.ಸಾಗರ್, ನಾಗರಾಜು, ಮನೋಹರ್, ಕುಮಾರಸ್ವಾಮಿ ಸೇರಿದಂತೆ ಸಂಘದ ಸದಸ್ಯರು ಹಾಜರಿದ್ದರು.

ಕ್ರೀಡೆಯಲ್ಲಿ ಪಾಲ್ಗೊಂಡು ಆರೋಗ್ಯ ವೃದ್ಧಿಸಿಕೊಳ್ಳಿ

ಕೆ.ಆರ್.ನಗರ, ಸೆ.17– ಸದಸ್ಯರು ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಳ್ಳುವ ಮೂಲಕ ಆರೋಗ್ಯ ವೃದ್ಧಿಸಿಕೊಳ್ಳಬೇಕು ಎಂದು ಕಾವೇರಿ ಸ್ಪೋರ್ಟ್ಸ್ ಅಂಡ್ ರಿಕ್ರಿಯೇಷನ್ ಕ್ಲಬ್ ಅಧ್ಯಕ್ಷ ಕೆ.ಎನ್. ಬಸಂತ್ ತಿಳಿಸಿದರು.

ಪಟ್ಟಣದ ಲಾಳನಕೆರೆ ರಸ್ತೆಯಲ್ಲಿರುವ ಕ್ಲಬ್ ಆವರಣದಲ್ಲಿ ನಡೆದ 2021–22ನೇ ಸಾಲಿನ 5ನೇ ವರ್ಷದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕ್ಲಬ್‌ಗೆ ಸದಾ ಸಹಕಾರ ನೀಡುವ ಮೂಲಕ ಚಟುವಟಿಕೆಯಲ್ಲಿ ಪಾಲ್ಗೊಂಡಲ್ಲಿ ಮಾತ್ರ ಸಂಘ ಅಭಿವೃದ್ಧಿ ಹೊಂದಲು ಸಾಧ್ಯ. ಎಲ್ಲರ ಸಹಕಾರದಿಂದ ಪ್ರಸಕ್ತ ಸಾಲಿನಲ್ಲಿ ಕ್ಲಬ್ 5,51,000 ರೂ. ನಿವ್ವಳ ಲಾಭ ಗಳಿಸಿದ್ದು, ಸದಸ್ಯರು ಉತ್ತಮ ಸಹಕಾರ ನೀಡಿದರೆ ಸಂಘವು ಇನ್ನೂ ಉತ್ತಮ ಮಟ್ಟಕ್ಕೆ ಬೆಳೆಯಲು ಸಹಕಾರಿಯಾಗುತ್ತದೆ ಎಂದರು.

ಕಾರ್ಯದರ್ಶಿ ನಾರಾಯಣ್ ಸಂಘದ ವರದಿ ಮಂಡಿಸಿದರು. ಸಂಘದ



ಸದಸ್ಯರಾದ ಎಸ್.ರಾಮಲಿಂಗು, ಚಂದ್ರಶೇಖರ್, ಕರೀಗೌಡ, ಡಿಂಡಿಮ ಶಂಕರ್, ಚಂದ್ರಕುಮಾರ್, ಇಂಜಿನಿಯರ್ ರವಿಕುಮಾರ್, ಎಂ.ಪಿ.ಶಿವಣ್ಣ ಕೇಬಲ್ ಮಂಜು ಮತ್ತಿತರರು ಮಾತನಾಡಿ, ಸಲಹೆ ನೀಡಿದರು.

ಈ ವೇಳೆ ಮೈಸೂರು ರೇಸ್‌ಕ್ಲಬ್ ಅಧ್ಯಕ್ಷ ವೈ.ಬಿ.ಗಣೇಶ್ ಮತ್ತು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಅವರನ್ನು ಸಂಘದಿಂದ ಅಭಿನಂದಿಸಲಾಯಿತು.

ಉಪಾಧ್ಯಕ್ಷ ಇಂಜಿನಿಯರ್ ಕುಮಾರ್, ಸಹ ಕಾರ್ಯದರ್ಶಿ ಪ್ರಕಾಶ್, ಖಜಾಂಚಿ ಹೆಚ್.ವಿ.ಕಾಳಾಜಿ, ನಿರ್ದೇಶಕರಾದ ವೈ.ಎಸ್.ಕುಮಾರ್, ಹೆಚ್.ಎಸ್.ಬಾಬು, ಕೇಶವ್, ಸಿ.ಆರ್.ಉದಯಕುಮಾರ್, ವ್ಯವಸ್ಥಾಪಕ ನಿರ್ದೇಶಕ ರಮೇಶ್‌ರಾವ್ ಕದಂ, ನವನಗರ ಅರ್ಬನ್ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕ ಸಿ.ಸುರೇಶ್, ಸಂಘದ ಕಿರಿಯ ಸಹಾಯಕಿ ಈ. ಪುಷ್ಪಲತಾ, ಕಚೇರಿ ಸಹಾಯಕ ಕೆ.ಎಸ್. ಲೋಕೇಶ್, ಮಹೇಶ್, ಬ್ಯಾಂಕ್ ರಾಘು, ಕೆ.ಎಲ್.ರಮೇಶ್, ರಂಗಣ್ಣ, ನಿಂಗಣ್ಣ, ರಾಮರಾಜು, ನಾಗೇಂದ್ರ ಮತ್ತಿತರರಿದ್ದರು.

ಪಿಎಲ್‌ಡಿ ಬ್ಯಾಂಕ್‌ನಿಂದ ರೈತರಿಗೆ 3.5 ಕೋಟಿ ಕೃಷಿ ಸಾಲ

ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಎಂ.ಮಹದೇವಣ್ಣ ಮಾಹಿತಿ

ತಿ.ನರಸೀಪುರ, ಸೆ.17– ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನಿಂದ ರೈತರಿಗೆ 3.50 ಕೋಟಿ ರೂ. ಕೃಷಿ ಸಾಲ ನೀಡಲಾಗಿದೆ ಎಂದು ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಎಂ.ಮಹದೇವಣ್ಣ ತಿಳಿಸಿದರು.

ಪಟ್ಟಣದ ಗುರುಭವನದಲ್ಲಿ ಶನಿವಾರ ನಡೆದ ಬ್ಯಾಂಕ್‌ನ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬ್ಯಾಂಕ್ ಪ್ರಸಕ್ತ ಸಾಲಿನಲ್ಲಿ 12 ಲಕ್ಷ ರೂ. ನಷ್ಟ ಅನುಭವಿಸಿದ್ದರೂ, ರೈತರ ಹಿತದೃಷ್ಟಿ ಗಮನದಲ್ಲಿಟ್ಟುಕೊಂಡು ಹೊಸ ಸದಸ್ಯರೂ ಸೇರಿದಂತೆ ಎಲ್ಲ ಸದಸ್ಯರಿಗೂ 3.5 ಕೋಟಿ ರೂ. ಸಾಲ ನೀಡಲಾಗಿದೆ. ಎತ್ತುಗಾಡಿ, ಕುರಿ ಸಾಕಣೆ, ಕೋಳಿ ಫಾರಂ, ಟ್ರಾಕ್ಟರ್, ಹಸು ಮತ್ತಿತರೆ ಉದ್ದೇಶಗಳಿಗಾಗಿ ನೀಡಲಾಗಿರುವ ಸಾಲವನ್ನು ರೈತರು ಸದುಪಯೋಗಪಡಿಸಿಕೊಂಡು ಆರ್ಥಿಕವಾಗಿ ಮುನ್ನಡೆ ಸಾಧಿಸುವಂತೆ ಕರೆ ನೀಡಿದರು.



ರೈತರು ಸರಿಯಾಗಿ ಸಾಲ ಮರುಪಾವತಿಸಿದಲ್ಲಿ ರಾಜ್ಯ ಶಾಖೆಯಿಂದ ಎಷ್ಟು ಬೇಕಾದರೂ ಹಣ ತಂದು ಸಾಲ ನೀಡಲು ಸಿದ್ಧನಿದ್ದೇನೆ. ಆದರೆ ರೈತರ ಸಹಕಾರವಿಲ್ಲದಿದ್ದರೆ ಏನೂ ಮಾಡಲಾಗದು. ಬ್ಯಾಂಕಿನಿಂದ ಈಗಾಗಲೇ ಇ–ಸ್ಟ್ಯಾಂಪಿಗ್ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಪಿಗ್ಮಿ ಯೋಜನೆ ಜಾರಿಗೆ ತರುವ ಉದ್ದೇಶ ಹೊಂದಲಾಗಿದೆ. -ಎನ್.ಮಹೇಶ್, ವ್ಯವಸ್ಥಾಪಕ.

ಕಾರ್ಯಕ್ರಮಕ್ಕೂ ಮುನ್ನ ಸದರಿ ಸಾಲಿನಲ್ಲಿ ಮರಣ ಹೊಂದಿದ ಸಹಕಾರಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಬ್ಯಾಂಕ್ ಉಪಾಧ್ಯಕ್ಷ ಬಿ.ಎಂ.ಲಿಂಗರಾಜು, ನಿರ್ದೇಶಕರಾದ ಕೆಂಚೇಗೌಡ, ಎಂ.ಎಸ್.ಶಿವ ಮೂರ್ತಿ, ಬಿ.ಸಿ.ಪಾರ್ಥಸಾರಥಿ, ಎನ್.ಎನ್.ಮಹದೇವಸ್ವಾಮಿ, ಟಿ.ಎಸ್.ಸಿದ್ದರಾಜು, ಎನ್.ಲಿಂಗಪ್ಪಾಜಿ, ಎಂ.ನಾಗರತ್ನ, ಗಂಗಮ್ಮ, ಎಂ.ಮಲ್ಲಿಕಾರ್ಜುನಸ್ವಾಮಿ, ವಿರೂಪಾಕ್ಷ, ಪ್ರೇಮಕುಮಾರ್, ಸುಂದರ್, ನಾಮ ನಿರ್ದೇಶನ ಸದಸ್ಯ ಕೆ.ವಿ.ಸಿದ್ದಮಲ್ಲಪ್ಪ ರಫಿಯಾ ಕೌಸರ್, ತನುಜಾ, ಕೆ.ಟಿ.ಕನಕ, ಬಿ.ಶಂಕರ ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಮರ್ದಿನಿ (ಕ): ಬೆ.10.45ಕ್ಕೆ, ಲಕ್ಕಿಮ್ಯಾನ್ (ಕ): ಮ.1ಕ್ಕೆ, ಸಂ.4ಕ್ಕೆ, ಸಂ.6.55ಕ್ಕೆ, ರಾ.9.55.
ಸ್ಕ್ರೀನ್ 2	ಮಾನ್ಸೂನ್ ರಾಗ (ಕ): ಬೆ.10.20ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ, ರಿಯಾ (ಕ): ಮ.1.35ಕ್ಕೆ, ನೇನು ಮೀಕು ಭಾಗ ಕಾವಾಲ್ಸಿನವಾಡಿನಿ (ತೆ): ರಾ.10ಕ್ಕೆ.
ಸ್ಕ್ರೀನ್ 3	ವೇರ್ ದಿ ಕ್ರಾಡಾಡ್ಸ್ ಸಿಂಗ್ (ಇಂ): ಬೆ.10.55ಕ್ಕೆ, ರಾ.10ಕ್ಕೆ, ಸಿನಮ್ (ತ): ಮ.1.30ಕ್ಕೆ, ವೆಂದು ತನಿಂದದು ಕಾಡು (ತ): ಮ.3.55ಕ್ಕೆ, ಆ ಅಮ್ಮಾಯಿ ಗುರಿಂಚಿ ಮೀಕು ಚೆಪ್ಪಾಲಿ (ತೆ): ರಾ.7.10ಕ್ಕೆ.
ಸ್ಕ್ರೀನ್ 4	ಬ್ರಹ್ಮಾಸ್ತ್ರ (3ಡಿ) (ಹಿಂ): ಬೆ.9.55ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.10.50ಕ್ಕೆ, ಮ.2.20ಕ್ಕೆ, ಸಂ.5.50ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 2	ಲಕ್ಕಿಮ್ಯಾನ್ (ಕ): ಬೆ.10.25ಕ್ಕೆ, ಶಾಕಿನಿ ಡಾಕಿನಿ (ತೆ): ಮ.1.35ಕ್ಕೆ, ಮಾನ್ಸೂನ್‌ರಾಗ (ಕ): ಸಂ.4.10ಕ್ಕೆ, ಆ ಅಮ್ಮಾಯಿ ಗುರಿಂಚಿ ಮೀಕು ಚೆಪ್ಪಾಲಿ (ತೆ): ರಾ.7ಕ್ಕೆ, ವೆಂದು ತಣಿಂದದು ಕಾಡು (ತ): ರಾ.10ಕ್ಕೆ.
ಸ್ಕ್ರೀನ್ 3	ಮಾನ್ಸೂನ್ ರಾಗ (ಕ): ಬೆ.10.10ಕ್ಕೆ, ರಾ.10.10ಕ್ಕೆ, ಲಕ್ಕಿಮ್ಯಾನ್ (ಕ): ಮ.1ಕ್ಕೆ, ರಾ.7ಕ್ಕೆ, ಪಂಪ ಪಂಚಳ್ಳಿ ಪರಶಿವಮೂರ್ತಿ (ಕ): ಸಂ.4.10ಕ್ಕೆ,
ಸ್ಕ್ರೀನ್ 4	ಕಪಾಲ (ಕ): ಬೆ10.45ಕ್ಕೆ, ಮಾನ್ಸೂನ್ ರಾಗ (ಕ): ಮ.1.30ಕ್ಕೆ, ವೆಂದು ತಣಿಂದದು ಕಾಡು (ತ): ಸಂ.4.20ಕ್ಕೆ, ಮರ್ದಿನಿ (ಕ): ರಾ.7.50ಕ್ಕೆ, ಬ್ರಹ್ಮಾಸ್ತ್ರ (3ಡಿ)(ಹಿಂ): ರಾ10.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಂಪ (ಕ): ಬೆ.10.35ಕ್ಕೆ, ಮರ್ದಿನಿ (ಕ): ಮ.1.10ಕ್ಕೆ, ಕಪಾಲ (ಕ): ಮ.3.30ಕ್ಕೆ, ವೆಂದು ತನಿಂದದು ಕಾಡು (ತ): ಸಂ.6ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 2	ಮಾನ್ಸೂನ್ ರಾಗ (ಕ): ಬೆ10.30ಕ್ಕೆ, ಮ.1.15ಕ್ಕೆ, ಸಂ.4ಕ್ಕೆ, ಸಂ.6.40ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ಬ್ರಹ್ಮಾಸ್ತ್ರ (3ಡಿ)(ಹಿಂ): ಮ.1.15ಕ್ಕೆ, ರಾ.7.45ಕ್ಕೆ, ಬ್ರಹ್ಮಾಸ್ತ್ರ (3ಡಿ)(ಕ): ಸಂ.4.30ಕ್ಕೆ.
ಸ್ಕ್ರೀನ್ 4	ಲಕ್ಕಿಮ್ಯಾನ್ (ಕ): ಬೆ.10.30ಕ್ಕೆ, ಮ.1.35ಕ್ಕೆ, ಸಂ.4.40ಕ್ಕೆ, ರಾ.7.45ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲಕ್ಕಿಮ್ಯಾನ್ (ಕ): ಬೆ.9ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಬ್ರಹ್ಮಾಸ್ತ್ರ (ಕ): ಮ.2.55ಕ್ಕೆ, ಗಾಳಿಪಟ–2 (ಕ): ಮ.3.25ಕ್ಕೆ, ನಾನ್ ರೌಡಿ (ಕ): ಮ.11.45ಕ್ಕೆ, ಬ್ರಹ್ಮಾಸ್ತ್ರ (3ಡಿ) (ಹಿಂ): ಬೆ.8.30ಕ್ಕೆ, ಬೆ.11ಕ್ಕೆ, ಮ.12ಕ್ಕೆ, ಮ.2.30ಕ್ಕೆ, ಮ.3.30ಕ್ಕೆ, ಸಂ.6ಕ್ಕೆ, ರಾ.7ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಬ್ರಹ್ಮಾಸ್ತ್ರ (2ಡಿ) (ಹಿಂ): ಬೆ.11.30ಕ್ಕೆ, ಮ.3ಕ್ಕೆ, ರಾ.9.15ಕ್ಕೆ, ಕ್ಯಾಪ್ಟನ್ (ತ): ಮ.12.10ಕ್ಕೆ, ಸಂ.6.35ಕ್ಕೆ, ಒಕೇ ಒಕ ಜೀವಿತಂ (ತೆ): ಸಂ.6.30ಕ್ಕೆ, ರಾ.9.45ಕ್ಕೆ, ಪಥೋಪಥಂ ನೋಟಂಡು (ಮ): ಸಂ.6.25ಕ್ಕೆ, ಒರು ತೆಕ್ಕ (ಮ): ರಾ.9.45ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಸಿನಮ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಲಕ್ಕಿಮ್ಯಾನ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕೋಬ್ರಾ (ತ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮರ್ದಿನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮರ್ದಿನಿ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ವೆಂದು ತನಿಂದದು ಕಾಡು (ತ)	4 ಪ್ರದರ್ಶನಗಳು
ಸಂಗಂ	
ಮಾನ್ಸೂನ್ ರಾಗ (ಕ)	4 ಪ್ರದರ್ಶನಗಳು
ಲಿಡೋ	
ಪಂಪ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಿನಮ್ (ತ)	4 ಪ್ರದರ್ಶನಗಳು
ಪ್ರಭಾ	
ಗಾಳಿಪಟ–2 (ಕ)	4 ಪ್ರದರ್ಶನಗಳು

ವಿವಿಧೆಡೆ ಪ್ರಧಾನಮಂತ್ರಿ ನರೇಂದ್ರ ಮೋದಿ ಹುಟ್ಟುಹಬ್ಬ ಅದ್ದೂರಿ ಆಚರಣೆ

ತಿ.ನರಸೀಪುರದಲ್ಲಿ ಕಾರ್ಯಕರ್ತರಿಂದ ಸೇವಾ ಕಾರ್ಯ





ತಿ.ನರಸೀಪುರ, ಸೆ.17– ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬದ ಅಂಗವಾಗಿ ಶನಿವಾರ ಬಿಜೆಪಿ ಕಾರ್ಯಕರ್ತರು ಪಟ್ಟಣದ ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಿ, ವಿವಿಧ ಸೇವಾ ಕಾರ್ಯ ಹಮ್ಮಿಕೊಂಡಿದ್ದರು.

ಸ್ವಚ್ಛತಾ ಕಾರ್ಯ: ಪಟ್ಟಣದ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗ ಕಾಂಪೋಸ್ಟ್ ನಿಗಮದ ಅಧ್ಯಕ್ಷ ಮಹದೇವಯ್ಯ ನೇತೃತ್ವದಲ್ಲಿ ಪುರಸಭಾ ಸದಸ್ಯ ಎಸ್.ಕೆ.ಕಿರಣ್ ಸೇರಿದಂತೆ ಹಲವು ಬಿಜೆಪಿ ಕಾರ್ಯಕರ್ತರು ಪೊರಕೆ ಹಿಡಿದು ದೇವಸ್ಥಾನದ ಸುತ್ತ ಕಸ ಗುಡಿಸಿ ಶ್ರಮದಾನ ಮಾಡಿದರು.

ಕಾಂಪೋಸ್ಟ್ ನಿಗಮದ ಅಧ್ಯಕ್ಷ ಮಹದೇವಯ್ಯ ಮಾತನಾಡಿ, ಮೋದಿ ಹುಟ್ಟುಹಬ್ಬ ಅಂಗವಾಗಿ ಇಡೀ ದೇಶದಲ್ಲಿ ಸೇವಾ ಇ ಸಪ್ತಾಹ, ಸೇವಾ ಇ ಸಂಘಟನೆ ಎಂಬ ಕಾರ್ಯಕ್ರಮದಡಿ ಬಿಜೆಪಿ ಕಾರ್ಯಕರ್ತರು ವಿವಿಧ ಸೇವೆಗಳಲ್ಲಿ ತಮ್ಮನ್ನು ತೊಡಗಿಕೊಂಡಿದ್ದಾರೆ. ಮೋದಿ ಪ್ರಪಂಚವೇ ಮೆಚ್ಚುವಂತಹ ಹೆಮ್ಮೆಯ ನಾಯಕ. ಅವರು ಪ್ರಧಾನಿಯಾದ ಮೇಲೆ ಇಡೀ ವಿಶ್ವವೇ ಭಾರತದತ್ತ ತಿರುಗಿ ನೋಡುವಂತಹ ಅಭಿವೃದ್ಧಿ ಕಾರ್ಯ ನಡೆದಿವೆ ಎಂದರು.

ಈ ವೇಳೆ ಪಿಎಸಿಸಿ ಉಪಾಧ್ಯಕ್ಷ ನಂಜುಂಡಸ್ವಾಮಿ, ಎಸ್‌ಸಿ ಮೋರ್ಚಾ ಅಧ್ಯಕ್ಷ ಶಿವಕುಮಾರ್, ತಾಪಂ ಮಾಜಿ ಸದಸ್ಯೆ ಶಿವಮ್ಮ, ಎಸ್‌ಸಿ ಮೋರ್ಚಾ ಕಾರ್ಯದರ್ಶಿ ಅನಿಲ್ ಕುಮಾರ್, ಹಿಂದುಳಿದ ವರ್ಗಗಳ ಅಧ್ಯಕ್ಷ ಗೂಳಿ ಮಹೇಶ್, ನಂದಕುಮಾರ್, ಚೌಹಳ್ಳಿ ಸಿದ್ದರಾಜು, ಎನ್.ಲೋಕೇಶ್ ಮತ್ತಿತರರಿದ್ದರು.

ಹಣ್ಣು ಬ್ರೆಡ್ ವಿತರಣೆ: ಪ್ರಧಾನಿ ಮೋದಿ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ಬಿಜೆಪಿ ವರುಣಾ ಮಂಡಲದಿಂದ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಹಣ್ಣು, ಬ್ರೆಡ್ ವಿತರಿಸಲಾಯಿತು.

ವರುಣಾ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಕಲ್ಮಳ್ಳಿ ವಿಜಯಕುಮಾರ್ ಮಾತನಾಡಿ, ಮೋದಿಯವರು ಪ್ರಧಾನಿಯಾದ ಬಳಿಕ ಭಾರತ ವಿಶ್ವ ಗುರುವಾಗಿದೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ದೇವನೂರು ಪ್ರತಾಪ್ ಮಾತನಾಡಿ, ಮೋದಿ ಅವರು ದೇಶಕ್ಕೆ ಹಿಂದುತ್ವ ಅಭಿವೃದ್ಧಿ, ಒಳ್ಳೆಯ ನಾಯಕತ್ವ ನೀಡುವ ಮೂಲಕ ಭಾರತವನ್ನು ಅಭಿವೃದ್ಧಿಶೀಲ ರಾಷ್ಟ್ರವಾಗಿಸಲು ದಿಟ್ಟಹೆಜ್ಜೆ ಇಟ್ಟಿದ್ದಾರೆ. ದೇಶದ ಅಸ್ಮಿತೆಯಾದ ಹಿಂದುತ್ವ ಕಾಪಾಡುತ್ತಾ, ದೇಶದ ಭೂಪಟದಿಂದ ಕಳೆದು ಹೋದ ಹಲವು ಭೂ ಪ್ರದೇಶಗಳನ್ನು ಮತ್ತೆ ಸೇರಿಸುವ ನಿಟ್ಟಿನಲ್ಲಿ ದೇಶವನ್ನು ಅಖಂಡ ಭಾರತವಾಗಿ ಕಟ್ಟುವಲ್ಲಿ ಯಶಸ್ವಿಯಾಗಿದ್ದಾರೆ ಎಂದರು.

ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಸಿ.ಎಂ.ಮಹದೇವಯ್ಯ, ಪುರಸಭಾ ಸದಸ್ಯರಾದ ಕೆ.ಗಣೇಶ್, ರೂಪಾ, ಚಿಕ್ಕ ಮಹಾದೇವ, ಸರ್ವಮಂಗಳ, ಕೆಡಿಪಿ ಸದಸ್ಯ ಎಂ.ಮಿಥುನ್, ಭೈರಾಪುರ ಬಾಲು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಎನ್.ರಂಗನಾಯಕ್, ರಾಜ್ಯ ಕಾರ್ಯಕಾರಿಣಿ ಸದಸ್ಯ ಕರುಹಟ್ಟಿ ಮಹದೇವಯ್ಯ, ಜಿಲ್ಲಾ ಕಾರ್ಯದರ್ಶಿ ಕೆ.ಎಸ್.ಬಸವರಾಜು, ವೆಂಕಟರಮಣಶೆಟ್ಟಿ, ನಟರಾಜು, ಮಾಜಿ ಅಧ್ಯಕ್ಷ ತೋಟದಪ್ಪ ಬಸವರಾಜು, ಯುವ ಘಟಕದ ಅಧ್ಯಕ್ಷ ವಿಜಯಕುಮಾರ್, ಗ್ರಾಪಂ ಸದಸ್ಯ ಮಹದೇವಸ್ವಾಮಿ ಸೇರಿದಂತೆ ಮತ್ತಿತರರಿದ್ದರು.

ದೇಶ ಕಂಡ ಜನಪ್ರಿಯ ಪ್ರಧಾನಿ ಮೋದಿ: ಬಣ್ಣನೆ

ನಂಜನಗೂಡು, ಸೆ.17– ದೇಶ ಕಂಡ ಜನಪ್ರಿಯ ಪ್ರಧಾನಿ ಮೋದಿ ಎಂದು ಶಾಸಕ ಬಿ.ಹರ್ಷವರ್ಧನ್ ಬಣ್ಣಿಸಿದರು.

ನಗರದ ಜೈನ ಭವನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ 72ನೇ ಹುಟ್ಟುಹಬ್ಬದ ಅಂಗವಾಗಿ ಬಿಜೆಪಿ ಯುವಮೋರ್ಚಾ ವತಿಯಿಂದ ಆಯೋಜಿಸಿದ್ದ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಭಾರತದಂತಹ ಬೃಹತ್ ದೇಶಕ್ಕೆ ಕೊರೊನಾ ಲಸಿಕೆಯನ್ನು ಉಚಿತವಾಗಿ ನೀಡುವ ಮೂಲಕ ಸೋಂಕು ತಡೆಗಟ್ಟುವಲ್ಲಿ ಇಡೀ ಪ್ರಪಂಚಕ್ಕೆ ಮಾದರಿ ಪ್ರಧಾನಿ ಎನಿಸಿದ್ದಾರೆ. ಕೊರೊನಾ ಆರ್ಥಿಕ ಸಂಕಷ್ಟದಿಂದಾಗಿ ಮುಂದುವರಿದ ದೇಶಗಳು ಆರ್ಥಿಕ ಹಿಂಜರಿತದಿಂದ ನರಳುತ್ತಿರುವಾಗ ಭಾರತದ ಆರ್ಥಿಕತೆ ಸದೃಢವಾಗಿರಲು ಪ್ರಧಾನಿ ಮೋದಿ ಅವರ ಮುಂದಾಲೋಚನೆ, ಚಾಣಾಕ್ಷತನ ಕಾರಣ. ಕೇಂದ್ರ ಸರ್ಕಾರದ ಕಿಸಾನ್ ಸಮ್ಮಾನ್ ಯೋಜನೆ, ಆಯುಷ್ಮಾನ್ ಭಾರತ್, ಮೇಕ್ ಇನ್ ಇಂಡಿಯಾ, ಉಜ್ವಲಾ ಯೋಜನೆ, ಆವಾಜ್ ಯೋಜನೆ, ಜನ್‌ಧನ್ ಯೋಜನೆ, ಕೌಶಲ್ಯ ಭಾರತ ಯೋಜನೆಗಳು ಬಡವರಿಗೆ ನೆರವಾಗಿವೆ ಎಂದರಲ್ಲದೆ, ದೇವರು ಅವರಿಗೆ ಆಯಸ್ಸು ಆರೋಗ್ಯ ಕೊಟ್ಟು ಕಾಪಾಡಲಿ ಎಂದು ಪ್ರಾರ್ಥಿಸುತ್ತೇನೆ ಎಂದರು.

ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಮಾತನಾಡಿ,



ಪ್ರಧಾನಿ ಮೋದಿ ಹುಟ್ಟುಹಬ್ಬದ ಅಂಗವಾಗಿ ಮುಂದಿನ 15 ದಿನಗಳ ಕಾಲ ಸೇವಾಕಾರ್ಯ ನಡೆಸಲಾಗುತ್ತಿದ್ದು, ತಾಲೂಕಿನ ಹುಲ್ಲಹಳ್ಳಿ, ಕೂಡ್ಲಾಪುರ ಗ್ರಾಮಗಳಲ್ಲಿ ಮತ್ತು ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆರೋಗ್ಯ ಶಿಬಿರಗಳನ್ನು ನಡೆಸಲಾಗಿದೆ. ಪ್ರತಿದಿನ ಸ್ವಚ್ಛತೆ ಸೇರಿದಂತೆ ಸೇವಾ ಕಾರ್ಯಗಳ ಮೂಲಕ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ ಎಂದರು.

ರಕ್ತದಾನ ಶಿಬಿರದಲ್ಲಿ 170ಕ್ಕೂ ಹೆಚ್ಚಿನ ಮಂದಿ ಸ್ವಂಪ್ರೇರಿತವಾಗಿ ರಕ್ತದಾನ ಮಾಡಿದರು. ಇದೇ ವೇಳೆ ತಾಪಂ ಮಾಜಿ ಸದಸ್ಯ ಶಿವಣ್ಣ, ಸಂಜಯ್ ಶರ್ಮಾ, ಮನೋಜ್ ಕುಮಾರ್, ಮಾದೇಶ, ಹರ್ಷದ್ ಜೈನ್, ಕುಲದೀಪಕ್, ಆಶೀಶ್ ಸೇರಿದಂತೆ ಇತರರಿದ್ದರು.

ಹೆಚ್.ಡಿ.ಕೋಟೆಯಲ್ಲಿ ಹಣ್ಣು-ಹಂಪಲು ವಿತರಣೆ

ಹೆಚ್.ಡಿ.ಕೋಟೆ, ಸೆ.17– ಪ್ರಧಾನಿ ಮೋದಿ ಜನ್ಮದಿನದ ಅಂಗವಾಗಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಅರಣ್ಯ ಮತ್ತು ವಿಹಾರ ಧಾಮಗಳ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ ಹಣ್ಣು–ಹಂಪಲು ವಿತರಿಸಿದರು.

ನಂತರ ಮಾತನಾಡಿದ ಅವರು, ಮೋದಿ ಹುಟ್ಟುಹಬ್ಬ ಅಂಗವಾಗಿ ಸೇವಾ ಪಾಕ್ಷಿಕ ಅಭಿಯಾನದಡಿ ಅ.2ರವರೆಗೆ ತಾಲೂಕಿನಲ್ಲಿ ವಿವಿಧ ಸೇವಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಇಂದು ಸಾಂಕೇತಿಕವಾಗಿ ಹೆಚ್.ಡಿ.ಕೋಟೆ ಮತ್ತು ಸರಗೂರು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು



ವಿತರಿಸಿದ್ದು, ಮುಂದಿನ ದಿನ ಹೆಚ್.ಡಿ.ಕೋಟೆ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ರಕ್ತದಾನ ಶಿಬಿರ, ಆರೋಗ್ಯ ತಪಾಸಣಾ ಶಿಬಿರ ಸೇರಿದಂತೆ ವಿವಿಧ ಸೇವಾ ಕಾರ್ಯ ಹಮ್ಮಿಕೊಳ್ಳುವ ಮೂಲಕ ಅರ್ಥಪೂರ್ಣವಾಗಿ ಪ್ರಧಾನಿಗಳ ಹುಟ್ಟುಹಬ್ಬ ಆಚರಿಸಲಾಗುವುದು ಎಂದರು.

ಈ ವೇಳೆ ಬಿಜೆಪಿ ತಾಲೂಕು ಅಧ್ಯಕ್ಷ ಗುರುಸ್ವಾಮಿ, ಟೌನ್ ಅಧ್ಯಕ್ಷ ನಂದೀಶ್, ಪ್ರಧಾನ ಕಾರ್ಯದರ್ಶಿ ಚನ್ನಪ್ಪ, ವಿವೇಕ್, ಸಂಚಾಲಕ ರಾಜು, ಮುಖಂಡರಾದ ವೆಂಕಟಸ್ವಾಮಿ, ಮೊತ್ತ ಬಸವರಾಜಪ್ಪ, ಯೋಗೇಶ್, ಬಸವರಾಜು, ಮಂಜುನಾಥ್, ಚಂದ್ರಮೌಳಿ, ಮಹೇಶ, ಸಿದ್ದನಾಯ್ಕ, ಮಾದೇಶ, ಸಂತೋಷ, ಲೋಕೇಶ್, ರಮೇಶ್, ಗುರುಸ್ವಾಮಿ, ಮಾದೇವಪ್ಪ ಶಿವಕುಮಾರ್, ಸೋಮೇಶ್, ಜವರಯ್ಯ, ಕುಮಾರ, ಬಿ.ಟಿ. ನರಸಿಂಹಮೂರ್ತಿ, ಅಕ್ರಮ್ ಪಾಷಾ, ಗಣಪತಿ, ಮಧು, ವಿನಯ್, ಸ್ವಾಮಿ ಇದ್ದರು.

ಮಲ್ಕುಂಡಿಯಲ್ಲಿ ಆರೋಗ್ಯ ತಪಾಸಣಾ ಶಿಬಿರ

ಮಲ್ಕುಂಡಿ, ಸೆ.17– ಮನುಷ್ಯನಿಗೆ ಆರೋಗ್ಯವೇ ಮುಖ್ಯ. ಹೀಗಾಗಿ ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಎಂದು ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್ ತಿಳಿಸಿದರು.

ನಂಜನಗೂಡು ತಾಲೂಕಿನ ಮಲ್ಕುಂಡಿಯಲ್ಲಿ ಪ್ರಧಾನಿ ಮೋದಿ ಹುಟ್ಟುಹಬ್ಬದ ಪ್ರಯುಕ್ತ ಏಷಿಯನ್ ಪೈಂಟ್ಸ್ ವತಿಯಿಂದ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜ ಆರೋಗ್ಯವಾಗಿದ್ದರೆ ಮನುಷ್ಯ ಆರೋಗ್ಯವಾಗಿರಬಹುದು. ಪ್ರತಿಯೊಬ್ಬರಿಗೂ ಆರೋಗ್ಯ ಮುಖ್ಯ ಹೀಗಾಗಿ ನಿತ್ಯ ವ್ಯಾಯಾಮ ಮಾಡುವ ಮೂಲಕ ಆರೋಗ್ಯದ ಬಗ್ಗೆ



ಎಚ್ಚರ ವಹಿಸಿ ಎಂದರು.

ಈ ವೇಳೆ ಡಾ.ಆದಿತ್ಯ, ಬಿಜೆಪಿ ಮುಖಂಡ ಎಂ.ಸಿ.ರಮೇಶ್, ಗ್ರಾಪಂ ಮಾಜಿ ಸದಸ್ಯ ಎಂ.ಎನ್.ಸತೀಶ್, ಮಹೇಶ್, ಮಾದಪ್ಪ, ಶಿವರುದ್ರ, ಮಹದೇವಯ್ಯ, ಗಣೇಶ್ ಸೇರಿದಂತೆ ಇನ್ನಿತರರಿದ್ದರು.

ಮೋದಿಯವರ ಕೋವಿಡ್ ನಿರ್ವಹಣೆ ವಿಶ್ವಕ್ಕೆ ಮಾದರಿ

ಹುಟ್ಟುಹಬ್ಬ ಶುಭಾಶಯ ತಿಳಿಸಿದ ಮುಖ್ಯಮಂತ್ರಿ ಬೊಮ್ಮಾಯಿ



ಪ್ರಧಾನಿ ಮೋದಿ ಹುಟ್ಟುಹಬ್ಬದ ಪ್ರಯುಕ್ತ ಸಿಎಂ ಬಸವರಾಜ ಬೊಮ್ಮಾಯಿ ಮಕ್ಕಳಿಗೆ ಸಿಹಿ ತಿನಿಸಿ, ಸಂಭ್ರಮಿಸಿದರು.

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿಯವರ 72ನೇ ಹುಟ್ಟುಹಬ್ಬದ ಅಂಗವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಭ ಹಾರೈಸಿದ್ದಾರೆ. ನಮ್ಮೆಲ್ಲರ ನೆಚ್ಚಿನ ನಾಯಕರು, ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರ 72ನೇ ಜನ್ಮ ದಿನಾಚರಣೆ. ಭಾರತ ದೇಶದ ವಿಶ್ವಮಾನ್ಯ ನಾಯಕರಾಗಿ ಹೊರಹೊಮ್ಮಿದ್ದಾರೆ, ಗುಜರಾತ್‌ನ ಮುಖ್ಯಮಂತ್ರಿಗಳಾಗಿ, ಪ್ರಧಾನಮಂತ್ರಿಗಳಾಗಿ ಅವರ ಸಾರ್ವಜನಿಕ ಜೀವನದಲ್ಲಿ ಹಲ ವಾರು ಕಾರ್ಯಕ್ರಮಗಳನ್ನು ಮಾಡಿದ್ದಾರೆ.

ಮೂಲಭೂತ ಸೌಕರ್ಯಗಳಿಗೆ ಒತ್ತು ನೀಡಿದ್ದಾರೆ. ಗುಜರಾತ್‌ನಲ್ಲಿ ವಿದ್ಯುಚ್ಛಕ್ತಿ, ನೀರಾವರಿ, ಕುಡಿಯುವ ನೀರು ಮತ್ತು ಸಾಮಾಜಿಕವಾಗಿ ಹಲವು ಕಾರ್ಯಕ್ರಮಗಳನ್ನು ರೂಪಿಸಿ 4 ಬಾರಿ ಮುಖ್ಯಮಂತ್ರಿಗಳಾಗಿರುವುದು ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಪ್ರಧಾನ ಮಂತ್ರಿಗಳಾಗಿ ಕಳೆದ 8 ವರ್ಷಗಳಲ್ಲಿ ಇಡೀ ಭಾರತ ದೇಶವನ್ನು ಅಭಿವೃದ್ಧಿ ಪಥದತ್ತ ಮುನ್ನಡೆಸಿದ್ದಾರೆ ಎಂದು ಸುದ್ದಿಗಾರರ ಜೊತೆ ಮಾತನಾಡುತ್ತಾ ಹೇಳಿದ್ದಾರೆ.

14 ಮಕ್ಕಳಿಗೆ ಚಿನ್ನದ ಉಂಗುರ

ಮಾಲೂರು: ಪ್ರಧಾನಿ ಮೋದಿಯವರ ಹುಟ್ಟುಹಬ್ಬವನ್ನು ದೇಶದಾದ್ಯಂತ ವಿಭಿನ್ನ ಹಾಗೂ ಅರ್ಥಪೂರ್ಣವಾಗಿ ಅವರ ಅಭಿಮಾನಿಗಳು ಆಚರಣೆ ಮಾಡಿದ್ದಾರೆ.

ಕೋಲಾರದಲ್ಲಿ ಮುಸ್ಲಿಂ ಮುಖಂಡರು ಹಾಗೂ ಮಾಲೂರು ಮಾಜಿ ಶಾಸಕ ಕೆ.ಎಸ್.ಮಂಜುನಾಥ್‌ಗೌಡ ಅಭಿಮಾನಿಗಳು ವಿಭಿನ್ನವಾಗಿ ಮೋದಿ ಹುಟ್ಟುಹಬ್ಬ ಆಚರಣೆ ಮಾಡಿದ್ದಾರೆ.

ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನಲ್ಲಿ ಜನಿಸಿದ ಮಕ್ಕಳಿಗೆ ಚಿನ್ನದ ಉಂಗುರ ಉಡುಗೊರೆ ನೀಡಲಾಗಿದೆ.

ಅಲ್ಲಿನ ಮುಸ್ಲಿಂ ಬಿಜೆಪಿ ಮುಖಂಡ ಅಸ್ಗರ್ ಹಾಗೂ ಚಂದ್ರಶೇಖರ್ ಉಂಗುರ ಉಡುಗೊರೆ ನೀಡಿದ್ದು, ಮಾಲೂರು ಪಟ್ಟಣದ ಸರ್ಕಾರಿ ಆಸ್ಪತ್ರೆ ಸೇರಿ ಖಾಸಗಿ ಆಸ್ಪತ್ರೆಯಲ್ಲಿ ಜನಿಸಿದ ಮಕ್ಕಳಿಗೆ ಉಂಗುರ ಉಡುಗೊರೆ ನೀಡುವುದರ ಜೊತೆಗೆ, ಬಾಣಂತಿಯರಿಗೆ ಹಣ್ಣು ಹಂಪಲು ನೀಡಿದ್ದಾರೆ.

ಹೀಗೆ ಮಾಲೂರು ತಾಲೂಕಿನಾದ್ಯಂತ ಜನಿಸಿದ 14 ಮಕ್ಕಳಿಗೆ ಬಿಜೆಪಿ ಮುಸ್ಲಿಂ ಮುಖಂಡ ಅಸ್ಗರ್ ಉಂಗುರ ವಿತರಣೆ ಮಾಡಿ, ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಆಡಳಿತಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಎಂಬ ಮಂತ್ರದ ಮೂಲಕ, ಆತ್ಮನಿರ್ಭರ ಮೂಲಕ, ರೈತರಿಗಾಗಿ ಕಿಸಾನ್ ಸಮ್ಮಾನ್ ಹೀಗೆ ಹಲವು ಕಾರ್ಯಕ್ರಮಗಳನ್ನು, ಯೋಜನೆಗಳನ್ನು ಮಾಡುವ ಮೂಲಕ ಎಲ್ಲಾ ಭಾರತೀಯರ ಜನಮಾನಸದಲ್ಲಿದ್ದಾರೆ. ಕೋವಿಡ್ ನಿರ್ವಹಣೆ ಇಡೀ ವಿಶ್ವಕ್ಕೆ ಮಾದರಿಯಾಗಿದೆ ಎಂದರು.

ಮುಂದಿನ ಒಂದು ತಿಂಗಳು ಸೇವಾ ತಿಂಗಳು ಎಂದು ಬೇರೆ ಬೇರೆ ಕಾರ್ಯಕ್ರಮಗಳನ್ನು, ಸೇವೆಗಳನ್ನು ರಾಜ್ಯದಲ್ಲಿ ಮಾಡಲಿದ್ದೇವೆ ಎಂದರು. ಮೋದಿಯವರ ದೂರದೃಷ್ಟಿ ಮತ್ತು ಬದ್ಧತೆ ಎಲ್ಲರಿಗೂ ಮಾದರಿ ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.



ಉದ್ಬೂರು ಗ್ರಾಮದಲ್ಲಿ 170 ಲಕ್ಷ ರೂ. ವೆಚ್ಚದಲ್ಲಿ ಸಿ.ಸಿ.ರಸ್ತೆ, ಚರಂಡಿ ನಿರ್ಮಾಣ ಹಾಗೂ 75 ಲಕ್ಷ ರೂ. ವೆಚ್ಚದಲ್ಲಿ ಗ್ರಾಮದ ಕೊಳಚೆ ನೀರು ಕೆರೆಗೆ ಸೇರುವುದನ್ನು ಚರಂಡಿ ಮೂಲಕ ಹೊರ ಹಾಕುವ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮುಖಂಡರಾದ ಉದ್ಬೂರು ಮಹದೇವಸ್ವಾಮಿ, ಗ್ರಾಮ ಪಂಚಾಯತಿ ಅಧ್ಯಕ್ಷ ಕೃಷ್ಣ, ಉಪಾಧ್ಯಕ್ಷ ಕುಮಾರ್, ಗ್ರಾಪಂ ಸದಸ್ಯರು, ಮುಖಂಡರಾದ ಬಸವರಾಜು, ಗೋವಿಂದ, ಮೂರ್ತಿ, ಪಿತಾಂಬರ, ನಾರಾಯಣ ಇನ್ನಿತರರು ಉಪಸ್ಥಿತರಿದ್ದರು.

ಪಿಯು ಕಾಲೇಜು ಮಧ್ಯಂತರ ರಜೆ ಮಾರ್ಪಡಿಸಲು ಮನವಿ

ಅ.1ರಿಂದ 14ರವರೆಗೆ ಬದಲು ಸೆ.26ರಿಂದ ಅ.10ರವರೆಗೆ ರಜೆ ನೀಡಲು ಕೋರಿಕೆ

ಮೈಸೂರು,ಸೆ.17(ಎಸ್‌ಪಿಎನ್)–ಮೈಸೂರು ಜಿಲ್ಲಾ ವ್ಯಾಪ್ತಿಯ ಪದವಿ ಪೂರ್ವ ಕಾಲೇಜುಗಳಿಗೆ ಮಧ್ಯಂತರ ರಜೆ(ದಸರಾ)ಯನ್ನು ಅ.1ರಿಂದ ಅ.14ರವರೆಗೆ ನೀಡಲಾಗಿದ್ದು, ಇದನ್ನು ಮಾರ್ಪಡಿಸಿ ಸೆ.26ರಿಂದ 10ರವರೆಗೆ ನೀಡಬೇಕೆಂದು ರಾಜ್ಯ ಪಿಯು ಕಾಲೇಜುಗಳ ಉಪನ್ಯಾಸಕರ ಸಂಘದ ಜಿಲ್ಲಾ ಘಟಕ ಡಿಸಿಗೆ ಮನವಿ ಸಲ್ಲಿಸಿದೆ. ಜಿಲ್ಲೆಯಲ್ಲಿ ಎಂದಿನಂತೆ ಅ.1ರಿಂದ 15ರವರೆಗೆ ದಸರೆ ರಜೆ ನೀಡಲಾಗಿದೆ. ನಮ್ಮ ಜಿಲ್ಲೆಯಲ್ಲಿ ಸೆ.26ರಿಂದ ದಸರಾ ಮಹೋತ್ಸವವನ್ನು ವಿಜೃಂಭಣೆಯಿಂದ ನಾಡಹಬ್ಬವಾಗಿ ಆಚರಿಸಲಾಗುತ್ತಿದೆ. ಈ ಪ್ರಯುಕ್ತ ಯುವ ಸಂಭ್ರಮ, ಯುವ ದಸರಾ, ದಸರಾ ಕ್ರೀಡೆ, ಮಹಿಳಾ ಮತ್ತು ಮಕ್ಕಳ ದಸರಾ, ರೈತ ದಸರಾ, ಕುಸ್ತಿ ಸೇರಿದಂತೆ ಇತರೆ ಕಾರ್ಯಕ್ರಮಗಳು ನಡೆಯಲಿವೆ.

ಈ ಕಾರ್ಯಕ್ರಮದಲ್ಲಿ ನಮ್ಮ ವಿದ್ಯಾರ್ಥಿಗಳು ಪಾಲ್ಗೊಂಡು ದಸರಾ ವೀಕ್ಷಣೆಗೂ ತೆರಳಲಿದ್ದಾರೆ. ಜೊತೆಗೆ ದಸರಾ ಬಂದೋಬಸ್ತ್‌ಗೆ ವಿವಿಧ ಜಿಲ್ಲೆಗಳಿಂದ ಆಗಮಿಸುವ ಪೊಲೀಸ್ ಸಿಬ್ಬಂದಿ ನಗರ ವಿವಿಧ ಕಾಲೇಜುಗಳಲ್ಲಿ ವಾಸ್ತವ್ಯ ಹೂಡಲಿದ್ದು, ಈ ವೇಳೆ ತರಗತಿಗಳನ್ನು ನಡೆಸುವುದು ಕಷ್ಟವಾಗಲಿದೆ. ಹಾಗೆಯೇ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರು ಮಧ್ಯಂತರ ರಜೆ ಮಾರ್ಪಡಿಸುವ ಅಧಿಕಾರವನ್ನು ರಾಜ್ಯದ ಆಯಾಯ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ ಎಂದು ಮನವಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾ ವ್ಯಾಪ್ತಿಯ ಪಿಯು ಕಾಲೇಜು ಮಧ್ಯಂತರ ರಜೆಯನ್ನು ಅ.1ರಿಂದ ಅ.14ರವರೆಗೆ ನೀಡಿರುವ ರಜೆಯನ್ನು ಸೆ.26ರಿಂದ ಅ.10ರವರೆಗೆ ಮಾರ್ಪಡಿಸಿ ರಜೆ ನೀಡುವಂತೆ ಸಂಘ ಅಧ್ಯಕ್ಷ ಎಂ.ಎಂ.ಮಹದೇವ, ಪ್ರಧಾನ ಕಾರ್ಯದರ್ಶಿ ಮಂಜೇಗೌಡ ಸೇರಿದಂತೆ ಇತರೆ ಪದಾಧಿಕಾರಿಗಳು ಮನವಿ ಪತ್ರ ಸಲ್ಲಿಸಿದ್ದಾರೆ. ಈ ವೇಳೆ ಪದಾಧಿಕಾರಿಗಳಾದ ಶ್ರೀನಿವಾಸ, ಶಿವಕುಮಾರ ಉಪಸ್ಥಿತರಿದ್ದರು.

ಮೈಸೂರಲ್ಲಿ ಮಟ್ಕಾ ದಂಧೆ ಅಡ್ಡೆ ಮೇಲೆ ಸಿಸಿಬಿ ದಾಳಿ; ಇಬ್ಬರ ಬಂಧನ

ಮೈಸೂರು,ಸೆ.17(ಎಸ್‌ಪಿಎನ್)–ಮೈಸೂರು ನಗರದಲ್ಲಿ ಅಲ್ಲಲ್ಲಿ ಮಟ್ಕಾ ದಂಧೆ ನಡೆಯುತ್ತಿದ್ದು, ಎರಡು ಪ್ರತ್ಯೇಕ ಮಟ್ಕಾ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಬಂಧಿತರಿಂದ 90 ಸಾವಿರ ರೂ. ನಗದನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಮಂಡಿ ಮೊಹಲ್ಲಾ ಪುಲಕೇಶಿ ರಸ್ತೆಯಲ್ಲಿರುವ ಕರ್ನಾಟಕ ಆಟೋ ಕುಷನ್ ವರ್ಕ್ಸ್ ಅಂಗಡಿ ಮೇಲೆ ಖಚಿತ ಮಾಹಿತಿ ಮೇರೆಗೆ ಸೆ.12ರಂದು ದಾಳಿ ನಡೆಸಿ ಮಟ್ಕಾದಂಧೆಯಲ್ಲಿ ತೊಡಗಿದ್ದ ವ್ಯಕ್ತಿಯನ್ನು ಬಂಧಿಸಲಾಗಿದ್ದು, ಈತನಿಂದ 70 ಸಾವಿರ ರೂ. ನಗದನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಸೆ.15ರಂದು ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಕೆ.ಎನ್.ಪುರ ಟೆಂಟ್ ರಸ್ತೆಯಲ್ಲಿರುವ ಆರ್‌ಜೆ ಟೀ ಸ್ಟಾಲ್ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ, ಆರೋಪಿಯನ್ನು ಬಂಧಿಸಿ, ಈತನಿಂದ 4 ಮಟ್ಕಾ ಚೀಟಿ ಮತ್ತು 20 ಸಾವಿರ ರೂ. ನಗದನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ. ಪತ್ತೆ ಕಾರ್ಯದಲ್ಲಿ ಮೈಸೂರು ನಗರ ಕೇಂದ್ರಸ್ಥಾನ, ಅಪರಾಧ ಮತ್ತು ಸಂಚಾರ ವಿಭಾಗ ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ, ಸಿಸಿಬಿ ಘಟಕದ ಎಸಿಪಿ ಸಿ.ಕೆ.ಅಶ್ವಥನಾರಾಯಣ ಮಾರ್ಗದರ್ಶನದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಎ.ಮಲ್ಲೇಶ್, ಎಎಸ್‌ಐ ರಾಜು, ಸಿಬ್ಬಂದಿಗಳಾದ ಎಸ್.ರವಿಕುಮಾರ್, ಬಿ.ರಾಧೇಶ್, ಸುಬಾನಲ್ಲಾ, ಬಾಲ್‌ದಾರ್, ಕೆ.ಜಿ.ಶ್ರೀನಿವಾಸ್ ಪಾಲ್ಗೊಂಡಿದ್ದರು.

ನಿಧನ

ಎಂ.ಎಸ್.ಪ್ರಕಾಶ್



ಮೈಸೂರು, ಸೆ.17– ಮೈಸೂರಿನ ವಿಕ್ರಾಂತ್ ಟೈರ್ಸ್ ಕಾರ್ಖಾನೆಯ ಕಾರ್ಮಿಕರ ಸಂಘದ ಮಾಜಿ ಉಪಾಧ್ಯಕ್ಷರು ಮತ್ತು ಜಯನಗರದ ನಿವಾಸಿ ಎಂ.ಎಸ್.ಪ್ರಕಾಶ್ (ಭೀಮೇಶ್) ಅವರು ಶನಿವಾರ ಮಧ್ಯಾಹ್ನ ಹೃದಯಾಘಾತದಿಂದ ನಿಧನರಾದರು. ಅವರಿಗೆ 61 ವರ್ಷ ವಯಸ್ಸಾಗಿತ್ತು. ಇವರು ಪತ್ನಿ, ಪುಟ್ಟಮ್ಮ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸಂಜೆ ವೇಳೆಗೆ ಚಿಕ್ಕಹರದನಹಳ್ಳಿಯಲ್ಲಿರುವ (ಅರವಿಂದನಗರ ಸಮೀಪ) ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.